ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 9 ಸೋಮವಾರ 2025

ಸಂಪುಟ: 46 | ಸಂಚಿಕೆ: 54 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬೆಂಗಳೂರಿನ ಕಾಲ್ತುಳಿತ ದುರಂತ ಪ್ರಕರಣ: ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿಯ ಪ್ರತಿಕ್ರಿಯೆ

ಚಿನ್ನಸ್ವಾಮಿ ಸ್ಟೇಡಿಯಂ ಕಾರ್ಯಕ್ರಮ; ದುರಂತದಲ್ಲಿ 11 ಮಂದಿಯ ಸಾವಿನ ಬಗ್ಗೆ ತಕ್ಷಣ

ಯಾರೂ ನನಗೆ ಮಾಹಿತಿಯನ್ನ ನೀಡಿಲ್ಲ

- ಮುಖ್ಯ ಕಾರ್ಯದರ್ಶಿ ಕರೆದಿದ್ದರಿಂದ ವಿಧಾನಸೌಧ ಮುಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡೆ
- ಪೊಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದರಿಂದಲೇ ಅವರ ವಿರುದ್ಧ ಕ್ರಮ ಕೈಗೊಂಡಿದ್ದೇವೆ
- ಕ್ರಿಕೆಟ್ ಅಸೋಸಿಯೇಷನ್‌ನವರು ಕಾರ್ಯಕ್ರಮ ಆಯೋಜಿಸಿದ್ದರು; ಪೊಲೀಸರು ಭದ್ರತೆ ಕೊಡಬೇಕಿತ್ತಲ್ವಾ!

ಮೈಸೂರು, ಜೂ.8(ಎಂಕೆ)– ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ದುರಂತ ಪ್ರಕರಣದಲ್ಲಿ ನಾವೇನೂ ತಪ್ಪು ಮಾಡಿಲ್ಲ. ಸ್ಟೇಡಿಯಂ ಕಾರ್ಯಕ್ರಮಕ್ಕೆ ಬಂದೋಬಸ್ತ್ ಮಾಡಿರುವ ಬಗ್ಗೆ ನನಗೆ ಮಾಹಿತಿ ನೀಡಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸೌಧದ ಎದುರು ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ರಾಜ್ಯಪಾಲರು ಬರುತ್ತಾರೆ ಎಂದು ಮುಖ್ಯ ಕಾರ್ಯದರ್ಶಿಗಳು ಬಂದು ಕರೆದಾಗ ನಾನೂ ಭಾಗವಹಿಸಿದೆ. ಆದರೆ, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಾರ್ಯಕ್ರಮ ಆಯೋಜನೆ ಸಂಬಂಧ ಬಂದೋಬಸ್ತ್ ಬಗ್ಗೆ ಸರ್ಕಾರದ ಮುಖ್ಯಸ್ಥರಿಗೆ ತಿಳಿಸಬೇಕಿತ್ತಲ್ವಾ, ಆದರೆ, ನನಗೆ ಯಾರೂ ಮಾಹಿತಿಯನ್ನೇ ನೀಡಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ಅಂದು ಮಧ್ಯಾಹ್ನ 3.50ಕ್ಕೆ ಕಾಲ್ತುಳಿತ ಸಂಭವಿಸಿ, 11 ಮಂದಿ ಸಾವನ್ನಪ್ಪಿದ್ದರ ಬಗ್ಗೆ 5.45ಕ್ಕೆ ನನಗೆ ಮಾಹಿತಿ ನೀಡಿದರು. ಈ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು ತಪ್ಪು ಮಾಡಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ನ್ಯಾಯಾಂಗ ತನಿಖೆಗೂ ಆದೇಶ ಮಾಡುವ ಮೂಲಕ ಸರಕಾರ ದಿಟ್ಟ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರು.

ಪೊಲೀಸರಿಂದ ಸರ್ಕಾರಕ್ಕೆ ಪತ್ರ: ಡಿಕೆಶಿ ಮೌನ ನಡೆ

ಬೆಂಗಳೂರು: ಪೊಲೀಸರು ಸರ್ಕಾರಕ್ಕೆ ಬರೆದ ಪತ್ರದ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಯಾವುದೇ ಉತ್ತರ ನೀಡದೇ ಡಿಸಿಎಂ ಡಿಕೆ ಶಿವಕುಮಾರ್ ತೆರಳಿದ ಪ್ರಸಂಗ ಇಂದು ನಡೆಯಿತು.



ವಿಧಾನಸೌಧದಲ್ಲಿ ಆರ್‌ಸಿಬಿ ವಿಜಯೋತ್ಸವ ಆಚರಣೆಗೆ ಅವಕಾಶ ನೀಡಿದರೆ ಬಂದೋಬಸ್ತ್‌ಗೆ ಸಮಸ್ಯೆಯಾಗುತ್ತದೆ ಎಂದು ವಿಧಾನಸೌಧದ ಡಿಸಿಪಿ ಕರಿಬಸವನಗೌಡ ಅವರು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಕಾರ್ಯದರ್ಶಿ ಸತ್ಯವತಿ ಅವರಿಗೆ ಪತ್ರ ಬರೆಯುವ ಮೂಲಕ ಸ್ಪಷ್ಟವಾಗಿ ತಿಳಿಸಿದ್ದರು.

ಪತ್ರದ ಬಗ್ಗೆ ಬಿಜೆಪಿಯವರು ಒಂದು ಕಡೆ ಪ್ರತಿಭಟನೆ ಮಾಡುತ್ತಿದ್ದರೆ ಇನ್ನೊಂದು ಕಡೆ ಪೊಲೀಸರು ಸರ್ಕಾರಕ್ಕೆ ಬರೆದ ಪತ್ರ ಬಹಿರಂಗವಾಗಿದೆ. ಇದಕ್ಕೆ ಏನು ಹೇಳುತ್ತೀರಿ ಎಂದು ಮಾಧ್ಯಮದ ಪ್ರಶ್ನೆಗೆ ಡಿಕೆಶಿ ಯಾವುದೇ ಉತ್ತರ ನೀಡದೇ ಕಾರಿನಲ್ಲಿ ಮುಂದೆ ಸಾಗಿದರು.



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರೊಂದಿಗೆ ಮಾತನಾಡಿದರು.

ಮೊದಲು ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಹೀಗಾಗಿ ರಾಜ್ಯ ಸರಕಾರದ ಕಾರ್ಯದರ್ಶಿ ಜಿ.ಸತ್ಯವತಿಯವರ ಮೇಲೆ ಯಾವ ಕಾರಣಕ್ಕೆ ಕ್ರಮ ಕೈಗೊಳ್ಳೋಣ. ಘಟನೆ ನಡೆದಿರುವುದು ಕ್ರೀಡಾಂಗಣದಲ್ಲಿ. ಅಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಕ್ರಿಕೆಟ್ ಅಸೋಸಿಯೇಷನ್‌ನವರು ಹಾಗೂ ಭದ್ರತೆ ಕಲ್ಪಿಸಬೇಕಾಗಿರುವುದು ಪೊಲೀಸರ ಕರ್ತವ್ಯವಾಗಿದೆ. ಹೀಗಾಗಿ ಅವರ ಮೇಲೆ ಕ್ರಮ ಜರುಗಿಸುವ ಕೆಲಸ ಮಾಡಿದ್ದೇವೆ. ಅಲ್ಲಿ ಪೊಲೀಸರು ತಪ್ಪು ಮಾಡಿದ್ದಾರೆ. ಸರಕಾರದ ಮುಖ್ಯಸ್ಥನಿಗೆ ಘಟನೆಯ ಬಗ್ಗೆ ಮಾಹಿತಿ ತಿಳಿಸಿದ್ದಾರಾ? ತಿಳಿಸಬೇಕೋ ಬೇಡವೋ? ತಿಳಿಸಬೇಕಿತ್ತಲ್ಲವಾ ಎಂದರು. ಬಿಜೆಪಿಯವರು ರಾಜಕೀಯವಾಗಿ ಮಾತನಾಡುತ್ತಿದ್ದಾರೆ. ಈ ವಿಚಾರದಲ್ಲಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಕೇಂದ್ರ ಸಚಿವ ■ 6ನೇ ಪುಟಕ್ಕೆ

ವಿಧಾನಸೌಧದ ಮುಂದೆ ಕಾರ್ಯಕ್ರಮಕ್ಕೆ ಭದ್ರತಾ ಮುಖ್ಯಸ್ಥರ ವಿರೋಧ!

ಅಧಿಕಾರಿಯ ಸಲಹೆ ಧಿಕ್ಕರಿಸಿ ಕಾರ್ಯಕ್ರಮ ನಡೆಸಿದ್ದ ಸರ್ಕಾರ!

ಸರ್ಕಾರಕ್ಕೆ ಭಾರಿ ಇರಿಸು–ಮುರಿಸು

ಬೆಂಗಳೂರು: ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಕಾಲ್ತುಳಿತ ದುರಂತ ಸಂಭವಿಸಿ, ಮೂರು ದಿನಗಳ ನಂತರ, ವಿಧಾನಸೌಧದ ಭದ್ರತಾ ಮುಖ್ಯಸ್ಥರು ಆರ್‌ಸಿಬಿ ಸನ್ಮಾನ ಕಾರ್ಯಕ್ರಮವನ್ನು ವಿರೋಧಿಸಿ ಸರ್ಕಾರಕ್ಕೆ ಬರೆದ ಪತ್ರ ಈಗ ಬಹಿರಂಗ ಆಗಿದೆ.

ಆರ್‌ಸಿಬಿ ಆಟಗಾರರಿಗೆ ಸನ್ಮಾನ ಕಾರ್ಯಕ್ರಮ ನಡೆಸುವುದರಿಂದ ಉಂಟಾಗುವ ಅಪಾಯಗಳ ಬಗ್ಗೆ ಮುಂಚಿತವಾಗಿ ಎಚ್ಚರಿಕೆ ನೀಡಿತ್ತು. ಹಿರಿಯ ಪೊಲೀಸ್ ಅಧಿಕಾರಿಗಳ ವಿರೋಧದ ಹೊರತಾಗಿಯೂ, ಈ ಕಾರ್ಯಕ್ರಮವನ್ನು ನಡೆಸಲಾಯಿತು. ಇದರ ಪರಿಣಾಮವಾಗಿ ಇಬ್ಬರು ಅಪ್ರಾಪ್ತರು ಸೇರಿದಂತೆ 11 ಜನರು ಸಾವಿಗೀಡಾಗಿದ್ದರು ಮತ್ತು ಹಲವರು ಗಾಯಗೊಂಡರು.

ಜೂನ್ 4 ರಂದು ಉಪ ಪೊಲೀಸ್ ಆಯುಕ್ತ (ವಿಧಾನಸೌಧ ಭದ್ರತೆ) ಎಂ.ಎನ್. ಕರಿಬಸವನಗೌಡ ಅವರು ಬರೆದ ಪತ್ರದಲ್ಲಿ, ಸಿಬ್ಬಂದಿ ಕೊರತೆ ಮತ್ತು ಜನಸಂದಣಿಯನ್ನು ನಿರ್ವಹಿಸುವಲ್ಲಿನ ಸವಾಲುಗಳ ಬಗ್ಗೆ ಎಚ್ಚರಿಸಿದ್ದಾರೆ.

ಹಿರಿಯ ಅಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಜಿ ಸತ್ಯವತಿ ಮತ್ತು ಇತರ ಉನ್ನತ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ, 'ಆರ್‌ಸಿಬಿಗೆ ದೇಶದಾದ್ಯಂತ ಅಭಿಮಾನಿಗಳಿದ್ದಾರೆ ಮತ್ತು ನಾವು ವಿಧಾನ ಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮವನ್ನು ಆಯೋಜಿಸಿದರೆ, ಲಕ್ಷಾಂತರ ಕ್ರಿಕೆಟ್ ಅಭಿಮಾನಿಗಳು ಸೇರಬಹುದು. ಭದ್ರತಾ ಸಿಬ್ಬಂದಿ ಕೊರತೆ ಇರುವುದರಿಂದ, ಸರಿಯಾದ ಬಂದೋಬಸ್ತ್ ವ್ಯವಸ್ಥೆ ಮಾಡುವುದು ಸವಾಲಿನ ಕೆಲಸವಾಗಿರುತ್ತದೆ' ಎಂದು ಬರೆದಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳ ಪ್ರಕಾರ, ಆರ್‌ಸಿಬಿ ಗೆಲುವಿನ ನಂತರ ನಗರದಲ್ಲಿನ ಸಂಭ್ರಮಾಚರಣೆ ನಡೆಯುತ್ತಿದ್ದ ಸ್ಥಳಗಳಲ್ಲಿ ಪೊಲೀಸರು ನಿಗಾ ವಹಿಸಿದ್ದರು ಮತ್ತು ■ 6ನೇ ಪುಟಕ್ಕೆ

ಇನ್ಮುಂದೆ ಶಾಲೆಗಳಲ್ಲಿ ಟ್ರಾಫಿಕ್ ಪಾಠ!

ಬೆಂಗಳೂರು: ರಸ್ತೆ ಸುರಕ್ಷತೆ ಮತ್ತು ಟ್ರಾಫಿಕ್ ಬಗ್ಗೆ ಶಾಲಾ ಪಠ್ಯಪುಸ್ತಕದಲ್ಲಿ ಪಾಠ ಅಳವಡಿಕೆ ಕುರಿತು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ



ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಿಗೆ ಅನ್ವಯಿಸುವಂತೆ 2, 4, 6, 7, 9ನೇ ತರಗತಿಯ ಮಕ್ಕಳಿಗೆ ಸಂಚಾರ ಸುರಕ್ಷತೆ ಕುರಿತು ಪಠ್ಯ ಅಳವಡಿಸಲಾಗುತ್ತಿದೆ.

ಪೋಷಕರು ಒಪ್ಪುತ್ತಾರಾ: ಈಗಾಗಲೇ ಇರುವ ವಿಷಯಗಳಿಗೆ ಶಿಕ್ಷಕರ ಕೊರತೆ ಒಂದೆಡೆ ಆದರೆ ಅತಿಥಿ ಶಿಕ್ಷಕರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡಲು ಸಮಸ್ಯೆಯಾಗಿದೆ. ಪಠ್ಯ ಸೇರಿಸುವ ಮೊದಲು ಪೋಷಕರೊಂದಿಗೆ ಹಾಗೂ ಶಿಕ್ಷಣ ಸಂಘಟನೆಗಳೊಂದಿಗೆ ಯಾವುದೇ ■ 6ನೇ ಪುಟಕ್ಕೆ

ಪರಿಷತ್‌ಗೆ ಶಿಫಾರಸ್ಸಾಗಿದ್ದ 4 ಹೆಸರುಗಳಿಗೆ ಹೈಕಮಾಂಡ್ ಬ್ರೇಕ್!

ಬೆಂಗಳೂರು: ವಿಧಾನಪರಿಷತ್‌ಗೆ ಶಿಫಾರಸ್ಸಾಗಿದ್ದ 4 ಹೆಸರುಗಳಿಗೆ ಕಾಂಗ್ರೆಸ್ ಹೈಕಮಾಂಡ್ ಕೊನೆ ಕ್ಷಣದಲ್ಲಿ ತಾತ್ಕಾಲಿಕ ತಡೆಯನ್ನು ವಿಧಿಸಿದೆ.


ರಾಜ್ಯ ವಿಧಾನಪರಿಷತ್‌ನ ನಾಲ್ಕು ಖಾಲಿ ಸ್ಥಾನಗಳಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಮುಖ್ಯಮಂತ್ರಿಗಳ ಮಾಜಿ ಮಾಧ್ಯಮ ಸಲಹೆಗಾರ ಹಾಗೂ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು, ದಲಿತ ಮುಖಂಡ ಡಿ.ಜಿ. ಸಾಗರ್ ಹಾಗೂ ರಾಜ್ಯ ಸರಕಾರದ ಅನಿವಾಸಿ ಭಾರತೀಯ ಕೋಶದ ಉಪಾಧ್ಯಕ್ಷೆ ಆರತಿ ಕೃಷ್ಣ ಅವರನ್ನು ನಾಮನಿರ್ದೇಶನ ಮಾಡಲು ಹೈಕಮಾಂಡ್ ಶಿಫಾರಸು ಮಾಡಿತ್ತು.

ಹೈಕಮಾಂಡ್ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರಿಗೆ ಕಳುಹಿಸಲು ನಾಲ್ವರ ಹೆಸರಿದ್ದ ಶಿಫಾರಸ್ಸು ಪತ್ರಕ್ಕೆ ಸಿಎಂ ಸಿದ್ದರಾಮಯ್ಯ ಸಹಿ ಹಾಕಿದ್ದರು. ಈಗ ಹೈಕಮಾಂಡ್ ದಿಢೀರ್ ಮಧ್ಯಪ್ರವೇಶಿಸಿ ರಾಜ್ಯಪಾಲರಿಗೆ ಕಳುಹಿಸದಂತೆ ಸಿಎಂ ಸಿದ್ದರಾಮಯ್ಯನವರಿಗೆ ಸೂಚಿಸಿದೆ. ರಾಜ್ಯದ ಕಾಂಗ್ರೆಸ್ ನಾಯಕರ ತೀವ್ರ ಒತ್ತಡದ ಹಿನ್ನೆಲೆಯಲ್ಲಿ ಕಡೆಗಳಿಗೆಯಲ್ಲಿ ಎಐಸಿಸಿಯೇ ತಡೆ ಹಿಡಿಯುವಂತೆ ಸೂಚಿಸಿದೆ.

ನೀರಿನ ತೊಟ್ಟಿಯಲ್ಲಿ ಮುಳುಗಿಸಿ ಮಗಳ ಕೊಂದ ತಾಯಿ



ಮಗಳು ಸಾನ್ವಿ



ತಾಯಿ ಶ್ವೇತಾ

ಹಾಸನ, ಜೂ.8– ನೀರಿನ ತೊಟ್ಟಿಯಲ್ಲಿ ಮುಳುಗಿಸಿ 6 ವರ್ಷದ ಮಗಳನ್ನೇ ತಾಯಿ ಹತ್ಯೆ ಮಾಡಿರುವ ಹೃದಯ ವಿದ್ರಾವಕ ಘಟನೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಜಿನ್ನೇನಹಳ್ಳಿಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಸಾನ್ವಿ (6) ತಾಯಿಯಿಂದಲೇ ಕೊಲೆಯಾದ ಮಗು. ಶ್ವೇತಾ (36) ಮಗಳನ್ನೇ ಕೊಂದ ತಾಯಿ. ಕಳೆದ 7 ವರ್ಷಗಳ ಹಿಂದೆ ಶಿವಮೊಗ್ಗದ ರಘು ಎಂಬುವರ ಜೊತೆ ಶ್ವೇತಾ ವಿವಾಹವಾಗಿದ್ದರು. ಆರಂಭದಿಂದಲೂ ಗಂಡ–ಹೆಂಡತಿ ನಡುವೆ ಜಗಳ ನಡೆಯುತ್ತಿತ್ತು. ಕಳೆದ ನಾಲ್ಕು ವರ್ಷಗಳಿಂದ ಸಾನ್ವಿಯನ್ನು ರಘು ಪೋಷಕರು ಸಾಕುತ್ತಿದ್ದರು. ಗಂಡನಿಂದ ದೂರವಾಗಿ ಶ್ವೇತಾ ಕಳೆದ ಐದು ವರ್ಷಗಳಿಂದ ತವರು ಮನೆಯಲ್ಲಿದ್ದರು. ವಿಚ್ಛೇದನಕ್ಕೂ ಅರ್ಜಿ ಸಲ್ಲಿಸಿದ್ದರು. ಕುಟುಂಬಸ್ಥರು ಹಲವು ಬಾರಿ ರಾಜೀ ಸಂಧಾನ ಮಾಡಿದ್ದರು. ■ 6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ: ಬೆಂಗಳೂರಿನ ಇಬ್ಬರು ಸಾವು

- ಮದ್ದೂರು ಬಳಿ ಘಟನೆ; ಹಲವರಿಗೆ ಗಾಯ
- ಮೈಸೂರಿಗೆ ಬರುತ್ತಿದ್ದ ಸ್ಕೋಡಾ ಕಾರು ಡಿವೈಡರ್ ಹಾರಿ ಇಟಿಯಾಸ್, ಇನ್ನೋವಾಗೆ ಡಿಕ್ಕಿ
- 4 ಕಿ.ಮೀ. ಟ್ರಾಫಿಕ್ ಜಾಮ್; ವಾಹನ ಚಾಲಕರು, ಸವಾರರ ಪರದಾಟ
- ಪ್ರತ್ಯೇಕ ಪ್ರಕರಣಗಳಲ್ಲಿ ಭಾರತೀನಗರ ಬಳಿ ಈಜಲು ಹೋದ ಯುವಕರ ಸಾವು; ಶ್ರೀರಂಗಪಟ್ಟಣ ಬಳಿ ಬೈಕ್ ಸವಾರ ಸಾವು

ಮಂಡ್ಯ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ಇಬ್ಬರು ಸಾವನ್ನಪ್ಪಿ, ಇಬ್ಬರು ಮಕ್ಕಳು ಸೇರಿದಂತೆ ಐವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮದ್ದೂರು ಬಳಿಯ ಅಗರಲಿಂಗನದೊಡ್ಡಿ ಗ್ರಾಮದ ಬಳಿ ಭಾನುವಾರ ರಾತ್ರಿ ಸಂಭವಿಸಿದೆ.

ಬೆಂಗಳೂರಿನ ಮಕ್ಸೂದ್, ಅಯಾನ್ ಸಾವನ್ನಪ್ಪಿದ್ದು, ಗಾಯಗೊಂಡಿರುವ ಖುಷಿ, ಚಿಕ್ಕು, ಮುಜಾಯಿದ್ ಪಾಷ, ಮಾಗಡಿಯ ಬಸವರಾಜು ಮತ್ತು ಇವರ ಪತ್ನಿ ಪಾರ್ವತಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಸ್ಕೋಡಾ ಕಾರು ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್ ಹಾರಿ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಇಟಿಯಾಸ್



ಶ್ರೀರಂಗಪಟ್ಟಣ ಬಳಿ ದುರಂತ.

ಮತ್ತು ಇನ್ನೋವಾ ಕಾರುಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೋಡಾ ಕಾರಿನಲ್ಲಿದ್ದ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತದ ತೀವ್ರತೆಗೆ ಹಲವರು ಗಾಯಗೊಂಡಿದ್ದು, ಅವರುಗಳನ್ನು ಚನ್ನಪಟ್ಟಣದ ಚಾಮುಂಡೇಶ್ವರಿ ಆಸ್ಪತ್ರೆ ಮತ್ತು ಮದ್ದೂರು ತಾಲೂಕು ಆಸ್ಪತ್ರೆಗೆ ಸೇರಿಸಲಾಗಿದೆ. ಅಪಘಾತದಿಂದ ಸ್ಕೋಡಾ ಕಾರು ಸಂಪೂರ್ಣ ಜಖಂಗೊಂಡಿದೆ.

ಅಪಘಾತದಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ವಾಹನಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದರಿಂದ ವಾಹನಗಳು ಸಂಚರಿಸಲಾಗದೇ ಸುಮಾರು 4 ಕಿಲೋಮೀಟರ್‌ಗೂ ಹೆಚ್ಚು ಟ್ರಾಫಿಕ್ ಜಾಮ್ ಉಂಟಾಗಿದ್ದು, ವಾಹನ ಚಾಲಕರು, ಸವಾರರು ಪರದಾಡುವಂತಾಯಿತು. ವಿಷಯ ತಿಳಿದು ಸ್ಥಳಕ್ಕೆ ಮದ್ದೂರು ಸಂಚಾರಿ ಪೊಲೀಸರು ತೆರಳಿ ವಾಹನಗಳನ್ನು ತೆರವುಗೊಳಿಸಲು ಹರಸಾಹಸ ಪಡಬೇಕಾಯಿತು. ನಂತರ ಗಾಯಾಳುಗಳನ್ನು ಆಸ್ಪತ್ರೆಗೂ, ಮೃತದೇಹಗಳನ್ನು ಶವಾಗಾರಕ್ಕೆ ಸಾಗಿಸಿ ■ 6ನೇ ಪುಟಕ್ಕೆ

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ: ತನಿಖೆ ಎನ್‌ಐಎಗೆ

ಬೆಂಗಳೂರು: ಮಂಗಳೂರಿನಲ್ಲಿ ನಡೆದ ಹಿಂದೂ ಕಾರ್ಯಕರ್ತ ಮತ್ತು ಮೊಹಮ್ಮದ್ ಫಾಜಿಲ್ ಹತ್ಯೆಯ ಆರೋಪಿ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ನಡೆಸಲಿದೆ. ಕೇಂದ್ರ ಗೃಹ ಸಚಿವಾಲಯ ಭಾನುವಾರ ಈ ಸಂಬಂಧ ಆದೇಶ ಹೊರಡಿಸಿದೆ. ಸುಮಾರು ಒಂದು ತಿಂಗಳ ಹಿಂದೆ ನಡೆದ ಈ ಕೊಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉದ್ವಿಗ್ನತೆಯ ವಾತಾವರಣವನ್ನು ಸೃಷ್ಟಿಸಿತ್ತು. ಪ್ರಕರಣದಲ್ಲಿ ಪ್ರಮುಖ ಆರೋಪಿ ಸೇರಿದಂತೆ ಎಂಟು ಜನರನ್ನು ಇಲ್ಲಿಯವರೆಗೆ ಬಂಧಿಸಲಾಗಿದೆ.



ಸುಹಾಸ್ ಶೆಟ್ಟಿ

2025ರ ಆರಂಭದಲ್ಲಿ ಮಂಗಳೂರಿನಲ್ಲಿ 42 ವರ್ಷದ ಸುಹಾಸ್ ಶೆಟ್ಟಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು. ಈ ಘಟನೆಯ ನಂತರ, ಇಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪರಿಸ್ಥಿತಿ ಉದ್ವಿಗ್ನವಾಯಿತು. ವಿಶ್ವ ಹಿಂದೂ ಪರಿಷತ್ ಮತ್ತು ಇತರ ಹಿಂದೂ ಸಂಘಟನೆಗಳು ಮೇ 3 ರಂದು ಜಿಲ್ಲಾದ್ಯಂತ ಬಂದ್‌ಗೆ ಕರೆ ನೀಡಿದ್ದವು. ಪ್ರತಿಭಟನೆ ವೇಳೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಪಟ್ಟುಹಿಡಿದಿದ್ದವು.

ಸುಹಾಸ್ ಶೆಟ್ಟಿ ಹತ್ಯೆಗೆ ಸಂಬಂಧಿಸಿದಂತೆ ರಾಜಕೀಯ ಮಟ್ಟದಲ್ಲಿಯೂ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ದಕ್ಷಿಣ ಕನ್ನಡದ ಬಿಜೆಪಿ ಸಂಸದ ಮತ್ತು ಪಕ್ಷದ ರಾಜ್ಯ ಕಾರ್ಯದರ್ಶಿ ಬ್ರಿಜೇಶ್ ಚೌಟ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದು ಪ್ರಕರಣದ ತನಿಖೆಯನ್ನು ■ 6ನೇ ಪುಟಕ್ಕೆ

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ದುರಂತ; ಸರ್ಕಾರದ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ

ಸಿಎಂ, ಡಿಸಿಎಂ 'ಆರ್‌ಸಿಬಿ ಅಂಬಾಸಿಡರ್'ಗಳಂತೆ ವರ್ತನೆ!



ವಿಧಾನಸೌಧದ ಪಕ್ಕದಲ್ಲಿರುವ ಗಾಂಧಿ ಪ್ರತಿಮೆ ಬಳಿ ಬಿಜೆಪಿ ನಾಯಕರು ಭಾನುವಾರ ಪ್ರತಿಭಟನೆ ನಡೆಸಿದರು.

ಬೆಂಗಳೂರು: ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವಿಗೀಡಾಗಿದ್ದು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಬಿಜೆಪಿ ಶಾಸಕರು ಮತ್ತು ಸಂಸದರು ಭಾನುವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ನಡೆದ ಪ್ರತಿಭಟನೆಯ ನೇತೃತ್ವವನ್ನು ವಿಧಾನಸಭೆ ಮತ್ತು ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ವಹಿಸಿದ್ದರು.

ಈ ದುರಂತಕ್ಕೆ ಇಬ್ಬರು ಹಿರಿಯ ಕಾಂಗ್ರೆಸ್ ನಾಯಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ನಾಯಕರು ಒತ್ತಾಯಿಸಿದರು. ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ, ಪ್ರತಿಭಟನಾಕಾರರು ಸರ್ಕಾರದ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಆರೋಪಿಸಿದರು.

ರಾಜ್ಯಪಾಲರು ಮಧ್ಯ ಪ್ರವೇಶಿಸಬೇಕು ಮತ್ತು ಸರ್ಕಾರವನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ನಾಯಕರು ಶೀಘ್ರದಲ್ಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ. ಜೂನ್ 4ರಂದು ಸಂಜೆ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದ ಮುಂದೆ ಕಾಲ್ತುಳಿತ ಸಂಭವಿಸಿತು. ಅಲ್ಲಿ ಆರ್‌ಸಿಬಿ ತಂಡದ ಐಪಿಎಲ್ ವಿಜಯೋತ್ಸವದಲ್ಲಿ ಭಾಗವಹಿಸಲು ಹೆಚ್ಚಿನ ಸಂಖ್ಯೆಯ ಜನರು ಸೇರಿದ್ದರು. ಘಟನೆಯಲ್ಲಿ ಹನ್ನೊಂದು ಜನರು ಸಾವಿಗೀಡಾದರು ಮತ್ತು 56 ಜನರು ಗಾಯಗೊಂಡರು.

ಮಧ್ಯ ಪ್ರವೇಶಿಸಲು ಸದ್ಯದಲ್ಲೇ ರಾಜ್ಯಪಾಲರಿಗೆ ಮನವಿ ನಿರ್ಧಾರ

ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಅಶೋಕ, ಉದ್ಯಮಿ ವಿಜಯ್ ಮಲ್ಯ ಈ ಹಿಂದೆ ಆರ್‌ಸಿಬಿ ತಂಡವನ್ನು ಪ್ರಾರಂಭಿಸಿದ್ದರು, ಅದು ರಾಯಲ್ ಚಾಲೆಂಜರ್ಸ್ ಬೆಂಗಳೂರು. ಆದರೆ, ಸಿಎಂ ಮತ್ತು ಉಪಮುಖ್ಯಮಂತ್ರಿ ಹೊಸ ಆರ್‌ಸಿಬಿ ಆಗಿದ್ದಾರೆ ಎಂದು ದೂರಿದರು.

ಘಟನೆಗೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಕ್ಕಾಗಿ ಸರ್ಕಾರವನ್ನು ಟೀಕಿಸಿದ ಅಶೋಕ, ಬಿಜೆಪಿ ಪೊಲೀಸರೊಂದಿಗೆ ನಿಂತಿದೆ ಮತ್ತು ಪೊಲೀಸರ ಯಾವುದೇ ತಪ್ಪಿಲ್ಲದ ಕಾರಣ ಅವರ ಪರವಾಗಿ ಹೋರಾಡುತ್ತದೆ ಎಂದು ಹೇಳಿದರು.

ಪೊಲೀಸರು ಅನುಮತಿ ನಿರಾಕರಿಸಿದ್ದರೂ ವಿಜಯೋತ್ಸವ ಆಚರಿಸಲಾಗಿದೆ. ಹನ್ನೊಂದು ಜೀವಗಳ ನಷ್ಟವು 'ಸರ್ಕಾರಿ ಪ್ರಾಯೋಜಿತ ಕೊಲೆ' ಯಾಗಿದೆ ಹೊರತು ಬೇರೇನು ಅಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೇರಿದಂತೆ ಅಧಿಕಾರದಲ್ಲಿರುವವರು ಹನ್ನೊಂದು ಜನರ ಮೃತದೇಹಗಳ ಮೇಲೆ ರಾಜ್ಯವನ್ನು ಆಳಲು ಸಾಧ್ಯವಿಲ್ಲ. ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ, ನೀವು ಅದನ್ನು ಕಳೆದುಕೊಂಡಿದ್ದೀರಿ. ಕಾನೂನಿನ ದೃಷ್ಟಿಯಲ್ಲಿ ನಿಮ್ಮ ಮೇಲೆ ಆರೋಪವಿದೆ ಎಂದರು.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಆರ್‌ಸಿಬಿಯ 'ಬ್ರಾಂಡ್ ಅಂಬಾಸಿಡರ್‌ಗಳಂತೆ' ವರ್ತಿಸಿದರು. ಸಾವು–ನೋವುಗಳ ಹೊರತಾಗಿಯೂ ವಿಜಯೋತ್ಸವ ಕಾರ್ಯಕ್ರಮಗಳನ್ನು ನಡೆಸಲಾಯಿತು ಎಂದು ದೂರಿದರು. ಮೊದಲ ಸಾವು ಜೂನ್ 4ರಂದು ಮಧ್ಯಾಹ್ನ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಸೋಮವಾರ 9 ಜೂನ್ 2025

ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ಕೆ.ಆರ್.ಪೇಟೆ ತಾಲೂಕು, ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಚೇಗೌಡನ ಕೊಪ್ಪಲಿನ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕ್ಷೇಮಾಭಿವೃದ್ಧಿ ಸಂಘಕ್ಕೆ ಸಿ.ಎ. ನಿವೇಶನವನ್ನು ಕೊಡಿಸುವಂತೆ, ಮನವಿ ಪತ್ರ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಕೆ.ಟಿ.ಚಂದ್ರೇಗೌಡ, ಗೌರವ ಅಧ್ಯಕ್ಷ ಹೆಚ್.ವಿ.ಗಣೇಶ್ ಮತ್ತು ಸಂಘಟನಾ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.8– ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ವತಿಯಿಂದ 2025–26ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು–ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ), ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ಪ್ರವರ್ಗ–1ರ ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗಕ್ಕೆ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸೇವಾಸಿಂಧು ತಂತ್ರಾಂಶದ ಮುಖಾಂತರ ಅರ್ಜಿಸಲ್ಲಿಸಲು ಜೂನ್ 30 ಕೊನೆಯ ದಿನಾಂಕ ನಿಗಧಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.kaad.karnataka.gov.in ಮೂಲಕ ಅಥವಾ ನಿಗಮದ ದೂ.ಸಂ:080–22374832 ಮತ್ತು 8050770004, 8050770005 ಹಾಗೂ ಮೈಸೂರು ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆ: 0821–2341194ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಹೆಚ್.ಎ.ಶೋಭ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ರಾಜ್ಯಮಟ್ಟದ ಮೇಘ ಮೈತ್ರಿ 8ನೇ ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡಕ್ಕೆ ಸುದೀರ್ಘ ಶ್ರೀಮಂತ ಇತಿಹಾಸವಿದೆ

ವೈದ್ಯ ಸಾಹಿತಿ ಡಾ. ಸಿ.ಶರತ್ ಕುಮಾರ್



ಮೈಸೂರಿನ ವಿಜಯನಗರ ಕಸಾಪ ಭವನದಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಮೇಘ ಮೈತ್ರಿ 8ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರು, ಜೂ.8(ಎಂಟಿವೈ)– ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆ ದೀರ್ಘ ಮತ್ತು ಶ್ರೀಮಂತ ಇತಿಹಾಸ ಹೊಂದಿದೆ ಎಂದು ವೈದ್ಯ ಸಾಹಿತಿ ಡಾ.ಸಿ. ಶರತ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ಬಾಗಲಕೋಟೆಯ ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಮೇಘ ಮೈತ್ರಿ 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಅಲಂಕರಿಸಿ, ಮಾತನಾಡಿದ ಅವರು, ಕನ್ನಡವು ದ್ರಾವಿಡ ಭಾಷೆಯಾಗಿದ್ದರೂ, ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳಿಂದ ಪ್ರಭಾವಿತವಾಗಿದೆ ಎಲ್ಲಾ ದ್ರಾವಿಡ ಭಾಷೆಗಳನ್ನು ಸಹೋದರರಂತೆ ಪರಿಗಣಿಸಬಹುದು. ಯಾವ ಭಾಷೆಯೂ ಇನ್ನೊಬ್ಬರಿಂದ ಜನಿಸಿಲ್ಲ.

ಕನ್ನಡವು ದಕ್ಷಿಣ ದ್ರಾವಿಡ ಶಾಖೆಯ ಭಾಗವಾಗಿದ್ದರೂ, ಅದು ತನ್ನದೇ ಆದ ವಿಶಿಷ್ಟ ಇತಿಹಾಸದೊಂದಿಗೆ ಅಭಿವೃದ್ಧಿ ಹೊಂದಿದೆ. ತಮಿಳು ಸಾಹಿತ್ಯ ಸಂಗ್ರಹವು ಕನ್ನಡ ಪ್ರತಿರೂಪಕ್ಕಿಂತ ಹಳೆಯದಾಗಿರುಹುದು. ಇದರ ಅರ್ಥ ತಮಿಳು ಕನ್ನಡಕ್ಕಿಂತ ಹಳೆಯ ಭಾಷೆ ಎಂದಲ್ಲ ಎಂದು ಪ್ರತಿಪಾದಿಸಿದರು.

ಕನ್ನಡ ಸೇರಿದಂತೆ ದ್ರಾವಿಡ ಭಾಷಾ ಕುಟುಂಬವು ಭಾರತೀಯ ಉಪಖಂಡದಲ್ಲಿ 4,500 ವರ್ಷಗಳ ಹಿಂದೆ ಹುಟ್ಟಿಕೊಂಡಿದೆ. ಆರ್ಯರು ಬರುವ ಮೊದಲು ದ್ರಾವಿಡ ಭಾಷಿಕರು ಭಾರತೀಯ ಉಪಖಂಡದಲ್ಲಿ ವಾಸಿಸುತ್ತಿದ್ದರು. ದ್ರಾವಿಡ ಭಾಷೆಗಳನ್ನು ಆ ವೇಳೆ ಸ್ಥಳೀಯ ಭಾಷೆಯೆಂದು ಪರಿಗಣಿಸಲಾಗಿದೆ. ತಮಿಳು, ಮಲಯಾಳಂ ಮತ್ತು ತೆಲುಗು ಭಾಷೆಗಳೊಂದಿಗೆ ಕನ್ನಡವು ದಕ್ಷಿಣ ದ್ರಾವಿಡ ಶಾಖೆಯ ಭಾಗವಾಗಿದೆ. ಕನ್ನಡವು ದೀರ್ಘ ಮತ್ತು ಶ್ರೀಮಂತ ಇತಿಹಾಸವನ್ನು ಹೊಂದಿದೆ.ಇದು ಕ್ರಿ.ಪೂ 3ನೇ ಶತಮಾನದಷ್ಟು ಹಿಂದೆಯೇ ಮಾತನಾಡಲ್ಪಟ್ಟಿತು ಎಂಬುದಕ್ಕೆ ಪುರಾವೆಗಳಿವೆ. ಇದು ಒಂದು ವಿಶಿಷ್ಟ ಲಿಪಿ ಮತ್ತು ಶಬ್ದಕೋಶವನ್ನು ಹೊಂದಿದೆ. ಸಂಸ್ಕೃತದಿಂದ ಪ್ರಭಾವಿತವಾಗಿದ್ದರೂ, ತಾಂತ್ರಿಕ ಮತ್ತು ತಾತ್ವಿಕ ಪರಿಭಾಷೆಯಲ್ಲಿ, ಒಂದು ವಿಶಿಷ್ಟ ದ್ರಾವಿಡ ಭಾಷೆಯಾಗಿ ಉಳಿದಿದೆ ಎಂದು ತಿಳಿಸಿದರು.

ಕ್ರಿ.ಶ. 5ನೇ ಶತಮಾನದ ಹಲ್ಮಿಡಿ ಶಾಸನದಲ್ಲಿ ಕನ್ನಡತನ ಸ್ಪಷ್ಟವಾಗಿ ಬಿಂಬಿತವಾಗಿದೆ. ಅಶೋಕನ ಶಾಸನದಲ್ಲಿ ಕಂಡು ಬರುವ "ಇಸಿಲ" ಎಂಬ ಹೆಸರನ್ನು ಕೆಲವು ವಿದ್ವಾಂಸರು ಕನ್ನಡ ಪದವೆಂದು ಗುರುತಿಸಿದ್ದಾರೆ. ಕನ್ನಡದ ಪ್ರಾಚೀನತೆಯ ಹೆಚ್ಚುವರಿ ಪುರಾವೆಗಳಲ್ಲಿ ಶಾತವಾಹನ ರಾಜವಂಶದ ಶಾಸನಗಳು ಮತ್ತು ನಾಣ್ಯಗಳಲ್ಲಿನ ಹೆಸರುಗಳು, ಗಾಥಸಪ್ತಸಾಹಿ ಪುಸ್ತಕದಲ್ಲಿನ ಪದಗಳು ಮತ್ತು ಟಾಲೆಮಿಯ ಬರಹಗಳಲ್ಲಿನ ಉಲ್ಲೇಖಗಳು ಸೇರಿವೆ. ಕನ್ನಡವು ಹಳೆಗನ್ನಡ (ಹಳೆಯ ಕನ್ನಡ), ನಡುಗನ್ನಡ (ಮಧ್ಯ ಕನ್ನಡ), ಮತ್ತು ಹೊಸಗನ್ನಡ (ಆಧುನಿಕ ಕನ್ನಡ) ಸೇರಿದಂತೆ ಹಂತಗಳ ಮೂಲಕ ವಿಕಸನಗೊಂಡಿದೆ.

ದಕ್ಷಿಣ ಭಾರತ, ಮಧ್ಯ ಭಾರತ ಮತ್ತು ಡೆಕ್ಕನ್ ಪ್ರಸ್ಥಭೂಮಿಯ ಹಲವಾರು ರಾಜವಂಶಗಳ ಮತ್ತು ಸಾಮ್ರಾಜ್ಯಗಳ ಆಸ್ಥಾನ ಭಾಷೆ ಕನ್ನಡವಾಗಿತ್ತು. ಸುಮಾರು 1200 ವರ್ಷಗಳ ಸಾಹಿತ್ಯ ಇತಿಹಾಸವನ್ನು ಇದು ಹೊಂದಿದೆ. ಕನ್ನಡವು ಕರ್ನಾಟಕ ರಾಜ್ಯದ ಅಧಿಕೃತ ಭಾಷೆ ಮತ್ತು ಭಾರತದ 22 ಅಧಿಕೃತ ರಾಷ್ಟ್ರೀಯ ಭಾಷೆಗಳಲ್ಲಿ ಒಂದಾಗಿದೆ. ಕನ್ನಡವನ್ನು 5 ಕೋಟಿ ಸ್ಥಳೀಯ ಭಾಷಿಕರು ಮತ್ತು ಹೆಚ್ಚುವರಿಯಾಗಿ 2 ಕೋಟಿ ಜನರು ಎರಡನೇ ಅಥವಾ ಮೂರನೇ ಭಾಷೆಯಾಗಿ ಮಾತನಾಡುತ್ತಾರೆ. 2008ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡಲಾಯಿತು. ಕನ್ನಡ ಸಾಹಿತ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ ಎಂದರು.

ಕನ್ನಡ ಸಂಪದ್ಭರಿತ ಭಾಷೆ: ಇದಕ್ಕೂ ಮುನ್ನ ಸಮ್ಮೇಳನವನ್ನು ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ ಉದ್ಘಾಟಿಸಿ ಮಾತನಾಡಿ, ಕನ್ನಡ, ಕನ್ನಡನಾಡನ್ನು ಮತ್ತಷ್ಟು ಸರ್ವಶಕ್ತವಾಗಿ ಬೆಳೆಸಲು ಎಲ್ಲರೂ ಪಣತೊಡಬೇಕು. ಕನ್ನಡಕ್ಕೆ ತನ್ನದೇ ಆದ ಇತಿಹಾಸವಿದೆ, ಶ್ರೀಮಂತ ಸಾಹಿತ್ಯ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ದ್ರಾವಿಡ ಭಾಷೆಗಳಲ್ಲಿಯೇ ಕನ್ನಡ ಭಾಷೆ ಸಂಪದ್ಭರಿತ ಭಾಷೆಯಾಗಿ ಮುಂಚೂಣಿ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಇದೇ ವೇಳೆ ಮಲ್ಲಿಕಾರ್ಜುನ ಶೆಲ್ಲಿಕೇರ, ಶಂಕರ ಬೈಚನಾಳ, ಲಕ್ಷ್ಮಣ ಬದಾಮಿ ಅವರಿಗೆ ದತ್ತಿ ಪ್ರಶಸ್ತಿ, ನಾ. ಗಂಗಾಧರಪ್ಪ, ಪಿ. ನೀತು ನಿನಾದ್, ಎಂಎಸ್‌ಎಸ್ ಶಿವಮೂರ್ತಿ, ಮಂಜುಳಾ, ಜಯಂತಿ, ಹೇಮಾ ಅಂಬರೀಶ್, ಇಂದಿರಾ ಸಾತನೂರ, ವಿನೋದ ಕುಮಾರಿ, ಎಂ.ಜೆ. ರೋಹಿಣಿ, ವನಜಾ ದಾಸರಹಳ್ಳಿ, ಶಿವಮ್ಮ ದಾಸರಹಳ್ಳಿ, ಸಿ. ಜಗದೀಶ್,. ಆರ್.ಎಚ್. ರವಿಕುಮಾರ್, ಎಂ. ನಿಲೋಜಿ, ಶ್ರೀನಾಥ್ ಅಜಾದ್, ವಿ.ವನಿತಾ, ಸಂಜೀವಪ್ಪ ಎಸ್. ಚಲಪತಿಗೌಡ, ಎನ್. ಮುತ್ತಣ್ಣ, ಎಂ.ಜಿ. ನಾಗರಾಜ್. ಎಸ್. ರಾಘಶ್ರೀ, ಎನ್. ಹೇಮಾ, ಪಿ. ಸೌಜನ್ಯಾ, ವಿ. ತಿಮ್ಮರಾಯಪ್ಪ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ವಹಿಸಿದ್ದರು. ವಿದ್ವಾಂಸ, ಡಾ. ಗುರುಪಾದ ಮರಿಗುದ್ದಿ ಅವರು ಹಡವನಹಳ್ಳಿ ವೀರಣ್ಣ ಗೌಡರ 'ಉರಿವ ದೀಪದ ಕೆಳಗೆ' ಕಥಾ ಸಂಕಲನ ಬಿಡುಗಡೆ ಮಾಡಿದರು. ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಧ್ವಜಾರೋಹಣ ನೆರವೇರಿಸಿದರು. ಕನ್ನಡ ಹೋರಾಟಗಾರ ಕುರುಬಾರಹಳ್ಳಿ ಧನಪಾಲ್ ಮೆರವಣಿಗೆಗೆ ಚಾಲನೆ ನೀಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪುಸ್ತಕ ಪ್ರದರ್ಶನ ಉದ್ಘಾಟಿಸಿದರು. ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ ನೂತನ ಅಧ್ಯಕ್ಷ ಡಾ.ಸಿ. ಶರತ್‌ಕುಮಾರ್ ಅವರಿಗೆ ಕನ್ನಡ ಧ್ವಜ ಹಸ್ತಾಂತರಿಸಿದರು. ಸಮಾಜ ಸೇವಕಿ ಡಾ.ಶಕುಂತಲಾ ಜಯದೇವ್ ಮುಖ್ಯ ಅತಿಥಿಯಾಗಿದ್ದರು. ಮಂಜುಳಾ ಪ್ರಾರ್ಥಿಸಿದರು. ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷ ಎಂ. ರಮೇಶ್ ಕಮತಗಿ ಪ್ರಾಸ್ತಾವಿಕ ನುಡಿ ಸಾಹಿತಿ ಟಿ. ಸತೀಶ್ ಜವರೇಗೌಡ ಆಶಯ ಭಾಷಣ ಮಾಡಿದರು. ಸಾಹಿತಿ ಎಂ.ವಿ. ಷಡಕ್ಷರಿ ಕಾರ್ಯಕ್ರಮ ನಿರೂಪಿಸಿದರು. ಯುವ ಕವಿ ಗುರು ಗೌತಮ್ ವಂದಿಸಿದರು. ನಂತರ ವಿಚಾರಗೋಷ್ಠಿ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ವಿಕಸಿತ ಕೃಷಿ ಸಂಕಲ್ಪ ಅಭಿಯಾನದಲ್ಲಿ ಪಶು ಸಂಗೋಪನೆ ಕುರಿತು ರೈತರಿಗೆ ಭರಪೂರ ಮಾಹಿತಿ

ಮೈಸೂರು, ಜೂ.8– ವಿಕಸಿತ ಕೃಷಿ ಸಂಕಲ್ಪ ಅಭಿಯಾನದ 10ನೆಯ ದಿನವಾದ ಇಂದು ಮೈಸೂರು ತಾಲೂಕಿನ ಜಯಪುರ, ದಾರಿಪುರ ಹಾಗೂ ಹುಣಸೂರು ತಾಲೂಕಿನ ಮಾಚಬಾಯನಹಳ್ಳಿ ಗ್ರಾಮಗಳಲ್ಲಿ ಸುತ್ತೂರು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನಕೇಂದ್ರ ಹಾಗೂ ಕೃಷಿ ಸಂಬಂಧಿತ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು.

ಡಾ. ರಕ್ಷಿತ್‌ರಾಜ್‌ರವರು ಕೇಂದ್ರ ಸರ್ಕಾರದ ಕೃಷಿ ಮತ್ತು ಪಶು ಸಂಗೋಪನೆ ಯೋಜನೆಗಳು ಹಾಗೂ ಮೇವು ಬೆಳೆಗಳ ಕುರಿತು ರೈತರಿಗೆ ಮಾಹಿತಿ ನೀಡಿದರು. ಬೆಂಗಳೂರಿನ ರಾಷ್ಟ್ರೀಯ ಪಶು ಆಹಾರ ಮತ್ತು ಶರೀರ ಕ್ರಿಯಾ ಶಾಸ್ತ್ರ ಸಂಸ್ಥೆಯ ಪ್ರಧಾನ ವಿಜ್ಞಾನಿಯಾದ ಡಾ. ಕಾಜಲ್ ಶಂಕರ್‌ರಾಯ್ ಹಸುಗಳಲ್ಲಿ ಬಂಜೆತನ ಸಮಸ್ಯೆಗೆ ಖನಿಜ ಮಿಶ್ರಣವನ್ನು ಮತ್ತು ಹಾರ್ಮೋನ್‌ಗಳನ್ನು ಬಳಸಬೇಕೆಂದು ತಿಳಿಸಿದರು. ಹಾಲಿನಲ್ಲಿ ಕೊಬ್ಬು ಮತ್ತು ಡಿಗ್ರಿ ಸಮಸ್ಯೆ ಕಂಡು ಬಂದಲ್ಲಿ ಬೈಪಾಸ್ ಫ್ಯಾಟ್ ಮತ್ತು ಕೆಎಂಎಫ್ ಸಮೃದ್ಧಿಯಂತಹ ಉತ್ಪನ್ನಗಳನ್ನು ಬಳಸಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಮನವರಿಕೆ ಮಾಡಿಕೊಟ್ಟರು. ರಾಷ್ಟ್ರೀಯ ಡೇರಿ ಅಧ್ಯಯನ ಸಂಸ್ಥೆಯ ವಿಜ್ಞಾನಿ ಡಾ. ಶಿವಸ್ವಾಮಿ ಅವರು ಮಾತನಾಡಿ, ರೈತರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಮಾಡುವುದರಿಂದ ಹೆಚ್ಚಿನ ಲಾಭ ಗಳಿಸಬಹುದು. ಹಾಲು ಒಂದು ಸಂಪೂರ್ಣ ಆಹಾರ, ಇದರಿಂದ ಅನೇಕ ಉಪ ಉತ್ಪನ್ನಗಳನ್ನು ತಯಾರಿಸಿ ದಿನನಿತ್ಯ ಬಳಸಿದರೆ ಆರೋಗ್ಯ ಉತ್ತಮವಾಗಿ ಪಡೆಯಬಹುದೆಂದು ತಿಳಿಸಿದರು. ರೈತರು ದೇಸಿ ತಳಿಯಾದ ಹಳ್ಳಿಕಾರ್ ತಳಿಯನ್ನು ಹೆಚ್ಚು ಸಾಕಬೇಕೆಂದು ತಿಳಿಸಿದರು.

ಬೆಂಗಳೂರಿನ ಭಾರತೀಯ ಪಶುಚಿಕಿತ್ಸೆ ಸಂಶೋಧನೆ ಸಂಸ್ಥೆಯ ಡಾ. ಬಸವರಾಜ್ ಸಜ್ಜಣ್ಣನವರು ಮುಂಗಾರಿನಲ್ಲಿ ಪಶುಗಳಲ್ಲಿ ಕಂಡು ಬರುವ ರೋಗಗಳು, ಅದರ ಲಕ್ಷಣಗಳು, ಹಸುಗಳಲ್ಲಿ ಕಂಡು ಬರುವ ಕೆಚ್ಚಲು ಬಾವು ರೋಗ, ಹುಣ್ಣಿಯ ರೋಗ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಪಶು ಚಿಕಿತ್ಸೆ ಸಂಶೋಧನಾ ಕೇಂದ್ರದ ಡಾ ಸಬಾರಿನಾಥ್, ಸಂಶೋಧನಾ ಕೇಂದ್ರದ ಕೆಲಸ ವೈಖರಿಯ ಕುರಿತು ಮಾಹಿತಿ ನೀಡಿದರು. ಡಾ. ಜಿ.ಎಂ. ವಿನಯ್‌ರವರು ಮಣ್ಣು ಪರೀಕ್ಷೆಯ ವಿಧಾನ ಹಾಗೂ ಅದರ ಉಪಯೋಗ, ಸಾವಯವ, ಹಸಿರೆಲೆ ಗೊಬ್ಬರದ ಬಳಕೆ, ಬೇವಿನ ಹಿಂಡಿ ಬಳಕೆ ಮಾಡುವುದರಿಂದ ಮಣ್ಣಿನಆರೋಗ್ಯವನ್ನು ಕಾಪಾಡಿಕೊಳ್ಳಲು ತಿಳಿಸಿದರು. ಮಣ್ಣು ಪರೀಕ್ಷೆಯ ಆಧಾರದ ಮೇಲೆ ಬೆಳೆಗಳ ಆಯ್ಕೆ ತಳಿಗಳ ಆಯ್ಕೆ ಹಾಗೂ ಪೋಷಕಾಂಶಗಳ ನಿರ್ವಹಣೆ ಕುರಿತು ಮಾಹಿತಿ ನೀಡಿ ಹಾಗೂ ಲಘು ಪೋಷಕಾಂಶಗಳಾದ ತರಕಾರಿ ಸಮೃದ್ಧಿ, ಬಾಳೆ ಸಮೃದ್ಧಿ ಹಾಗೂ ಇತರ ಲಘು ಪೋಷಕಾಂಶಗಳ ಬಳಕೆ ಬಗ್ಗೆ ಮಾಹಿತಿ ನೀಡಿದರು.

ಡಾ. ವೈಪಿ ಪ್ರಸಾದ್‌ರವರು ಬಾಳೆಯಲ್ಲಿ ಬರುವ ಪನಾಮಾರೋಗ ಹಾಗೂ ಎಲೆ ಚುಕ್ಕೆ ರೋಗದ ಲಕ್ಷಣಗಳು ಹಾಗೂ ಅವುಗಳ ಸಮಗ್ರ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ನಂತರ ಮೆಣಸಿನ ಕಾಯಿಯಲ್ಲಿ ಮುಖ್ಯವಾಗಿ ಬರುವ ಎಲೆ ಮುಟುರು ರೋಗ, ಟೊಮ್ಯಾಟೊದಲ್ಲಿ ಬರುವ ಅಂಗಮಾರಿ ರೋಗದ ಲಕ್ಷಣಗಳು ಹಾಗೂ ಅದರ ರೋಗದ ಸಮಗ್ರ ನಿರ್ವಹಣೆ ಕುರಿತು ಮಾಹಿತಿ ನೀಡಿದರು.

ಡಾ. ದೀಪಕ್, ರೈತರು ಬೆಳೆ ಜೊತೆಗೆ ಮೌಲ್ಯವರ್ಧನೆ ಕಡೆಗೆ ಗಮನ ಹರಿಸಿದರೆ ಹೆಚ್ಚಿನ ಲಾಭ ಗಳಿಸಬಹುದು. ಮಹಿಳೆಯರು ಸ್ವಸಹಾಯ ಸಂಘಗಳನ್ನು ನಿರ್ಮಿಸಿಕೊಂಡು ಆಹಾರ ಪದಾರ್ಥಗಳ ಮೌಲ್ಯವರ್ಧನೆಯನ್ನು ಮಾಡಿ ಮಾರಾಟ ಮಾಡಿದರೆ ಆರ್ಥಿಕವಾಗಿ ಸದೃಢರಾಗಬಹುದೆಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರತಿಪರ 670ಕ್ಕೂ ಹೆಚ್ಚಿನ ರೈತರು, ರೈತ ಮಹಿಳೆಯರು ಭಾಗವಹಿಸಿದ್ದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಕ್ಕಳಲ್ಲಿ ಪರಿಸರ ಸಂರಕ್ಷಣಾ ಜಾಗೃತಿ ಅಭಿಯಾನವನ್ನು ಕಿರು ನಾಟಕದ ಮೂಲಕ ಮಕ್ಕಳು ಪ್ರದರ್ಶಿಸಿದರು. ಚಿಣ್ಣರು ಪರಿಸರ ಕಾಳಜಿಯನ್ನು ಪ್ರತಿಬಿಂಬಿಸುವಂತಹ ಪರಿಸರ ಸ್ನೇಹಿ ವೇಷಭೂಷಣಗಳನ್ನು ತೊಟ್ಟು ಎಲ್ಲರ ಮನಸ್ಸಲ್ಲಿ ಪರಿಸರ ಸಂರಕ್ಷಣೆಯ ಜ್ಞಾನವನ್ನು ಮೂಡಿಸಿದರು. ಶಾಲಾ ಆಡಳಿತಾಧಿಕಾರಿ ಕಾಂತಿ ನಾಯಕ್, ಶಾಲಾ ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಸ್ಫೂರ್ತಿಯಿಂದ ಉತ್ತಮ ಪರಿಸರ ಸಂದೇಶ



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬಿಲ್ಡರ್ಸ್ ಅಸೋಸಿಯೇಷನ್ ಮಹಿಳಾ ಘಟಕ ಸ್ಫೂರ್ತಿ ಸಂಘಟನೆ ವತಿಯಿಂದ ಭಾನುವಾರ ಚಾಮುಂಡಿಬೆಟ್ಟಕ್ಕೆ ವಾಕಥಾನ್ ಆಯೋಜಿಸಲಾಗಿತ್ತು.

ಮೈಸೂರು, ಜೂ.8(ಎಂಟಿವೈ)– ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಭಾನುವಾರ ಬಿಲ್ಡರ್ಸ್ ಅಸೋಸಿಯೇಷನ್ ಸಂಸ್ಥೆಯ ಮಹಿಳಾ ಘಟಕ ಸ್ಫೂರ್ತಿ ಸಂಸ್ಥೆ, ಚಾಮುಂಡಿ ಬೆಟ್ಟಕ್ಕೆ ಆಯೋಜಿಸಿದ್ದ ಕಾಲ್ನಡಿಗೆ ಜಾಥಾದಲ್ಲಿ 350ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಪರಿಸರ ಜಾಗೃತಿ ಸಂದೇಶ ಸಾರಿದರು.

ಚಾಮುಂಡಿಬೆಟ್ಟದ ತಪ್ಪಲಲ್ಲಿ ಇಂದು ಬೆಳಗ್ಗೆ ಆರಂಭವಾದ ಜಾಥಾಕ್ಕೆ ಡಿಆರ್‌ಎಫ್‌ಓ ಸತೀಶ್ ಚಾಲನೆ ನೀಡಿದರು. ಬಳಿಕ ನಡಿಗೆಯಲ್ಲಿ ಸ್ಫೂರ್ತಿ ಸಂಘಟನೆಯ ಸದಸ್ಯರು, ಬಿಲ್ಡರ್ಸ್ ಅಸೋಸಿಯೇಷನ್ ಸದಸ್ಯರು, ಮಕ್ಕಳು, ಪರಿಸರ ಪ್ರೇಮಿಗಳು, ಸಾರ್ವಜನಿಕರು ಪಾಲ್ಗೊಂಡು ಪರಿಸರ ಪ್ರಜ್ಞೆ ಸಾರಿದರು.

ಚಾಮುಂಡಿಬೆಟ್ಟ ತಲುಪಿ, ವಿಶ್ವ ಪರಿಸರ ದಿನಾಚರಣೆ ಸ್ಮರಣಾರ್ಥ ಗಿಡ ನೆಡುವುದರೊಂದಿಗೆ ವಾಕಥಾನ್ ಸಮಾಪ್ತಿಯಾಯಿತು. ಈ ಸಂದರ್ಭದಲ್ಲಿ ಸ್ಫೂರ್ತಿ ಸಂಸ್ಥೆಯ ಅಧ್ಯಕ್ಷೆ ಕವಿತಾ ಗುರುರಾಜ್, ಸಂಚಾಲಕರಾದ ವೀಣಾ ಅಶೋಕ್, ಬಿಎಐ ಅಧ್ಯಕ್ಷ ವಿ.ಶ್ರೀನಾಥ್, ಡಬ್ಲ್ಯೂಇಎಂ ಅಧ್ಯಕ್ಷ ಪ್ರಭಾಕರ್‌ರಾವ್ ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಪೂಜೆ

ಮೈಸೂರು, ಜೂ.8– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇ ಶ್ವರ ದೇವಸ್ಥಾನದಲ್ಲಿ ಜೂ.11ರಂದು ಹುಣ್ಣಿಮೆ ಪ್ರಯುಕ್ತ ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿ ಮಹಾಶಾಂತಿ, ಮಹಾ ಮೃತ್ಯುಂಜಯ ಹೋಮ, ಬಾದಾ ನಿವಾರಕ ಸುದರ್ಶನ ಹೋಮ, ಕುಜದೋಷ ನಿವೃತ್ತಿ ಶಾಂತಿ ಮತ್ತು ರಾಹು, ಕೇತು ಶಾಂತಿ ಗುರು ಮಹಾಶಾಂತಿ, ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಮಹಾ ಪೂರ್ಣಾಹುತಿ ಮತ್ತು ಮಹಾ ಮಂಗಳಾರತಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಾಮೀಣ ಬಡಜನರು, ಮಹಿಳೆಯರ ಸ್ವಾವಲಂಬನೆ ಬದುಕಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಧಾರ

ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ



ಕಳಸ್ತವಾಡಿಯಲ್ಲಿ ನಡೆದ ಸೇವಾ ಕಾರ್ಯಕರ್ತರ ಪ್ರೇರಣಾ ಕಾರ್ಯಾಗಾರವನ್ನು ಡಾ.ವೀರೇಂದ್ರ ಹೆಗಡೆ ಉದ್ಘಾಟಿಸಿದರು.

ಮೈಸೂರು, ಜೂ.8– ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸುವ ಯೋಚನೆ ಹಾಗೂ ಯೋಜನೆಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಆರ್ಥಿಕ ಬೆಳವಣಿಗೆಯು ಮಾನವ ಕೇಂದ್ರೀಕೃತವಾದಾಗ ಮಾತ್ರ ಅರ್ಥಪೂರ್ಣ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪಾತ್ರ ಮಹತ್ತರವಾದುದು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಳಸ್ತವಾಡಿಯ ಸಂಕಲ್ಪ ಸೌಧದಲ್ಲಿ ನಡೆದ ಮೈಸೂರು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸೇವಾ ಕಾರ್ಯಕರ್ತರ ಪ್ರೇರಣಾ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾರ್ಗದರ್ಶನ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಒಂದು ಮಾದರಿ ಯೋಜನೆ ಆಗಿದ್ದು, ಯೋಜನೆಯು ಗ್ರಾಮೀಣ ಪ್ರದೇಶದಲ್ಲಿರುವ ಬಡವರು, ಮಹಿಳೆಯರು, ರೈತರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಹಾಗೂ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದೆ. ಇದರೊಂದಿಗೆ ಮಹಿಳಾ ಸಬಲೀಕರಣ, ಆರ್ಥಿಕ ಸಾಕ್ಷರತೆ, ಆರ್ಥಿಕ ಸ್ವಾವಲಂಬನೆ, ಉದ್ಯೋಗ ನಿರ್ಮಾಣ, ಸಮುದಾಯದ ಅಭಿವೃದ್ಧಿಗಾಗಿ ನಮ್ಮೂರು–ನಮ್ಮ ಕೆರೆ, ಶುದ್ಧಗಂಗಾ, ಸಮುದಾಯ ಭವನಗಳ ನಿರ್ಮಾಣ, ರುದ್ರಭೂಮಿಗಳ ಅಭಿವೃದ್ಧಿ, ಜನಜಾಗೃತಿ ಕಾರ್ಯಕ್ರಮ, ಹಾಲು ಉತ್ಪಾದಕ ಸಹಕಾರಿ ಸಂಘಗಳಿಗೆ ನೆರವು, ವಿದ್ಯಾರ್ಥಿಗಳಿಗಾಗಿ ಸುಜ್ಞಾನನಿಧಿ ಶಿಷ್ಯವೇತನ, ಸರಕಾರಿ ಶಾಲೆಗಳಿಗೆ ಅತಿಥಿ ಶಿಕ್ಷಕರ ಕಲ್ಪಿಸುವುದು, ಪೀಠೋಪಕರಣ, ಅಸಹಾಯಕರಿಗೆ ವಾತ್ಸಲ್ಯ ಕಾರ್ಯಕ್ರಮ, ರೈತರಿಗಾಗಿ ಕೃಷಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಯೋಜನೆಯ ಟ್ರಸ್ಟಿಗಳಾದ ಡಾ.ಹರೀಶ್ ಕೃಷ್ಣಸ್ವಾಮಿ, ಮೈಸೂರು ಜಿಲ್ಲಾ ನಿರ್ದೇಶಕರಾದ ವಿ.ವಿಜಯ್‌ಕುಮಾರ್ ನಾಗನಾಳ, ಮಮತ ಹರೀಶ್‌ರಾವ್, ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.06.2025 ಸೋಮವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 31.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

■ **ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್:** ಮುದ್ರಾ ಪ್ರಾಣಾಯಾಮ ಶಿಬಿರ. ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ. ಬೆಳಗ್ಗೆ 5.30ರಿಂದ 6.30, ಸಂಜೆ 6.30ರಿಂದ 7.30ರವರೆಗೆ.

■ **ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ (ಮೈಸೂರು):** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ ವನದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಮತ್ತು ಸಹಸ್ರ ಚಂಡೀಯಾಗ. ವಿಶ್ವ ರಕ್ಷಣೆ, ಸಮೃದ್ಧಿ ಹಾಗೂ ಸಾಮರಸ್ಯಕ್ಕಾಗಿ ಪ್ರಾರ್ಥನೆ. ಸ್ಥಳ: ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ. ಬೆಳಗ್ಗೆಯಿಂದ.

■ **ಋಷಿ ಸಂಸ್ಕೃತಿ ವಿದ್ಯಕೇಂದ್ರ ಟ್ರಸ್ಟ್:** ಸಿದ್ಧ ಸಮಾಧಿ ಯೋಗ ಶಿಬಿರ. ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ. ಯೋಗ ಮಾಡಿ ಆರೋಗ್ಯವಾಗಿರಿ, ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ. ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರ ದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆ 9ರಿಂದ.


■ **ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್:** ಧ್ವನಿ ಕೊಟ್ಟ ಧಣಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜೇ ಅರಸ್ ಅವರ 43ನೇ ಪುಣ್ಯಸ್ಮರಣೆ. ಉದ್ಘಾಟನೆ ಮತ್ತು ಪ್ರಶಸ್ತಿ ಪ್ರಧಾನ: ರೇಷ್ಮೆ ಹಾಗೂ ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಡಿ.ದೇವರಾಜೇ ಅರಸ್ ಕೊಡುಗೆಗಳ ಕುರಿತು: ವಿಧಾನ ಪರಿಷತ್ ಸದಸ್ಯ ವೈದ್ಯರತ್ನ ಡಾ. ಡಿ.ತಿಮ್ಮಯ್ಯ. ಅಧ್ಯಕ್ಷತೆ: ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್. ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್, ಜೆಎಲ್‌ಬಿ ರಸ್ತೆ. ಬೆಳಗ್ಗೆ 9.30ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂ ಪ್ರೆಶರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಸಿಯೋ ಥೆರಪಿ ಚಿಕಿತ್ಸಾ ಶಿಬಿರ. ಸ್ಥಳ: ಇನ್ನರ್‌ವ್ಹೀಲ್ ರೋಟರಿ ಭವನ, ವಿಜಯನಗರ. ಬೆಳಗ್ಗೆ 10.30ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ (ಮೈಸೂರು):** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ–2025. ಸ್ಥಳ: # 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ. ಸಂಜೆ 4.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 "ಸಸ್ಯ ಸಿರಿ": ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು ಪ್ರಸ್ತುತಿ– ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಮತ್ತೂರು ಕುಮಾರ ಸ್ವಾಮಿ ಹಾಗೂ ಅಮೃತಾ ನಿತಿನ್ ಶಾಸ್ತ್ರೀ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 "ಭರವಸೆ ಹೊನಲು–ವೈದ್ಯರ ಕಿವಿಮಾತು" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ. ರಸ್ತೆ, ಬೆಂಗಳೂರು, 8.30 ಯೋಗ ಕುರಿತ ವಿಶೇಷ ಸರಣಿ– "ಮಹಾಯೋಗ", 8.35 ಯೋಗದತ್ತ ಜಗತ್ತು: ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿಕ್ಷಕರಾದ ಭರತ್ ಶೆಟ್ಟಿ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 8.50 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹೈದ್ರಾಬಾದ್ ಸಹೋದರರ– ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ, ಪ್ರಸ್ತುತಿ– ಬಿ. ದಿಗ್ವಿಜಯ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ: 'ಯೋಗದತ್ತ ಜಗತ್ತು' ಕುರಿತು ಮೈಸೂರಿನ ನೃತ್ಯ ಶಿಕ್ಷಕಿ ಕೃಪಾ ಫಡ್ಕೆ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ದಿವಾಕರ ಹೆಗಡೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಸ್ಟಾನ್ಲಿ ಪಾರ್ಕರ್, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಯು. ಶ್ರೀನಿವಾಸ್ ಹಾಗೂ ಯು. ರಾಜೇಶ್– ದ್ವಂದ್ವ ಮ್ಯಾಂಡೋಲಿನ್ ವಾದನ.

ಸಂಜೆ: 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: 1. ತೋರಣ ಹೂರಣ: ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಟಿ.ವಿ. ವಿದ್ಯಾಶಂಕರ್, 2. ಕೃಷಿ ಲೋಕ, 3. ಕೃಷಿ ದರ್ಪಣ: ವಾರದ ಕೃಷಿರಂಗ / ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ– ಆರ್. ಲೋಕೇಶ್ವರಿ.

ರಾತ್ರಿ: 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 'ಯಕ್ಷಸಂಪದ': ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ– ದಿವಾಕರ ಹೆಗಡೆ, 10.30 ಸವಿನೆನಪು.

ಮೈಸೂರು ನಗರ ಪಾಲಿಕೆ ವಾಹನಗಳ ವಿಮೆಯಲ್ಲಿ ಅವ್ಯವಹಾರ ಆರೋಪ

ಸರ್ಕಾರಿ ವಿಮಾ ಸಂಸ್ಥೆ ಹೊರತಾಗಿ ಖಾಸಗಿ ಕಂಪನಿಗಳಿಗೆ ಟೆಂಡರ್ ಕರೆಯದೆ ಕೊಟೇಷನ್ ಆಧಾರದ ಮೇಲೆ ವಿಮೆಗೆ ಅವಕಾಶ



ಮೈಸೂರು, ಜೂ.8(ಬಿಎಲ್‌ಯು)– ಸರ್ಕಾರದ ವಿವಿಧ ಇಲಾಖೆಗಳಿಗೆ ಬೇಕಾದ ವಸ್ತುಗಳ ಸರಬರಾಜು ಮತ್ತು ಸೇವೆಯನ್ನು ಸರ್ಕಾರದ ವ್ಯಾಪ್ತಿಯ ಇಲಾಖೆಗಳಿಂದಲೇ ಪಡೆಯಬೇಕೆಂಬ ಕಟ್ಟು ನಿಟ್ಟಿನ ನಿಯಮವಿದೆ. ಆದರೆ ಮೈಸೂರು ನಗರ ಪಾಲಿಕೆಯು ವಾಹನಗಳ ವಿಮೆಯನ್ನು ಕರ್ನಾಟಕ ಸರ್ಕಾರದ ವಿಮಾ ಇಲಾಖೆಗೆ ನೀಡದೆ ಖಾಸಗಿಯವರಿಗೆ ನೀಡಲಾಗುತ್ತಿದೆ.

ಮೈಸೂರು ನಗರ ಪಾಲಿಕೆಯಲ್ಲಿ, ಅಧಿಕಾರಿಗಳು ಬಳಸುವ ಕಾರು, ಕಸ ಸಂಗ್ರಹಿಸುವ ಆಟೋ, ಲಾರಿ, ಕುಡಿಯುವ ನೀರಿನ ಟ್ಯಾಂಕರ್ ಸೇರಿದಂತೆ 650 ಕ್ಕೂ ಹೆಚ್ಚು ವಾಹನಗಳಿವೆ. ಈ ಎಲ್ಲಾ ವಾಹನಗಳಿಗೆ ವಿಮೆ ಮಾಡಿಸುವುದು, ನಿಗದಿತ ಸಮಯಕ್ಕೆ ನವೀಕರಿಸುವುದು ಕಾನೂನಿನ ನಿಯಮ.

ಮೈಸೂರು ನಗರ ಪಾಲಿಕೆಯ ವಾಹನಗಳಿಗೆ ಕರ್ನಾಟಕ ಸರ್ಕಾರದ ವಿಮಾ ಇಲಾಖೆ (ಕರ್ನಾಟಕ ಗೌರ್ನಮೆಂಟ್ ಇನ್ಶ್ಯೂರೆನ್ಸ್ ಡಿಪಾರ್ಟ್‌ಮೆಂಟ್– ಕೆಜಿಐಡಿ) ಯಿಂದಲೇ ವಿಮೆ ಮಾಡಿಸಬೇಕೆಂಬ ನಿಯಮವಿದೆ. ಆದರೆ ಮೈಸೂರು ನಗರ ಪಾಲಿಕೆಯಲ್ಲಿ ಹಿಂದಿನಿಂದಲೂ ಖಾಸಗಿ ಕಂಪನಿಗಳಿಂದ ವಿಮೆ ಮಾಡಿಸಲಾಗುತ್ತಿದೆ.

ಅಲ್ಲದೆ ಒಂದು ಲಕ್ಷ ರೂಪಾಯಿಗಿಂತ ಮೇಲ್ಪಟ್ಟ ಯಾವುದೇ ವಸ್ತುಗಳ ಸರಬರಾಜು ಮತ್ತು ಸೇವೆಯನ್ನು ಟೆಂಡರ್ ಕರೆದು ನೀಡಬೇಕೆಂಬ ಸರ್ಕಾರದ ನಿಯಮವಿದೆ. ಮೈಸೂರು ನಗರ ಪಾಲಿಕೆಯ ವಾಹನಗಳ ವಿಮಾ ಹಣ ಸುಮಾರು 40 ಲಕ್ಷ ರೂಪಾಯಿ. ಆದರೆ, ಇಲ್ಲಿ ಟೆಂಡರ್ ಕರೆಯದೆ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಕೊಟೇಷನ್ ಕರೆದು ಖಾಸಗಿ ಕಂಪನಿಯಿಂದ ವಿಮೆ ಮಾಡಿಸಲಾಗುತ್ತಿದೆ. ಯಾವ ಖಾಸಗಿ ವಿಮಾ ಕಂಪನಿ ಕಡಿಮೆ ವಿಮೆ ಹಣ ನಿಗದಿ ಮಾಡಿರುತ್ತದೆಯೋ ಅದಕ್ಕೆ ವಿಮೆ ಮಾಡುವುದನ್ನು ವಹಿಸಲಾಗುತ್ತಿದೆ. ಇದರಲ್ಲಿ ಪಾರದರ್ಶಕತೆ ಇಲ್ಲ. ಹಾಗಾಗಿ ಅವ್ಯಹಾರ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ.

ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲಿ ವಿಮೆ ಮಾಡಿಸದೇ ಇರುವುದು ಒಂದು ತಪ್ಪಾದರೆ, ಒಂದು ಲಕ್ಷ ಮೇಲ್ಪಟ್ಟ ವ್ಯವಹಾರವನ್ನು ಟೆಂಡರ್ ಇಲ್ಲದೆ ಖಾಸಗಿ ಕಂಪನಿಗೆ ನೀಡಿರುವುದು ಮತ್ತೊಂದು ತಪ್ಪಾಗಿದೆ.

ಇದರ ಬಗ್ಗೆ ತನಿಖೆ ನಡೆಸಿದರೆ ನಿಜಾಂಶ ತಿಳಿಯಲಿದೆ. ಮೈಸೂರು ನಗರ ಪಾಲಿಕೆಯಲ್ಲಿ ಇಂತಹ ಬಹಳಷ್ಟು ಅವ್ಯವಹಾರ ನಡೆಯುತ್ತಿದ್ದು, ಕೆಲವು ಗಮನಕ್ಕೆ ಬಂದರೆ, ಮತ್ತೆ ಕೆಲವು ಹಾಗೆಯೇ ಮುಚ್ಚಿ ಮರೆಯಾಗುತ್ತಿವೆ.

ಒಂದು ಲಕ್ಷ ಮೇಲ್ಪಟ್ಟರೆ ಟೆಂಡರ್ ಕರೆಯಬೇಕು



ಮೈಸೂರು ನಗರ ಪಾಲಿಕೆಯ ವಾಹನಗಳಿಗೆ ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲೇ ವಿಮೆ ಮಾಡುವುದು ನಿಯಮ. ಅಲ್ಲದೆ ಸರ್ಕಾರದ ಇಲಾಖೆಯಿಂದ ವಿಮೆ ಮಾಡಿಸಿದರೆ ಟೆಂಡರ್ ಕರೆಯುವ ಅಗತ್ಯವಿಲ್ಲ. ಆದರೆ, ಮೈಸೂರು ನಗರ ಪಾಲಿಕೆಯಲ್ಲಿ ಟೆಂಡರ್ ಕರೆಯದೆ ಕೊಟೇಷನ್ ಆಧಾರದ ಮೇಲೆ ಖಾಸಗಿ ಕಂಪನಿಯಿಂದ ವಿಮೆ ಮಾಡಿಸುವುದು ತಪ್ಪು. ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಇತ್ತೀಚಿಗೆ ನಾನು ಆಯುಕ್ತನಾಗಿ ಬಂದಿದ್ದು, ನನ್ನ ಅವಧಿಯಲ್ಲಿ ಖಾಸಗಿ ವಿಮಾ ಕಂಪನಿಯಿಂದ ವಿಮೆ ಮಾಡಿಸಿಲ್ಲ. ಒಂದು ಲಕ್ಷ ಮೇಲ್ಪಟ್ಟ ವ್ಯವಹಾರವನ್ನು ಟೆಂಡರ್ ಕರೆಯಬೇಕು. ಆದರೆ ಈ ವಿಚಾರವಾಗಿ ಏನು ನಡೆದಿದೆ ಎಂಬ ಮಾಹಿತಿಯೂ ನನಗಿಲ್ಲ. ಈ ವಿಚಾರವಾಗಿ ಸಂಬಂಧಿಸಿದ ಅಧಿಕಾರಿಗಳಿಂದ ಕಡತ ತರಿಸಿಕೊಂಡು ಮಾಹಿತಿ ಪಡೆಯುತ್ತೇನೆ. ಆಗಿರುವ ತಪ್ಪನ್ನು ಸರಿಪಡಿಸುತ್ತೇನೆ.

- **ಷೇಕ್ ತನ್ವೀರ್ ಆಸಿಫ್**, ಆಯುಕ್ತರು, ಮೈಸೂರು ನಗರ ಪಾಲಿಕೆ

ಇದರಲ್ಲಿ ನನ್ನ ಪಾತ್ರವಿಲ್ಲ

ಮೈಸೂರು ನಗರ ಪಾಲಿಕೆಯ ವಾಹನಗಳಿಗೆ ವಿಮೆ ಮಾಡುವುದನ್ನು ಖಾಸಗಿ ಕಂಪನಿಗೆ ನೀಡಲಾಗಿದೆ. ಹಿಂದಿನಿಂದ ನಡೆದುಕೊಂಡು ಬಂದ ನಿಯಮ ಅನುಸರಿಸಲಾಗಿದೆ. ನಾನು 2023, ಡಿಸೆಂಬರ್‌ನಲ್ಲಿ ಮೈಸೂರು ನಗರ ಪಾಲಿಕೆಗೆ ಬಂದಿರುವೆ. ಹಿಂದೆ ನಡೆದ ವಿಚಾರಗಳು ನನ್ನ ಗಮನಕ್ಕೆ ಬಂದಿಲ್ಲ. ನಗರ ಪಾಲಿಕೆಯ ವಾಹನಗಳಿಗೆ ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಿಂದ ವಿಮೆ ಮಾಡಬೇಕಾಗಿರುವುದು ನಿಯಮ. ಆದರೆ ಮೈಸೂರು ನಗರ ಪಾಲಿಕೆಯಲ್ಲಿ ಹಿಂದಿನಿಂದ ಖಾಸಗಿಯವರಿಗೆ ನೀಡಲಾಗಿದೆ. ಅದನ್ನು ಮುಂದುವರೆಸಲಾಗಿದೆ. ಇದರಲ್ಲಿ ನನ್ನ ಯಾವ ಪಾತ್ರವಿಲ್ಲ.

- **ಮೈತ್ರಿ**, ಪರಿಸರ ಅಧಿಕಾರಿ

ಇಂದು ಇಸ್ಕಾನ್‌ನಲ್ಲಿ ಪಾನಿಹಟಿ ಚಿಡಾ ದಹಿ ಉತ್ಸವ

ಮೈಸೂರು: ಮೈಸೂರಿನ ಇಸ್ಕಾನ್ ದೇವಾಲಯದಲ್ಲಿ ಜೂ.9 ರಂದು ಪಾನಿಹಟಿ ಚಿಡಾ ದಹಿ ಉತ್ಸವ ಆಚರಿಸಲಾಗುತ್ತಿದ್ದು, ದೇವಾಲಯದ ಶ್ರೀ ಧಾಮ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಉತ್ಸವವು ಶ್ರೀ ನಿತ್ಯಾನಂದ ಪ್ರಭುಗಳು ಬಂಗಾಳದಲ್ಲಿರುವ ಪಾನಿಹಟಿ ಎಂಬ ಗ್ರಾಮದಲ್ಲಿ ಶ್ರೀಲ ರಘುನಾಥದಾಸ ಗೋಸ್ವಾಮಿಗಳಿಗೆ ದರ್ಶನ ಕೊಟ್ಟು ಶ್ರೀ ಚೈತನ್ಯ ಮಹಾಪ್ರಭುಗಳವರಲ್ಲಿ ಆಶ್ರಯ ಪಡೆಯಲು ಆಶೀರ್ವದಿಸಿದ ದಿನವಾಗಿದ್ದು, ಗೌಡೀಯ ಸಂಪ್ರದಾಯದಲ್ಲಿ ವಿಶೇಷ ದಿನ ಪಡೆದಿದೆ. ಅಂದು ದೇವಾಲಯದಲ್ಲಿ ಸಂಜೆ 6 ಗಂಟೆಯಿಂದ ಮಹಾ ಅಭಿಷೇಕ, ಮಂಗಳಾರತಿ, ನಾಟಕ ಪ್ರದರ್ಶನ, ಸುಶ್ರಾವ್ಯ ಸಂಕೀರ್ತನೆ ಮತ್ತು ರುಚಿಕರ ಪ್ರಸಾದವನ್ನು ಏರ್ಪಡಿಸಲಾಗಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ದೇವಸ್ಥಾನದ ವ್ಯವಸ್ಥಾಪಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಭೂಮಿ ಶಿಕ್ಷಕ ವಿಜಯ್ ಪದಕಿ ಅವರ ಸಣ್ಣ ಕಥೆಗಳ ಆಂಗ್ಲಭಾಷಾ ಪುಸ್ತಕಗಳ ಬಿಡುಗಡೆ

ಸಣ್ಣ ಕಥೆಗಳು ಸಂಕ್ಷಿಪ್ತ, ನಿಖರ, ತೀಕ್ಷ್ಣತೆ ಹೊಂದಿರಬೇಕು


ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನ ಮಾಜಿ ಜಂಟಿ ಕಾರ್ಯದರ್ಶಿ ರವಿ ಜೋಶಿ ಅಭಿಮತ

ಮೈಸೂರು,ಜೂ.8(ಪಿಎಂ)– ಸಣ್ಣ ಕಥೆಗಳು ಸ್ವಭಾವತಃ ಸಂಕ್ಷಿಪ್ತ, ನಿಖರ ಹಾಗೂ ಅಭಿಪ್ರಾಯಗಳನ್ನು ತೀಕ್ಷ್ಣವಾಗಿ ತಿಳಿಸುವಂತಿರಬೇಕು ಎಂದು ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನ ಮಾಜಿ ಜಂಟಿ ಕಾರ್ಯದರ್ಶಿ ರವಿ ಜೋಶಿ ಅಭಿಪ್ರಾಯಪಟ್ಟರು.

ಮೈಸೂರಿನ ಗೋಕುಲಂನ 3ನೇ ಹಂತದಲ್ಲಿರುವ ಲಯನ್ಸ್ ಸೇವಾನಿಕೇತನ ಶಾಲೆ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರ್ ವೆಸ್ಟ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬೆಂಗಳೂರು ಮೂಲದ ರಂಗಭೂಮಿ ಶಿಕ್ಷಕರೂ ಆದ ಬೆಂಗಳೂರು ಲಿಟಲ್ ಥಿಯೇಟರ್ ಫೌಂಡೇಶನ್ (ಬಿಎಲ್‌ಟಿ) ಸಂಸ್ಥಾಪಕ ಟ್ರಸ್ಟಿ ವಿಜಯ್ ಪದಕಿ ಅವರ ಸಣ್ಣ ಕಥಾ ಸಂಗ್ರಹದ ಎರಡು ಸಂಪುಟಗಳಾದ 'ದಿ ಫಸ್ಟ್ ಆಫರಿಂಗ್' ಮತ್ತು 'ದಿ ಲಾಸ್ಟ್ ಚೀತಾ' ಆಂಗ್ಲಭಾಷಾ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಣ್ಣ ಕಥೆಗಳು ಬಹಳ ಸಂಕ್ಷಿಪ್ತ ಮತ್ತು ನಿಖರವಾಗಿ ಸಂದೇಶವನ್ನು ರವಾನಿಸುವಂತಿರಬೇಕು. ಈ ನಿಟ್ಟಿನಲ್ಲಿ ವಿಜಯ್ ಪದಕಿ ಅವರು ತುಂಬ ಪರಿಣಿತಿ ಹೊಂದಿದ್ದಾರೆ. ಅವರ ಬಹುತೇಕ ಕಥೆಗಳನ್ನು ಕೇವಲ 20 ನಿಮಿಷಗಳಲ್ಲಿ ಓದಿ ಮುಗಿಸಬಹುದು. ಜೊತೆಗೆ ಕಥೆಯ ಸಾರಾಂಶ ಸ್ಪಷ್ಟವಾಗಿ ತಿಳಿಯುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯ್ ಪದಕಿ ಅವರ ಬರವಣಿಗೆ ಅತ್ಯಂತ ವಿಭಿನ್ನ ಮತ್ತು ವೈವಿಧ್ಯಮಯವಾಗಿದೆ. ಈ ವಯಸ್ಸಿನಲ್ಲೂ ಅವರು ತುಂಬಾ ಕ್ರಿಯಾಶೀಲರು. ಅವರು ಕಥೆ, ನಾಟಕ ಸೇರಿದಂತೆ ವಿವಿಧ ಪ್ರಕಾರದ ಬರವಣಿಗೆಯಲ್ಲಿ ಅಗಾಧ ಸಾಹಿತ್ಯ ರಚನೆ ಮಾಡಿದ್ದಾರೆ. 50ಕ್ಕೂ ಹೆಚ್ಚು ನಾಟಕಗಳನ್ನು ಅವರು ರಚಿಸಿದ್ದಾರೆ ಎಂದರು.



ಮೈಸೂರಿನ ಗೋಕುಲಂನ ಲಯನ್ಸ್ ಸೇವಾನಿಕೇತನ ಶಾಲೆ ಸಭಾಂಗಣದಲ್ಲಿ ಭಾನುವಾರ 'ದಿ ಫಸ್ಟ್ ಆಫರಿಂಗ್' ಮತ್ತು 'ದಿ ಲಾಸ್ಟ್ ಚೀತಾ' ಆಂಗ್ಲಭಾಷಾ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಲೇಖಕಿ ಸುಜಾತಾ ರಾಜ್‌ಪಾಲ್, ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನ ಮಾಜಿ ಜಂಟಿ ಕಾರ್ಯದರ್ಶಿ ರವಿ ಜೋಶಿ, ಕೃತಿಗಳ ಕರ್ತೃ ವಿಜಯ್ ಪದಕಿ, ಲಯನ್ಸ್ ಸೇವಾನಿಕೇತನ ಶಾಲೆ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬಳಿಕ ಲೇಖಕಿ ಸುಜಾತಾ ರಾಜ್‌ಪಾಲ್ ಅವರೊಂದಿಗೆ ಸಂವಾದದಲ್ಲಿ ಮಾತನಾಡಿದ ವಿಜಯ್ ಪದಕಿಯವರು, ನನಗೆ ರಂಗಭೂಮಿ ಮತ್ತು ನಿರ್ವಹಣೆ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಇದೆ. ನಿರ್ವಹಣಾ ಕ್ಷೇತ್ರದಲ್ಲಿ ರಂಗಭೂಮಿ ತಂತ್ರಗಳನ್ನು ಬಳಸುತ್ತೇನೆ. ಈ ಎರಡು ಕ್ಷೇತ್ರಗಳ ನಡುವೆ ಸೇತುವೆ ಕಲ್ಪಿಸುತ್ತೇನೆ. ಈ ಎರಡೂ ನೈಸರ್ಗಿಕವಾದ ಸಂಬಂಧ ಹೊಂದಿವೆ. ನಾನು ಬರವಣಿಗೆಯನ್ನು ತಡವಾಗಿ ಆರಂಭಿಸಿದೆ. ನಾನು ಮುಖ್ಯವಾಗಿ ನನ್ನ ತೃಪ್ತಿಗಾಗಿ ಬರೆಯುತ್ತೇನೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ಬರವಣಿಗೆಯಲ್ಲಿ ಓದುಗರಿಗೆ ಸಂದೇಶ ರವಾನಿಸುವ ಕುರಿತು ಪ್ರತಿಕ್ರಿಯಿಸಿದ ಪದಕಿಯವರು, ಮನುಷ್ಯ ಮತ್ತು ಪ್ರಾಣಿಯೇ ಆಗಲಿ ಹೇಳದೇ ಸಂದೇಶವನ್ನು ಗ್ರಹಿಸುವಷ್ಟು ಬುದ್ಧಿವಂತಿಕೆ ಇದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕೆಂದು ಭಾವಿಸಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಸಂದೇಶ ಅಡಗಿಸಿಡುವುದು ಅತ್ಯುತ್ತಮ ಬರವಣಿಗೆಯಾಗಿದೆ. ಆದರೆ ಅದನ್ನು ಓದುಗರ ಕಲ್ಪನೆಗೆ ನಿಲುಕುವಂತೆ ಮಾಡಬೇಕು. ನಾಟಕ ಮತ್ತು ಲೇಖನ ಸೇರಿದಂತೆ ಯಾವುದೇ ಬರವಣಿಗೆಯಲ್ಲಿ ಅದು ಮುಖ್ಯವೇ. ಆದರೆ ಸಂದೇಶ ಬಹಿರಂಗವಾಗಿ ಇರಬಾರದು ಎಂಬುದು ನನ್ನ ಅಭಿಮತವಾಗಿದೆ ಎಂದು ಹೇಳಿದರು.

ಮಾತು ಮುಂದುವರೆಸಿದ ಸುಜಾತಾ ರಾಜ್‌ಪಾಲ್, ನಿಮ್ಮ ಈ ಅಭಿಮತಕ್ಕೆ ನನ್ನ ಸಂಪೂರ್ಣ ಸಹಮತವಿದೆ. ನಾವು ಮಕ್ಕಳಾಗಿದ್ದಾಗ ಪ್ರತಿಯೊಂದು ಕಥೆಗೂ ಒಂದು ನೀತಿ ಇರುತ್ತಿತ್ತು. ಆದರೆ ಈಗ ಕಥೆಗಳಲ್ಲಿ ನೀತಿಯ ಕೊರತೆ ಇದೆಯೇ? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪದಕಿಯವರು, ಮಕ್ಕಳು ನಾವು ಅಂದುಕೊಳ್ಳುವುದಕ್ಕಿಂತಲೂ ಅಥವಾ ಗುರುತಿಸುವುದಕ್ಕಿಂತಲೂ ಹೆಚ್ಚಿನ ಗ್ರಹಿಕೆ ಮಟ್ಟವನ್ನು ಹೊಂದಿದ್ದಾರೆ. ಹಾಗಾಗಿ ಅವರನ್ನು ಕಡೆಗಣಿಸಬಾರದು. ಮಕ್ಕಳು ಕಥೆಯನ್ನು ಕೇಳಿದ ನಂತರದಲ್ಲಿ ಅವರು ಪರಸ್ಪರ ಆ ಬಗ್ಗೆ ಚರ್ಚಿಸಲು ಅವಕಾಶ ಒದಗಿಸಬೇಕು ಎಂದು ಹೇಳಿದರು.

ನಾಟಕ ಪ್ರದರ್ಶನ: ಬಳಿಕ ವಿಜಯ್ ಪದಕಿ ಮತ್ತು ಮಿಂಟಿ ಜೈನ್ ಅವರಿಂದ 'ರೋಬಿಸ್ ಗಾರ್ಡನ್' ನಾಟಕದ ಪ್ರದರ್ಶನ ನಡೆಯಿತು. ಈ ನಾಟಕವು ಬೆಂಗಳೂರು ಲಿಟಲ್ ಥಿಯೇಟರ್ (ಬಿಎಲ್‌ಟಿ) ಸರಣಿಯ ಭಾಗವಾಗಿದ್ದು, ಕೇವಲ ಇಬ್ಬರು ನಟರು ಅಭಿನಯಿಸುವ ವಿನ್ಯಾಸ ಹೊಂದಿದೆ. ಜೊತೆಗೆ ಯಾವುದೇ ಪರಿಕರ, ಅಲಂಕಾರ ಹಾಗೂ ಕಥಾವಸ್ತುವಿಗೆ ಅನುಗುಣವಾಗಿ ನಿರ್ದಿಷ್ಟ ವಾತಾವರಣದ ಸೃಷ್ಟಿ ಇಲ್ಲದೇ ಅಭಿನಯಿಸಬಹುದಾದ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. 'ರೋಬಿಸ್ ಗಾರ್ಡನ್' ರವೀಂದ್ರನಾಥ ಟ್ಯಾಗೋರ್ ಅವರ ಹಾಸ್ಯಮಯ ಬರಹಗಳ ಸಂಗ್ರಹವಾಗಿದೆ. ಲಯನ್ಸ್ ಸೇವಾನಿಕೇತನ ಶಾಲೆ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್, ಲಯನ್ಸ್ ಕ್ಲಬ್ ಆಫ್ ಮೈಸೂರ್ ವೆಸ್ಟ್ ಮಾಜಿ ಅಧ್ಯಕ್ಷ ಸುಕುಮಾರ್ ಮತ್ತಿತರರು ಹಾಜರಿದ್ದರು.

ಬೆಂಗಳೂರಲ್ಲಿ ಕಾಲ್ತುಳಿದ ಪ್ರಕರಣ

ಕ್ರಿಕೆಟ್ ಮಂಡಳಿಯಿಂದ 2 ಕೋಟಿ ರೂ., ಸರ್ಕಾರದಿಂದ 1 ಕೋಟಿ, ಆರ್‌ಸಿಬಿಯಿಂದ 2 ಕೋಟಿ ರೂ. ಪರಿಹಾರಕ್ಕೆ ಆಗ್ರಹಿಸಿ ವಾಟಾಳ್ ಪಕ್ಷ ಪ್ರತಿಭಟನೆ

ಮೈಸೂರು, ಜೂ.8(ಜಿಎ)–ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಕ್ರಿಕೆಟ್ ಮಂಡಳಿ 2 ಕೋಟಿ ರೂ., ರಾಜ್ಯ ಸರ್ಕಾರ 1 ಕೋಟಿ ರೂ., ಆರ್‌ಸಿಬಿ ತಂಡದಿಂದ ತಲಾ ಒಬ್ಬರಿಗೆ 5 ಕೋಟಿ ರೂ., ಪರಿಹಾರ ಕೊಡಬೇಕು ಎಂದು ಆಗ್ರಹಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ನಗರದ ಹಾರ್ಡಿಂಗ್ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ವಾಟಾಳ್ ನಾಗರಾಜ್, ರಾಜ್ಯದ ಇತಿಹಾಸದಲ್ಲಿಯೇ ಆರ್‌ಸಿಬಿ ವಿಜಯೋತ್ಸವ ವೇಳೆ 11 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಮೃತರ ಕುಟುಂಬಸ್ಥರು ಕಣ್ಣೀರು ಹಾಕುತ್ತಿರುವ ದೃಶ್ಯ ನೋಡಿ ಕರುಳು ಹಿಂಡಿದಂತೆ ಆಗುತ್ತದೆ. ಇವರ ಸಾವಿನ ನೋವು ತಟ್ಟುತ್ತದೆ. ಬಿಸಿಸಿಐ 2 ಕೋಟಿ, ರಾಜ್ಯ ಸರಕಾರ 1 ಕೋಟಿ ಕೊಡಬೇಕು , ಆರ್‌ಸಿಬಿ ತಂಡ 2 ಕೋಟಿ ಸೇರಿದಂತೆ ತಲಾ 11 ಮಂದಿಗೆ 5 ಕೋಟಿ ಕೊಡಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಇಂತಹ ಘಟನೆ ನೋಡಿರಲಿಲ್ಲ ಅಂತಾರೆ. ಈ ಸಾವಿಗೆ ಯಾರು ಕಾರಣ ಹಾಗಾದರೆ? ಸಮಾರಂಭ ವ್ಯವಸ್ಥೆ ಮಾಡಿದವರು ಯಾರು? ಸಮಾರಂಭ ನಡೆಸಲು ಕರ್ನಾಟಕ ಸರ್ಕಾರ ಜವಾಬ್ದಾರಿ ವಹಿಸಿಕೊಂಡಿತ್ತು. ಆದ್ದರಿಂದ ಸರ್ಕಾರವೇ ಘಟನೆಯ ಜವಾಬ್ದಾರಿ ಹೊರಬೇಕು ಎಂದು ಕಿಡಿಕಾರಿದರು.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಹೆಚ್ಚುವರಿಯಾಗಿ ಪರಿಹಾರ ನೀಡುವಂತೆ ಆಗ್ರಹಿಸಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ನಗರದ ಹಾರ್ಡಿಂಗ್ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು.

ಪೊಲೀಸರನ್ನು ಅಮಾನತು ಮಾಡಿರುವುದರಿಂದ, ಅವರ ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾರೆ. ಅಮಾನತ್ತಿನಲ್ಲಿ ಇಡಲು ಸರ್ಕಾರ ನಿಖರವಾದ ಕಾರಣ ಕೊಡಬೇಕು. ಆದರೆ ಏಕಾಏಕಿ ಪೊಲೀಸ್ ಅಧಿಕಾರಿಗಳ ಅಮಾನತು ನಿರ್ಧಾರ ಸರಿಯಲ್ಲ. ಪೊಲೀಸರೇನು ಸರ್ಕಾರದ ಗುಲಾಮರಲ್ಲ, ಕೂಡಲೇ ಅಮಾನತು ಆದೇಶ ವಾಪಸ್ ಪಡೆಯಬೇಕು, ಕನ್ನಡ ವಾಟಾಳ್ ಪಕ್ಷದಿಂದ ರಾಜ್ಯಾದ್ಯಂತ ಹಾಗೂ ರಾಜಭವನದ ಬಳಿ ಶೀಘ್ರದಲ್ಲೇ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು.

ಸಾವಿನಲ್ಲೂ ಬಿಜೆಪಿ, ಜೆಡಿಎಸ್ ರಾಜಕೀಯ ಮಾಡುವ ವಿಚಾರವಾಗಿ ಮಾತನಾಡಿ, ಯಡಿಯೂರಪ್ಪ, ಕುಮಾರಸ್ವಾಮಿ ಅವರು ಪರಮ ಪಾಪಿಗಳೇ. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಎಲ್ಲದರಲ್ಲೂ ಪಾಪದವರು ಇದ್ದಾರೆ. ಸಮಾರಂಭ ಮಾಡುವಾಗ ಸಿಎಂ, ಡಿಸಿಎಂ, ಗೃಹಮಂತ್ರಿ ಹಾಗೂ ಹಿರಿಯ ಅಧಿಕಾರಿಗಳು ಕುಳಿತು ಚರ್ಚೆ ಮಾಡಬೇಕು.ಆದರೆ, ವಿಧಾನಸೌಧದ ಮುಂದೆ ಕಾರ್ಯಕ್ರಮ ಮಾಡಿದ್ದೇ ಅಕ್ಷಮ್ಯ ಅಪರಾಧವಾಗಿದೆ ಎಂದು ಕಿಡಿಕಾರಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದ ಸೂಕ್ತ ತನಿಖೆ ಮಾಡಬೇಕು. ತಪ್ಪಿತಸ್ಥರ ವಿರುದ್ಧ ಕೂಡಲೇ ಕ್ರಮ ಜರುಗಿಸಬೇಕು. ಆರ್‌ಸಿಬಿ ತಂಡವನ್ನು ಬ್ಯಾನ್ ಮಾಡಬೇಕು. ಐಪಿಎಲ್ ಎನ್ನುವುದು ಜೂಜಾಟ. ಇದನ್ನೂ ಕೂಡ ಬ್ಯಾನ್ ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಹೋರಾಟಗಾರರಾದ ಶಿವಶಂಕರ್, ಪಾರ್ಥಸಾರಥಿ, ತೇಜಸ್ ಲೋಕೇಶ್‌ಗೌಡ, ಸುರೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಸುರಕ್ಷತಾ ನಿಯಮಾವಳಿಗೆ ಬೈಕ್ ಟ್ಯಾಕ್ಸಿ ರೈಡರ್ಸ್, ಶಾಸಕ ಹರೀಶ್‌ಗೌಡರಿಗೆ ಮನವಿ

ಮೈಸೂರು, ಜೂ.8– ಬೈಕ್ ಟ್ಯಾಕ್ಸಿ ರೈಡರ್ಸ್ ಹಿತದೃಷ್ಟಿಯಿಂದ ನ್ಯಾಯಯುತ ನಿಯಮ ರೂಪಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸುವಂತೆ ಕೋರಿ ಶಾಸಕ ಕೆ.ಹರೀಶ್‌ಗೌಡರಿಗೆ ಮೈಸೂರಿನ ಬೈಕ್ ಟ್ಯಾಕ್ಸಿ ರೈಡರ್‌ಗಳು ಮನವಿ ಸಲ್ಲಿಸಿದರು.

ರಾಜ್ಯದಾದ್ಯಂತ ಸುಮಾರು 6 ಲಕ್ಷ ಬೈಕ್ ಟ್ಯಾಕ್ಸಿ ರೈಡರ್‌ಗಳಿದ್ದಾರೆ. ವಿದ್ಯಾರ್ಥಿಗಳು, ಗೃಹಿಣಿಯರು ಸೇರಿದಂತೆ ಸಾವಿರಾರು ಮಂದಿ ಸಮಯ ಸಿಕ್ಕಾಗ ಬೈಕ್ ಟ್ಯಾಕ್ಸಿ ಮೂಲಕ ಸ್ವಲ್ಪ ಹಣ ಸಂಪಾದಿಸಿ, ತಮ್ಮ ಖರ್ಚು–ವೆಚ್ಚ ನಿರ್ವಹಿಸುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳ ನಿರ್ವಹಣೆಗೆ ಸ್ಪಷ್ಟ ಕಾನೂನುಗಳು ಇಲ್ಲದಿರುವ ಕಾರಣ, ರೈಡರ್‌ಗಳ ಜೀವನ ಆತಂಕದಲ್ಲಿದೆ. ಆದ್ದರಿಂದ ಬೈಕ್ ಟ್ಯಾಕ್ಸಿಗಳ ರೈಡರ್ ಹಾಗೂ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಸ್ಪಷ್ಟ ಹಾಗೂ ನ್ಯಾಯಯುತ ಕಾನೂನುಗಳನ್ನು ರೂಪಿಸಲು ಸರ್ಕಾರವನ್ನು ಒತ್ತಾಯಿಸಬೇಕು ಎಂಬ ರೈಡರ್‌ಗಳ ಮನವಿಗೆ ಸ್ಪಂದಿಸಿದ ಶಾಸಕರು, ತಮ್ಮ ಒತ್ತಾಯವನ್ನು ಸಾರಿಗೆ ಸಚಿವರಿಗೆ ಮನವರಿಕೆ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಈಜು ಸ್ಪರ್ಧೆಯಲ್ಲಿ ಪ್ರತಿಭಾ ಗೌತಮ್‌ಗೆ 2 ಚಿನ್ನ



ಮೈಸೂರು, ಜೂ.8– ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಈಜುಕೊಳದಲ್ಲಿ 'ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್' ವತಿಯಿಂದ ಆಯೋಜಿಸಿದ್ದ 'ರಾಜ್ಯ ಮಟ್ಟದ ಈಜು ಸ್ಪರ್ಧೆ'ಯಲ್ಲಿ ಗೃಹಿಣಿ ಪ್ರತಿಭಾ ಗೌತಮ್ 2 ಚಿನ್ನದ ಪದಕ ಗಳಿಸಿದ್ದಾರೆ. ಇಂದು ನಡೆದ ಸ್ಪರ್ಧೆಯಲ್ಲಿ ಪ್ರತಿಭಾ, 50 ಮೀಟರ್ ಬ್ಯಾಕ್‌ಸ್ಟ್ರೋಕ್ ಮತ್ತು 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಮಾಸ್ಟರ್ಸ್ ವಿಭಾಗದಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ.

ಎರಡು ಮಕ್ಕಳ ತಾಯಿಯಾಗಿರುವ ಪ್ರತಿಭಾ, ಕಳೆದ ವರ್ಷ ತಮ್ಮ ಈಜು ಪ್ರಯಾಣವನ್ನು ಪ್ರಾರಂಭಿಸಿದರು. ಈಜುಗಾರಿಕೆ ಮೇಲೆ ಅತೀವ ಆಸಕ್ತಿ ಹೊಂದಿರುವ ಇವರು ಕೌಟುಂಬಿಕ ಜವಾಬ್ದಾರಿ ನಿರ್ವಹಣೆಯೊಂದಿಗೆ ಕಠಿಣ ಪರಿಶ್ರಮದಿಂದ ಈಜು ಅಭ್ಯಾಸ ಮಾಡಿ, ಯಶಸ್ವಿಯಾಗಿದ್ದಾರೆ.

ಕರ್ನಾಟಕ ಈಜು ಸಂಘ(ಕೆಎಸ್‌ಎ)ವು ಅಕ್ಟೋಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಸಲಿರುವ 26ನೇ ರಾಜ್ಯ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸುವ ಗುರಿ ಹೊಂದಿರುವ ಪ್ರತಿಭಾ ಗೌತಮ್, ಸದ್ಯ ಮೈಸೂರಿನ ಚಾಮುಂಡಿ ವಿಹಾರ ಈಜುಕೊಳ(ಬಿಎಸ್‌ಆರ್‌ಸಿ)ದಲ್ಲಿ ಹಿರಿಯ ತರಬೇತುದಾರ ಮನೋಜ್ ಕುಮಾರ್ ಮತ್ತು ಸಹಾಯಕ ತರಬೇತುದಾರ ಸಂತೋಷ್ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಎಐ ಮಾಧ್ಯಮ ಎಷ್ಟೇ ಪ್ರಬಲವಾಗಿದ್ದರೂ ಸಿನಿಮಾ, ರಂಗ ಭೂಮಿಗೇನು ಅಡ್ಡಿಯಿಲ್ಲ

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಯ

ಮೈಸೂರು, ಜೂ.8(ಎಂಟಿವೈ)– ಕೃತಕ ಬುದ್ಧಿಮತ್ತೆ(ಎಐ) ಮಾಧ್ಯಮ ಪ್ರಬಲವಾಗುತ್ತಿದ್ದರೂ ಸಿನಿಮಾ ಮತ್ತು ರಂಗಭೂಮಿ ಶಕ್ತಿಯುತವಾಗಿ ಬೆಳೆಯುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಂಗಾಯಣದ ಶ್ರೀರಂಗ ಸಭಾಂಗಣದಲ್ಲಿ ಭಾನುವಾರ ನಡೆದ ಡಾ.ರಾಜಪ್ಪ ದಳವಾಯಿ ನಿರ್ದೇಶನದ 'ಹರಿಶ್ಚಂದ್ರ' ಕಿರುಚಿತ್ರಕ್ಕೆ ಕೋಲ್ಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಎಂಟು ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದು ನಾವು ಕೃತಕ ಬುದ್ಧಿಮತ್ತೆ(ಎಐ) ಯುಗದಲ್ಲಿ ಬದುಕುತ್ತಿದ್ದೇವೆ. ಈ ತಂತ್ರಜ್ಞಾನ ಮುಂದೆ ಯಾವ ಯಾವ ಸೃಷ್ಟಿಗಳನ್ನು ಮಾಡಿ ನಮ್ಮನ್ನು ಎಲ್ಲಿಗೆ ಕರೆದೊಯ್ಯಬಹುದೋ ಗೊತ್ತಿಲ್ಲ. ಆದರೆ ಸಿನಿಮಾ ಹಾಗೂ ರಂಗಭೂಮಿ ಎರಡೂ ಇನ್ನಷ್ಟು ಸಶಕ್ತವಾಗುತ್ತಿವೆ. ಈ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲವೇ ಕೆಲಸ ಮಾಡುತ್ತಿದೆ. ಹಾಗಾಗಿ ಇಲ್ಲಿ ಎಐ ಪ್ರಭಾವ ಬೀರುವುದಿಲ್ಲ ಎಂದರು.

ಕಿರುಚಿತ್ರ ಎನ್ನುವುದು ಬದುಕಿನ ಫಿಲಾಸಫಿಯನ್ನು ಮನವರಿಕೆ ಮಾಡಿಕೊಡುತ್ತದೆ. ಇಂದು ಕಾಲ ಬಹಳ ವೇಗವಾಗಿ ಚಲಿಸುತ್ತಿದೆ. ಕಾಲಕ್ಕೆ ತಕ್ಕಂತೆ ನಾವು ಪರಿಕರಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಕಿರುಚಿತ್ರ ಎನ್ನುವುದು ಬದುಕನ್ನು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ರಂಗಭೂಮಿ ಮತ್ತು ಸಿನಿಮಾಗಳು ಮೇಲ್ನೋಟಕ್ಕೆ ಪರಸ್ಪರ ಹತ್ತಿರ ಇವೆ ಅನಿಸಿದರೂ ವಿಭಿನ್ನ ದೃಷ್ಟಿಕೋನ ಹೊಂದಿವೆ ಎಂದು ಹೇಳಿದರು.

ಅಭಿನಯ ಎನ್ನುವುದು ಎರಡರಲ್ಲೂ ಇದೆ. ಆದರೆ, ಸಿನಿಮಾ ಹಾಗೂ ರಂಗಭೂಮಿಯ ಪ್ರಾಕ್ಟೀಸ್ ಮಾಡಬೇಕಾದರೆ ಇವೆರಡು ಬೇರೆ ಬೇರೆ ಹಾಗೂ ವಿಭಿನ್ನ ಎಂದು ತಿಳಿಯುತ್ತದೆ. ಸಿನಿಮಾ ಪ್ರಬಲವಾದ ಹಾಗೂ ಶಕ್ತಿಶಾಲಿಯಾದ ಮಾಧ್ಯಮ. ರಂಗಭೂಮಿಯೂ ಸಶಕ್ತ ಮಾಧ್ಯಮವಾಗಿದೆ ಎಂದರು.



ಮೈಸೂರಿನ ರಂಗಾಯಣದ ಶ್ರೀರಂಗ ಸಭಾಂಗಣದಲ್ಲಿ ಭಾನುವಾರ ಕೋಲ್ಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ನಾಲ್ಕು ಪ್ರಶಸ್ತಿ ವಿಜೇತ 'ಹರಿಶ್ಚಂದ್ರ' ಕಿರುಚಿತ್ರದ ಕಲಾವಿದರಾದ ನಾಗರಾಜ ಆದವಾನಿ, ಎಸ್.ಜಿ.ಸೋಮಶೇಖರ್ ರಾವ್ ಅವರನ್ನು ಸನ್ಮಾನಿಸಲಾಯಿತು.

ಚಿತ್ರಕಲಾ ಲೇಖಕ ಬಿ.ಎ.ಮಹೇಶ್ ಮಾತನಾಡಿ, ಕಿರುಚಿತ್ರಗಳೇ ಇಂದು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಥಿಯೇಟರ್‌ಗಳಿಗೆ ಜನರನ್ನು ಸೇರಿಸುವುದು ಕಷ್ಟಕರವಾಗುತ್ತಿದೆ. ಇಂದು ಸಾಮಾಜಿಕ ಜಾಲ ತಾಣದಲ್ಲಿ ಹೆಚ್ಚು ಪ್ರಚಲಿತದಲ್ಲಿರುವುದು, ಎಲ್ಲರಿಗೂ ಆಕರ್ಷಣೀಯವಾಗಿರುವುದು ರೀಲ್ಸ್‌ಗಳು. ಇಂತಹ ರೀಲ್ಸ್‌ಗಳಿಂದಾಗಿ ಸಿನಿಮಾಗಳಲ್ಲಿ ಕಾಮಿಡಿ ಸೀನ್‌ಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಆದರೆ ಇಂತಹ ಸಮಸ್ಯೆಗಳು ಕಿರುಚಿತ್ರಗಳಲ್ಲಿ ಇರುವುದಿಲ್ಲ. ಒಂದು ಸಿನಿಮಾದಲ್ಲಿ ಜನರಿಗೆ ಎರಡೂವರೆ ಗಂಟೆಯಲ್ಲಿ ಕೊಡಬಹುದಾದ ಸಂದೇಶವನ್ನು ಕೇವಲ ಒಂದು ನಿಮಿಷದಲ್ಲಿ ಹೇಳಬೇಕಾಗುತ್ತದೆ. ಹೀಗಾಗಿ ಕಿರುಚಿತ್ರದ ಆಯ್ಕೆ ತುಂಬಾ ಕಷ್ಟಕರವಾಗಿರುತ್ತದೆ ಎಂದು ತಿಳಿಸಿದರು.

ಧಾರಾವಾಹಿಗಳನ್ನು ಮನೆಯಲ್ಲಿ ಹೇಗೋ ನೋಡುತ್ತಾರೆ. ಆದರೆ ಈ ಕಿರುಚಿತ್ರಗಳನ್ನು ಎಲ್ಲಿಯಾದರೂ ನೋಡಬಹುದು. ರಾಜಪ್ಪ ದಳವಾಯಿ ಆಯ್ಕೆ ಮಾಡಿಕೊಂಡಿರುವ ಮಾರ್ಗ ಸುಂದರವಾಗಿದೆ. ಹರಿಶ್ಚಂದ್ರ ಕಿರುಚಿತ್ರದಲ್ಲಿ ಬರುವ ಸ್ಮಶಾನದ ದೃಶ್ಯವೊಂದರಲ್ಲಿ ಇಡೀ ಜೀವನದ ಕಥೆಯನ್ನೇ ಹೇಳಲಾಗಿದೆ. ಎಷ್ಟೇ ಸಂಪಾದನೆ ಮಾಡಿದರೂ, ಏನೇ ಸಾಧನೆ ಮಾಡಿದರೂ ಕಡೆಗೆ ಒಂದು ದಿನ ಸ್ಮಶಾನಕ್ಕೆ ಬರಬೇಕು ಎಂಬುದನ್ನು ಸರಳವಾಗಿ ತಿಳಿಸಿ ದ್ದಾರೆ. ಬೆಂಕಿ ಎಂಬುದು ಜೀವನ ಹಾಗೂ ಬೂದಿ ಎಂಬುದು ಸಾವು. ಇದಕ್ಕಾಗಿ ಜೀವನದಲ್ಲಿ ನಾವು ಎಷ್ಟೋ ಕೆಲಸಗಳನ್ನು ಮಾಡುತ್ತೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹರಿಶ್ಚಂದ್ರ ಕಿರುಚಿತ್ರದ ಕಲಾವಿದರಾದ ನಾಗರಾಜ ಆದವಾನಿ, ಎಸ್.ಜಿ.ಸೋಮಶೇಖರ್ ರಾವ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಿನಿಮಾ ನಟ ಹಾಗೂ ರಂಗಭೂಮಿ ಕಲಾವಿದರಾದ ರಾಜಶೇಖರ ಕದಂಬ, ಸಿನಿಮಾ ಗುರು ನಟರಾಜ್ ಶಿವು, ಹರಿಶ್ಚಂದ್ರ ಕಿರುಚಿತ್ರದ ನಿರ್ದೇಶಕ ರಾಜಪ್ಪ ರಾಮಣ್ಣ ದಳವಾಯಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹೊಳೆನರಸೀಪುರದಲ್ಲಿ ನಾಲ್ವರು ಖತರ್ನಾಕ್ ಕಳ್ಳಿಯರ ಬಂಧನ

ಹಾಸನ: ಜಿಲ್ಲೆಯ ಹೊಳೆನರಸೀಪುರ ನಗರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ನಾಲ್ವರು ಖತರ್ನಾಕ್ ಕಳ್ಳಿಯರನ್ನು ಬಂಧಿಸಿ 6.38 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ನಾಲ್ವರು ಒಂದೇ ಗ್ರಾಮದವರಾಗಿದ್ದು ಕಳ್ಳತನವನ್ನೇ ಫ್ಯಾಷನ್ ಮಾಡಿಕೊಂಡಿದ್ದರು. ಬಂಧಿತ ಶಶಿ ಹಾಗೂ ವಿದ್ಯಾ ವಿರುದ್ಧ ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿವೆ. ಮಾಧವಿ ಹಾಗೂ ಅಕಿಲ ಮೊದಲ ಪ್ರಕರಣದಲ್ಲಿ ಬಂಧನವಾಗಿದ್ದಾರೆ. ಶಶಿ ಗಾರ್ಮೆಂಟ್ಸ್ ಉದ್ಯೋಗಿಯಾಗಿದ್ದು ಉಳಿದ ಮೂವರು ಕ್ರಷರ್‌ಗಳಲ್ಲಿ ಕಲ್ಲು ಒಡೆಯುವ ಕೆಲಸ ಮಾಡಿಕೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಅಮಾಯಕ ಮಹಿಳೆಯರೇ ಇವರೇ ಟಾರ್ಗೆಟ್ ಆಗಿದ್ದು ನೂಕುನುಗ್ಗಲಿನಲ್ಲಿ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್ ಹತ್ತುವಾಗ ಅವರ ಮೈ ಮೇಲಿನ ಚಿನ್ನದ ಒಡವೆ, ವ್ಯಾನಿಟಿ ಬ್ಯಾಗ್‌ಗಳಿದ್ದ ಚಿನ್ನಾಭರಣಗಳನ್ನ ದೋಚುತ್ತಿದ್ದರು. ತಾವು ಸಹ ಬಸ್ ಹತ್ತುವರಂತೆ ನಟನೆ ಮಾಡುತ್ತಿದ್ದು ಯಾರಿಗೂ ಸಂಶಯ ಬರುತ್ತಿರಲಿಲ್ಲ.

ಸದ್ಯ ಬಂಧಿತರಿಂದ 35 ಗ್ರಾಂ ತೂಕದ ಚಿನ್ನದ ಸರ, 22 ಗ್ರಾಂ ತೂಕದ ನೆಕ್ಲೆಸ್, 5 ಗ್ರಾಂ ತೂಕದ ಬೆಳ್ಳಿ ಗಣಪತಿ ಡಾಲರ್ ಹಾಗೂ 29 ಗ್ರಾಂ ತೂಕದ ಚಿನ್ನದ ಸರ ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಮಹಮದ್ ಸುಜೇತಾ ಮಾಹಿತಿ ನೀಡಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ನನ್ನಲ್ಲಿ ಏನ್ ಇಷ್ಟ ಆಗಿ ನನ್ನ ಮದುವೆ ಆಗಲು ಒಪ್ಪಿಕೊಂಡೆ.

ಹೆಂಡತಿ : ಮದುವೆಗೆ ಮುಂಚೆ ಒಂದೆರಡು ಬಾರಿ ನಮ್ಮನೆ ಬಾಲ್ಕನಿಯಿಂದ ನಿಮ್ಮನ್ನು ನೋಡಿದ್ದೆ.

ಗಂಡ : ಹೌದಾ... ಏನ್ ನೋಡಿದ್ದೆ?

ಹೆಂಡತಿ : ನೀವು ಬಟ್ಟೆ ಒಗೀತಾ ಇದ್ದದ್ದು, ಪಾತ್ರೆ ತೊಳೀತಾ ಇದ್ದದ್ದು...

ಮೈಸೂರು ಮಿತ್ರ

ಸೋಮವಾರ, 9 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಟೀಕೆಗಳಿಗೆ ನಮ್ಮ ಜೀವನ, ವ್ಯಕ್ತಿತ್ವ, ನಡವಳಿಕೆಗಳೇ ಉತ್ತರ ಹೇಳಬೇಕೇ ಹೊರತು ಮಾತಿನಿಂದ ಹೇಳಿ ಪ್ರಯೋಜನವಿಲ್ಲ.'

– ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ

ನಿಮ್ಮ ಪತ್ರಗಳು

ಬೆಳವಣಿಗೆ

ಮಾನ್ಯರೆ,

ಮಕ್ಕಳು
ಬೆಳೆಬೆಳೆದು
ದೊಡ್ಡವರಾಗುತ್ತಾರೆ;
ದೊಡ್ಡವರು ಬೆಳೆಬೆಳೆದು
ಮಕ್ಕಳಾಗುತ್ತಾರೆ!

ಕೋಳಿ ಸಮಾಚಾರ

ಒಂದೆಡೆ ಕೋಳಿಗಳ ಸಾವು,
ಇನ್ನೊಂದೆಡೆ ಕೋಳಿಗಳ ವಧೆ;
ಮತ್ತೊಂದೆಡೆ ರಾಜಕಾರಣಿಗಳ ಮಧ್ಯೆ
'ಕೋಳಿ ಜಗಳ'!
(ಕಡೆಯದು ಸದಾ ಇದ್ದದ್ದೆ)

– ಸಿಪಿಕೆ, ಮೈಸೂರು

ಅವ್ಯವಸ್ಥೆ ಸರಿಪಡಿಸಲು ಮನವಿ

ಮಾನ್ಯರೆ,

ಮೈಸೂರಿನ ಹೈವೇ ವೃತ್ತದ ಬಳಿಯಿರುವ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ಸಮಸ್ಯೆಗಳು ತಾಂಡವವಾಡುತ್ತಿವೆ. ಬನ್ನಿಮಂಟಪ, ಬಂಬೂ ಬಜಾರ್, ಯಾದವಗಿರಿ, ಮಂಡಿಮೊಹಲ್ಲಾ, ಕೈಲಾಸಪುರಂ, ತಿಲಕ್ ನಗರ ಭಾಗದ ಜನರು ಶವ ಸಂಸ್ಕಾರ ಮಾಡಲು ಇಲ್ಲಿಗೆ ಬರುತ್ತಾರೆ. ಆದರೆ ಇಲ್ಲಿ ಶೌಚಾಲಯ, ಬೀದಿ ದೀಪ, ಸಮರ್ಪಕ ನೀರಿನ ವ್ಯವಸ್ಥೆ, ಬಿಸಿಲು–ಮಳೆ ತಡೆಯಲು ಚಾವಣಿ, ಅನೈತಿಕ ಚಟುವಟಿಕೆ ತಡೆಯಲು ಭದ್ರತಾ ಸಿಬ್ಬಂದಿ ನಿಯೋಜನೆ, ಶವ ಸಂಸ್ಕಾರಕ್ಕೆ ತೆರಳಲು ರಸ್ತೆ ವ್ಯವಸ್ಥೆ ಆಗಬೇಕಿದೆ. ಈ ಬಗ್ಗೆ ಕ್ರಿಯಾಶೀಲ ಚಾಮರಾಜ ಕ್ಷೇತ್ರದ ಶಾಸಕರು ಗಮನ ಹರಿಸಲಿ.

–ನೊಂದ ನಿವಾಸಿಗಳು, ಮೈಸೂರು

ಸಾಟಿಯೇ ಇಲ್ಲದ ಸರಳತೆ

ಮಾನ್ಯರೆ,

ಇತ್ತೀಚೆಗೆ ಹಾಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ ಜಿ.ಟಿ.ದೇವೇಗೌಡರು ತಮ್ಮ ಸಹೋದರನ ಪುತ್ರನ ವಿವಾಹವನ್ನು ಅತ್ಯಂತ ಸರಳವಾಗಿ ಧರ್ಮಸ್ಥಳದಲ್ಲಿ ನೆರವೇರಿಸಿ ತಮ್ಮ ಸರಳತೆಯನ್ನು ಮೆರೆದು ಸಮಾಜಕ್ಕೆ ಮಾದರಿ ಎನಿಸಿದ್ದಾರೆ. ಈ ವಿವಾಹದ ಆರತಕ್ಷತೆಯನ್ನು ಸಹ ಏರ್ಪಡಿಸಿರುವುದಿಲ್ಲ. ಈ ಹಿಂದೆ ಜಿ.ಟಿ.ದೇವೇಗೌಡರು ತಮ್ಮ ಪುತ್ರಿಯ ವಿವಾಹವನ್ನು ತಿರುಪತಿಯಲ್ಲಿ ಅತ್ಯಂತ ಸರಳವಾಗಿ ನೆರವೇರಿಸಿದ್ದರು. ಇಂದಿನ ಆಡಂಬರದ ಶ್ರೀಮಂತರ ಮದುವೆಗಳಲ್ಲಿ ಆಗುವ ದುಂದುವೆಚ್ಚ, ಶ್ರೀಮಂತಿಕೆಗಳನ್ನು ನೋಡಿದರೆ ಜಿ.ಟಿ.ದೇವೇಗೌಡರ ನಿರ್ಧಾರ ಶ್ಲಾಘನೀಯ, ಮೆಚ್ಚುವಂತಹದ್ದು.

–ಜಿ.ಪಿ.ರಾಜೇಶ್ ಮತ್ತು ಸ್ನೇಹಿತರು, ವಿವಿ ಮೊಹಲ್ಲಾ, ಮೈಸೂರು.

ನಟ ಕಮಲ್‌ಹಾಸನ್‌ಗೆ ಡಾ. ಮಾಸ್ತಿ, ಡಾ. ತಮಿಳು ಸೆಲ್ವಿ ಮಾದರಿಯಾಗಲಿ

ಮಾನ್ಯರೆ,

ಬಹುಭಾಷಾ ಚಲನಚಿತ್ರ ನಟ ಕಮಲ್‌ಹಾಸನ್, ಕನ್ನಡ ಭಾಷೆ ಕುರಿತಾದ ತಮ್ಮ ತಾತ್ಸಾರದ ಹೇಳಿಕೆಯಿಂದ ವಿವಾದವನ್ನು ಸೃಷ್ಟಿಸಿಕೊಂಡಿದ್ದಾರೆ. ಕನ್ನಡ ಭಾಷಾ ಪರಂಪರೆಯನ್ನು, ಇದರ ಸಾಹಿತ್ಯ–ಸಂಸ್ಕೃತಿಯನ್ನು ಅವರು ಅವಲೋಕಿಸಿದ್ದರೆ, ಕನ್ನಡಿಗರ ನ್ಯಾಯಬದ್ಧ ಪ್ರತಿಭಟನೆಗೆ ಸ್ಪಂದಿಸಿ ಕ್ಷಮೆ ಕೇಳಿದ್ದರೆ ಇಷ್ಟು ವಿವಾದ ಉಂಟಾಗುತ್ತಿರಲಿಲ್ಲ.

ಈ ಸಂದರ್ಭದಲ್ಲಿ ಸಾಹಿತ್ಯ, ರಂಗಭೂಮಿ ಹಾಗೂ ಚಲನಚಿತ್ರ ಕಿರುತೆರೆಗೆ ಚಿತ್ರಕಥೆಯನ್ನು ದೊರಕಿಸಿಕೊಟ್ಟ ತಮ್ಮ ಮನೆಮಾತು ತಮಿಳಾದರೂ, ಕನ್ನಡದ ಆಸ್ತಿಯೆಂದು ಅಭಿಮಾನಿಗಳಿಂದ ಕರೆಯಿಸಿಕೊಂಡ ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರನ್ನೂ, ಕನ್ನಡ ಭಾಷೆಯನ್ನು ಮೂಲವಾಗಿ ಅಧ್ಯಯನ ಮಾಡಿ, ತಮಿಳುನಾಡಿನ ವಿಶ್ವವಿದ್ಯಾನಿಲಯವೊಂದರಲ್ಲಿ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕಿಯಾಗಿರುವ ಡಾ. ತಮಿಳು ಸೆಲ್ವಿಯವರನ್ನೂ ಕಮಲ್‌ಹಾಸನ್ ಅವರು ನೆನೆಯುವುದು ಸೂಕ್ತ.

ಈ ಮಾದರಿಯ ವಿವರಗಳು ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಸಾಕಷ್ಟು ಸಂಗತಿಗಳು ದೊರೆಯುತ್ತವೆ. ಕಮಲ್‌ಹಾಸನ್ ಅವರು ಕನ್ನಡ ಭಾಷೆ ಕುರಿತು ಆಡಿದ ತಾತ್ಸಾರದ ಮಾತುಗಳು ಆಕಸ್ಮಿಕವಾಗಿ ಅವರಿಂದ ಪ್ರಕಟವಾಗಿದ್ದರೆ, ಅವರು ಕನ್ನಡಿಗರ ಕ್ಷಮೆ ಕೋರಿದರೆ, ಸಂಘರ್ಷ ನಿವಾರಣೆಗೊಂಡು, ಕಮಲ್‌ಹಾಸನ್ ಹಿರಿಯರಾಗುತ್ತಾರೆ. ಈ ಹಾದಿಯಲ್ಲಿ ಅವರು ಚಿಂತನೆ ಹರಿಸುವುದು ಸೂಕ್ತ.

– ಎ.ಡಿ.ನಂಜುಂಡಸ್ವಾಮಿ, ಹೆಬ್ಬಾಳ್, 1ನೇ ಹಂತ, ಮೈಸೂರು.

ಜೂಜಾಟ ತಡೆಯಿರಿ, ಜೀವ ಉಳಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿ, ತಳೂರು ಗ್ರಾಮದಲ್ಲಿ ಕಳೆದ 3–4 ವರ್ಷಗಳಿಂದ ಜೂಜಾಟ (ಇಸ್ಪಿಟ್) ದಂಧೆ ದಿನೇ ದಿನೆ ಹೆಚ್ಚಾಗಿದ್ದು, ಗ್ರಾಮದ ನಿಗೂಢ ಪ್ರದೇಶದಲ್ಲಿ, ಜಮೀನುಗಳಲ್ಲಿ ಮೀಟರ್ ಬಡ್ಡಿ ನೀಡಿ ಜೂಜಾಟ ನಡೆಯುತ್ತಿದೆ. ಕೆಲ ದಿನಗಳ ಹಿಂದೆಯಷ್ಟೇ ಓರ್ವ ವ್ಯಕ್ತಿ ಜೂಜಾಟದಲ್ಲಿ ಸೋತು ತನ್ನೆಲ್ಲಾ ಜಮೀನನ್ನು ಮಾರಿದ್ದಲ್ಲದೆ ಉಳಿದ ಸಾಲವನ್ನು ತೀರಿಸಲು ಸಾಧ್ಯವಾಗದೆ ಸಾವನ್ನಪ್ಪಿರುವ ಘಟನೆಯು ಇತ್ತೀಚೆಗೆ ಸಂಭವಿಸಿದೆ. ಈ ರೀತಿಯ ಘಟನೆ ಸಂಭವಿಸಲು ಸಂಬಂಧಪಟ್ಟ ಪೊಲೀಸ್ ಠಾಣೆ ಅಧಿಕಾರಿಗಳ ವೈಫಲ್ಯವೇ ಮುಖ್ಯ ಕಾರಣವಾಗಿದೆ.

ಈ ಜೂಜಾಟಕ್ಕೆ ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರತಿ ದಿನ ಹಫ್ತ ವಸೂಲಿ ಮಾಡುತ್ತಿದ್ದು, ದಿನವೊಂದಕ್ಕೆ ಹತ್ತು ಸಾವಿರ ರೂ.ಗಳನ್ನು ಪೊಲೀಸರು ಪಡೆಯುತ್ತಿದ್ದಾರೆ ಎಂಬ ವಿಷಯ ತಿಳಿದು ಬಂದಿದೆ.

ದಯಮಾಡಿ ಇಲಾಖೆಯ ಮೇಲಾಧಿಕಾರಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ, ನಿಗೂಢ ಜಾಗವನ್ನು ಪತ್ತೆ ಮಾಡಿ, ಈ ರೀತಿಯ ಜೂಜಾಟಕ್ಕೆ ಕಡಿವಾಣ ಹಾಕುವಂತೆ ತಳೂರು ಗ್ರಾಮಸ್ಥರು ಈ ಮೂಲಕ ಪೊಲೀಸ್ ಅಧೀಕ್ಷಕರಿಗೆ ವಿನಂತಿಸುತ್ತಿದ್ದಾರೆ.

–ತಳೂರು ಗ್ರಾಮದ ಗ್ರಾಮಸ್ಥರು, ಮತ್ತು ಸಮಾಜ ಸೇವಕರು



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅಭಿವೃದ್ಧಿ ರಾಷ್ಟ್ರಕ್ಕಿಂತ ಪ್ರಬುದ್ಧ ರಾಷ್ಟ್ರ ನಮ್ಮದಾಗಬೇಕು!

ಶಿಕ್ಷಣ ಎಂಬುದು ಮನುಷ್ಯನ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಸಾವಿರಾರು ವರ್ಷಗಳಿಂದ ಶಿಕ್ಷಣದ ವ್ಯಾಪ್ತಿ ಹಾಗೂ ಸ್ವರೂಪ ಬದಲಾಗುತ್ತಲೇ ಇದೆ. ಕೆಲವು ದೇಶಗಳಲ್ಲಿ ಅಕ್ಷರ ಜ್ಞಾನವನ್ನು ಶಿಕ್ಷಣ ಎಂದು ಕರೆದರೆ, ಮತ್ತೆ ಕೆಲವು ದೇಶಗಳಲ್ಲಿ ಕೌಶಲಗಳ ಕಲಿಕೆಯನ್ನು ಶಿಕ್ಷಣ ಎಂದು ಪರಿಗಣಿಸಲಾಗುತ್ತದೆ. ಇನ್ನು ಕೆಲವು ದೇಶ ಗಳಲ್ಲಿ ಅಕ್ಷರ ಜ್ಞಾನ, ಕೌಶಲಗಳಷ್ಟೇ ಶಿಕ್ಷಣವಲ್ಲ, ಅವುಗಳ ಜೊತೆಗೆ ಸ್ವಚ್ಛತೆ, ದೇಶಪ್ರೇಮ, ದೈಹಿಕ ವ್ಯಾಯಾಮಕ್ಕೆ ಕ್ರೀಡೆ, ಕಾಯಕ ನಿಷ್ಠೆ, ಪರಸ್ಪರ ಗೌರವಿಸಿಕೊಳ್ಳುವ ಸಂಸ್ಕಾರ, ಸ್ಮಾರಕಗಳ ರಕ್ಷಣೆ, ದೇಶದ ಸಂಸ್ಕೃತಿ ಕಾಪಾಡುವ ಮನೋಭಾವ, ಕೌಟುಂಬಿಕ ವ್ಯವಸ್ಥೆಯನ್ನು ಭದ್ರಗೊಳಿಸುವುದು, ಪ್ರಬುದ್ಧ ಪ್ರಜೆಗಳನ್ನು ರೂಪಿಸುವುದು ಇವೆಲ್ಲವನ್ನು ಶಿಕ್ಷಣದ ವ್ಯಾಪ್ತಿಗೆ ಸೇರಿಸಲಾಗಿದೆ. ಅಂತಹ ದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಿರಿವಂತ ರಾಷ್ಟ್ರವಾಗಲು ಸಾಧ್ಯ. ದೇಶವು ರಸ್ತೆ, ಸೇತುವೆ, ರೈಲು–ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿ ಹೊಂದಿದ ರಾಷ್ಟ್ರ ಎಂದು ಹೆಮ್ಮೆ ಪಡುವ ಬದಲು ಪ್ರಬುದ್ಧ ರಾಷ್ಟ್ರ ಕಟ್ಟಿದ್ದೇವೆ ಎಂದು ಹೆಮ್ಮೆಪಡುವಂತಾಗಬೇಕು.

'ಒಂದು ರಾಷ್ಟ್ರವನ್ನು ಹಾಳು ಮಾಡಬೇಕೆಂದರೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಯನ್ನು ದುರ್ಬಲಗೊಳಿಸಿದರೆ ಸಾಕು' ಎಂದು ಮಹಾತ್ಮನೊಬ್ಬ ಹೇಳಿದ್ದಾನೆ. ಬಹುಶಃ ಭಾರತದ ಇಂದಿನ ಶಿಕ್ಷಣ ವ್ಯವಸ್ಥೆಗೆ ಇದು ಅನ್ವಯವಾಗುತ್ತಿದೆ ಎನ್ನಬಹುದು. ಇಂದಿನ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳಿಕೆಯೇ ಪ್ರಮುಖ ಮಾನದಂಡವಾಗುತ್ತಿರುವ ಹಿನ್ನೆಲೆಯಲ್ಲಿ ಶಾಲಾ–ಕಾಲೇಜುಗಳು ಮೌಲ್ಯಗಳನ್ನು ಬದಿಗೊತ್ತಿ, ದೇಶಪ್ರೇಮವನ್ನು ಮೂಲೆಗುಂಪು ಮಾಡಿ, ಅಂಕ ಗಳಿಸಿಕೊಡಲು ಒಂದು ಮಾದರಿಯ ಕಾರ್ಖಾನೆಗಳಾಗುತ್ತಿವೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಶೇ.10–20 ವರ್ಗಕ್ಕೆ ಉತ್ತಮ ಶಿಕ್ಷಣ ದೊರಕಿ, ಉತ್ತಮ ಸಂಬಳದ ಕೆಲಸ ದೊರಕುತ್ತಿದೆ. ಆದರೆ ಅಸಮರ್ಪಕ ಶಿಕ್ಷಣ ವ್ಯವಸ್ಥೆಯಿಂದ ಕಡಿಮೆ ಅಂಕಗಳಿಸಿದ ವಿದ್ಯಾರ್ಥಿಗಳು ಸಾವಿಗೆ ಶರಣಾಗುತ್ತಿದ್ದಾರೆ, ಅದ್ದೂರಿಯಾಗಿ ಮದುವೆಯಾದ ವಿದ್ಯಾವಂತ ಮಕ್ಕಳು ಒಂದು ವರ್ಷ ಪೂರೈಸುವ ಮೊದಲು ವಿಚ್ಛೇದನ ಪಡೆಯುತ್ತಿದ್ದಾರೆ. ಮನೆಯ ಸಂಸ್ಕಾರ, ನೆಲದ ಸಂಸ್ಕೃತಿ ಪಾಲಿಸುವುದಿರಲಿ ನಾಡಿನ ಕಾನೂನನ್ನು ಪಾಲಿಸದೆ ಅನಾಗರಿಕರಂತೆ ವರ್ತಿಸುತ್ತಿರುವುದನ್ನು ಕಂಡಾಗ ಇವರೆಲ್ಲಾ ವಿದ್ಯಾವಂತರಾ? ಎಂದು ಪ್ರಶ್ನೆ ಮಾಡುವಂತಾಗುತ್ತದೆ. ಇದರ ಪರಿಣಾಮವನ್ನು ಇಂದು ದೇಶ ಅನುಭವಿಸುತ್ತಿದೆ. ನಾಗರಿಕ ಪ್ರಜ್ಞೆ ಕಳೆದುಕೊಂಡ ಅನೇಕ ಶಿಕ್ಷಿತರೇ ಇಂದು ಜೈಲು ಹಕ್ಕಿಗಳಾಗು ತ್ತಿದ್ದಾರೆ, ಅನೇಕ ಗಂಭೀರ ಅಪರಾಧ ಪ್ರಕರಣಗಳಲ್ಲಿ ವಿದ್ಯಾವಂತರು, ಅಧಿಕಾರಿಗಳೇ ಭಾಗಿಯಾಗುತ್ತಿದ್ದಾರೆ. ದೇಶದ ಪ್ರಬುದ್ಧತೆ ಕಾಣುವುದು ಶಾಲಾ ಕಾಲೇಜುಗಳಲ್ಲಿ ದಾಖಲೆ ಪ್ರಮಾಣದಲ್ಲಿ ಮಕ್ಕಳು ದಾಖಲಾಗುವುದರಲ್ಲಿ ಅಲ್ಲ, ಜೈಲುಗಳಿಗೆ ಸೇರುವ ಕೈದಿಗಳ ಸಂಖ್ಯೆ ಕಡಿಮೆಯಾಗುವುದರಲ್ಲಿ ಎನ್ನಬಹುದು. ದೇಶದ ಪ್ರಜೆ ಹಣ ಪಡೆಯದೇ ಮತ ನೀಡುವ ಕಾಲ ಬಂದಾಗ ದೇಶ ಪ್ರಬುದ್ಧವಾಗಿದೆ ಎನ್ನಬಹುದು.

ಇಂದಿನ ವಿದ್ಯಾರ್ಥಿ ಸಮೂಹವನ್ನು ಗಮನಿಸಿದರೆ ಮನೆಗೆ ಉಪಕಾರಿ ಯಾಗಿರುವ ಮಕ್ಕಳು ವಿರಳ, ಮನೆಗೆ ಮಾರಿಯಾಗುತ್ತಿರುವ ಮಕ್ಕಳೇ ಹೇರಳ ಎನ್ನಿಸುತ್ತದೆ. ಇಂದು ಅನೇಕ ಮಕ್ಕಳು ಪ್ರೌಢಶಾಲಾ ಹಂತದ ಲ್ಲಿಯೇ ಧೂಮಪಾನಿ, ಮದ್ಯಪಾನಿಗಳಾಗುತ್ತಿದ್ದರೆ, ಕೆಲವು ಶ್ರೀಮಂತರ ಮಕ್ಕಳು ಡ್ರಗ್ಸ್ ಚಟಕ್ಕೆ ದಾಸರಾಗುತ್ತಿದ್ದಾರೆ. ದೈಹಿಕವಾಗಿ ಅಷ್ಟೇ ಅಲ್ಲ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ. ಸಮಾಜದ, ಪೊಲೀಸರ ಭಯವೂ ಇಲ್ಲದೆ ಪಾರ್ಟಿ ಎಂಬ ಹೆಸರಿನಲ್ಲಿ ಎಲ್ಲೆಂದರಲ್ಲಿ ಮೋಜು–ಮಸ್ತಿ ಮಾಡುವುದು ಸಾಮಾನ್ಯವಾಗಿದೆ. ಅಮಲು ಸ್ಥಿತಿಯಲ್ಲಿ ಬಹುವಿಧದ ದುಷ್ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ. 18 ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳು ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಲ್ಲಿ ಬಂಧಿತರಾಗುತ್ತಿದ್ದಾರೆ.

ಇತ್ತೀಚೆಗೆ ಹಂಪಿಯಲ್ಲಿ ಪಾನಮತ್ತ ಯುವಕರ ಗುಂಪು ವಿದೇಶಿ ಪ್ರವಾಸಿಗರ ಮೇಲೆ ಮಾಡಿದ ದೌರ್ಜನ್ಯ ಇಡೀ ದೇಶವೇ ತಲೆತಗ್ಗಿಸುವಂತದ್ದು. ಈ ಅವಿವೇಕಿಗಳಿಗೆ ಮನೆ ಎಂಬ ಹೆಮ್ಮೆಯಿಲ್ಲ, ಅಪ್ಪ–ಅಮ್ಮನ ಬಗ್ಗೆ ಗೌರವವಿಲ್ಲ, ಕಾನೂನಿನ ಭಯವಿಲ್ಲ, ನಾಗರಿಕ ಪ್ರಜ್ಞೆ ಇಲ್ಲ, ದೇಶಪ್ರೇಮ ವಂತೂ ಇಲ್ಲವೇ ಇಲ್ಲ. ಕ್ರಿಕೆಟ್ ನಡೆದಾಗ ಬಾವುಟ ತಿರುಗಿಸುವುದು, ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲುವುದು ಅಷ್ಟೇ ದೇಶಪ್ರೇಮ ಅಲ್ಲ. ಇಂದು ಹಳ್ಳಿ, ಪಟ್ಟಣ, ನಗರ ಎನ್ನದೇ ಎಲ್ಲೆಂದರಲ್ಲಿ ತಮ್ಮ ಅಮೂಲ್ಯ ಸಮಯವನ್ನು ಕ್ರಿಕೆಟ್ ಆಡಿ ಕಳೆಯುತ್ತಿದ್ದಾರೆ. ಈ ಕ್ರಿಕೆಟ್ ಕೇವಲ ವ್ಯಾಯಾಮಕ್ಕಾಗಿ ಅಲ್ಲ, ಖುಷಿಗಾಗಿ ಅಲ್ಲ, ಅದರಲ್ಲೂ ಬೆಟ್ಟಿಂಗ್ ಇರುತ್ತದೆ. ಇನ್ನೂ ಕೆಲವು ಯುವಕರು ಆನ್‌ಲೈನ್‌ನಲ್ಲಿ ಅಪಾಯಕಾರಿ ಗೇಮ್‌ಗಳನ್ನು ಆಡಿ ಹಣ ಕಳೆದುಕೊಂಡಿದ್ದಾರೆ. ಮತ್ತೆ ಕೆಲವರು ಲಕ್ಷಾಂತರ ಸಾಲ ಮಾಡಿ ಪ್ರಾಣವನ್ನು ಕಳೆದುಕೊಂಡು ಹೆತ್ತವರು ಕಣ್ಣೀರಿನಲ್ಲಿ ನಿತ್ಯ ಕೈತೊಳೆಯುವಂತೆ ಮಾಡುತ್ತಿದ್ದಾರೆ. ಇವರು ಮನೆಗಷ್ಟೇ ಹೊರೆಯಲ್ಲ, ದೇಶಕ್ಕೂ ಭಾರವಾಗುತ್ತಿದ್ದಾರೆ.



> ನಮ್ಮ ದೇಶ ಜಾಗತಿಕವಾಗಿ ಖ್ಯಾತಿ ಪಡೆಯುತ್ತಿದೆ. ಜಿ.ಡಿ.ಪಿ ಜಿಗಿಯುತ್ತಿದೆ, ಕ್ಷಿಪ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎಂಬ ಸುದ್ದಿ ನಮಗೆ ಹೆಮ್ಮೆ ಮೂಡಿಸುತ್ತದೆ. ಆದರೆ ದೇಶದ ಆಂತರಿಕ ವ್ಯವಸ್ಥೆಯನ್ನು ಗಮನಿಸಿದಾಗ ಧರ್ಮದ ವಿಚಾರಕ್ಕೆ, ಜಾತಿಯ ವಿಚಾರಕ್ಕೆ ನಡೆಯುವ ಸಂಘರ್ಷಗಳು, ಲಂಚಗುಳಿತನ, ಅರಾಜಕತೆ, ತಾರತಮ್ಯ ನೀತಿ ಇವುಗಳ ಕುರಿತೇ ಹೆಚ್ಚು ಚರ್ಚೆಗಳು ನಡೆಯುತ್ತಿವೆ, ಸಮಯ ಹಾಳಾಗುತ್ತಿದೆ. ನಮ್ಮ ಮುಂದಿನ ಪೀಳಿಗೆಯ ಮಕ್ಕಳನ್ನು ಪ್ರಬುದ್ಧರಾಗಿಸುವ ಕಾರ್ಯಕ್ಕೆ ಯಾರೂ ಮುಂದಾಗುತ್ತಿಲ್ಲ. ದೇಶದ ಪ್ರಗತಿ ತಿಳಿಯಬೇಕಾದುದು ಸ್ಟ್ಯಾಂಡರ್ಡ್ ಆಫ್ ಲಿವಿಂಗ್‌ನಿಂದ ಅಲ್ಲ, ಕ್ವಾಲಿಟಿ ಆಫ್ ಲಿವಿಂಗ್‌ನಿಂದ, ಅಲ್ಲವೇ?

ಸ್ವಾತಂತ್ರ್ಯವು ಸ್ವೇಚ್ಛಾಚಾರವಾಗುತ್ತಿದೆ. ಸರ್ಕಾರಿ ಕೆಲಸ ದೇವರ ಕೆಲಸ ಎಂಬ ನಾಮಫಲಕ ನೋಡಿ ಸರ್ಕಾರಿ ಕಚೇರಿಗಳಿಗೆ ಹೋದರೆ ಅಲ್ಲಿನ ನೈಜತೆಯೇ ಬೇರೆ ಇರುತ್ತದೆ. ಲಂಚವಿಲ್ಲದೇ ಯಾವ ಕೆಲಸವೂ ಸಾಧ್ಯವಿಲ್ಲ ಎನ್ನುವಂತಾಗಿದೆ. ಭ್ರಷ್ಟಾಚಾರವನ್ನು ತೊಡೆದು ಹಾಕಲು ಸಾಧ್ಯವಿಲ್ಲ ಎಂದು ಪ್ರಬುದ್ಧರೆನಿಸಿಕೊಂಡ ರಾಜಕಾರಣಿಗಳೇ ದೊಡ್ಡ ವೇದಿಕೆಗಳಲ್ಲಿ ಹೇಳುತ್ತಾರೆ ಎಂದರೆ ದೇಶವನ್ನು ದೇವರೇ ಕಾಪಾಡಬೇಕು. ಇಂದಿನ ದಿನಪತ್ರಿಕೆಗಳು ಇನ್ನಿತರೆ ಮಾಧ್ಯಮಗಳಲ್ಲಿ ಮೂಡಿಬರುವ ಸುದ್ದಿಗಳನ್ನು ನೋಡಲು ಮುಜುಗರವಾಗುತ್ತದೆ. ಎಲ್ಲೆಂದರಲ್ಲಿ, ಅನೀತಿ, ಅಕ್ರಮ, ಅಧರ್ಮ, ಅನಾಚಾರ, ಅತ್ಯಾಚಾರ. ಈ ವ್ಯವಸ್ಥೆಯಿಂದ ಬೇಸತ್ತು ನಮ್ಮ ದೇಶದ ಪ್ರತಿಭಾವಂತ ಯುವಕರು ಇಲ್ಲಿಂದ ಪಲಾಯನ ಮಾಡಿ ವಿದೇಶಗಳಲ್ಲಿ ಬದುಕು ಕಟ್ಟಿಕೊಳ್ಳುತ್ತಿರುವುದು ತಪ್ಪೇನಿಲ್ಲ ಎನಿಸುತ್ತದೆ. ದೇಶದ ನಾಗರಿಕನಿಗೆ ತನ್ನ ಕರ್ತವ್ಯ, ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಡುವಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸೋತಿವೆ. ತಮ್ಮ ಸ್ವಾರ್ಥ ಸಾಧನೆಗೆ, ಅಧಿಕಾರದ ಆಸೆಗೆ ಎಲ್ಲ ತತ್ವಗಳನ್ನು ಗಾಳಿಗೆ ತೂರಿ, ಜನರ ಮೂಗಿಗೆ ತುಪ್ಪ ಸವರಿ ದೇಶವು ನಿಧಾನವಾಗಿ ಅವನತಿಯತ್ತ ಸಾಗುವಲ್ಲಿ ತಮ್ಮ ಪಾತ್ರ ನಿರ್ವಹಿಸುತ್ತಿದ್ದಾರೆ. ಅಧಿಕಾರದಲ್ಲಿರುವ ಜನ ಪ್ರತಿನಿಧಿಗಳು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಸಮರ್ಪಕ ವಾಗಿ ನಿರ್ವಹಿಸಿದರೆ ತಾನೆ ಅವರು ಜನರಿಂದ ಅದನ್ನು ನಿರೀಕ್ಷಿಸಲು ಸಾಧ್ಯ. ಅವರೇ ಎಲ್ಲವನ್ನು ಗಾಳಿಗೆ ತೂರಿ ರಾಜಾರೋಷವಾಗಿ ಬದುಕುತ್ತಿರುವಾಗ ಜನ ಸಾಮಾನ್ಯ ಏನು ತಾನೆ ಮಾಡಲು ಸಾಧ್ಯ. 'ಯಥಾ ರಾಜಾ, ತಥಾ ಪ್ರಜಾ' ಎನ್ನುವಂತೆ ದೇಶದ ವಿದ್ಯಮಾನಗಳು ನಡೆಯುತ್ತಿವೆ.

ಕಳೆದ ವಾರ ಬೃಹತ್ ಬೆಂಗಳೂರಿನಲ್ಲಿ ನಡೆದ ಅವಘಡವೂ ಸಹ ಬೃಹತ್ ಆದದ್ದು. ವಿವೇಚನೆ ಇಲ್ಲದೆ ಆತುರದ ನಿರ್ಧಾರ ಮಾಡಿ, ಫ್ರಾಂಚೈಸಿ ಕ್ರಿಕೆಟ್ ತಂಡವೊಂದರ ಜಯವನ್ನು ವೋಟ್ ಬ್ಯಾಂಕ್‌ಗೆ ನೆರವಾಗುವಂತೆ ಚಿಂತನೆ ನಡೆಸಿ, ಪೊಲೀಸ್ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. 18 ವರ್ಷಗಳ ನಂತರ ಟಿ20 ಕಪ್ ಗೆದ್ದ ಆರ್‌ಸಿಬಿ ತಂಡದ ಅಭಿಮಾನಿಗಳು ರಾತ್ರಿಯಿಡೀ ವಿಜಯೋತ್ಸವ ಆಚರಿಸುವುದರ ಜೊತೆಗೆ ಮರುದಿನದ ಸಂಭ್ರಮಾಚರಣೆ ಯಲ್ಲಿ ಪಾಲ್ಗೊಳ್ಳಲು ರಣೋತ್ಸಾಹ ತೋರುತ್ತಾರೆ. ಅಂಧಾಭಿಮಾನಕ್ಕೆ, ಅಭಿಮಾನದ ಉನ್ಮಾದಕ್ಕೆ, ಯೌವನದ ಹುಚ್ಚುಹೊಳೆಯಲ್ಲಿ ಕೊಚ್ಚಿ ಹೋಗಿ ಕಾಲ್ತುಳಿತಕ್ಕೆ ಸಿಲುಕಿ 11 ಮಂದಿ ಅನ್ಯಾಯವಾಗಿ ಜೀವ ಕಳೆದು ಕೊಳ್ಳುತ್ತಾರೆ. ಈ ಸಮಾರಂಭಗಳಲ್ಲಿ ಭಾಗವಹಿಸಲು ಹೊರಟವರು ಅವಿದ್ಯಾವಂತರಲ್ಲ, ಅನಾಗರಿಕರಲ್ಲ, ಬಹುತೇಕ ಎಲ್ಲರೂ ವಿದ್ಯಾವಂತರೆ. ಹೆಣ್ಣು–ಗಂಡು ಎಂಬ ಭೇದವಿಲ್ಲದೆ, ವಿದ್ಯಾರ್ಥಿ, ಉದ್ಯೋಗಿ ಎಂಬ ವಯೋಮಾನದ ವ್ಯತ್ಯಾಸವಿಲ್ಲದೆ ಎಲ್ಲರೂ ಸಂಭ್ರಮಾಚರಣೆಗೆ ಧಾವಿಸಿದವರೆ. ಆದರೆ ಈ ಉತ್ಸಾಹ ಹೆಚ್ಚು ಹೊತ್ತು ಉಳಿಯಲಿಲ್ಲ, ಸಂಭ್ರಮಾಚರಣೆ ಶೋಕಾಚರಣೆಯಾಗಿ ಬದಲಾಗಲು ಬಹಳ ಕಾಲ ಬೇಕಾಗಲಿಲ್ಲ. 50ಕ್ಕೂ ಹೆಚ್ಚು ಮಂದಿ ಗಾಯಾಳುಗಳಾದರು, 11 ಮಂದಿ ಮರಳಿ ಬಾರದ ಲೋಕಕ್ಕೆ ತೆರಳಿದರು. ಇವರೆಲ್ಲಾ ವಿದ್ಯಾವಂತ ರಾದರೂ ಅಪ್ರಬುದ್ಧರಾಗಿ ವರ್ತಿಸಿಬಿಟ್ಟರು ಅಲ್ಲವೇ? ಸರ್ಕಾರವೂ ತನ್ನ ಹೊಣೆಗೇಡಿತವನ್ನು ಪ್ರದರ್ಶಿಸಿಬಿಟ್ಟಿತು. ದೇಶ ನಡೆಸುವ ನಾಯಕರು ಸಹ ಪ್ರಬುದ್ಧರಾಗಿರಬೇಕು ಅನ್ನಿಸುವುದಿಲ್ಲವೇ?

ನಮ್ಮ ದೇಶ ಜಾಗತಿಕವಾಗಿ ಖ್ಯಾತಿ ಪಡೆಯುತ್ತಿದೆ. ಜಿ.ಡಿ.ಪಿ ಜಿಗಿಯುತ್ತಿದೆ. ಕ್ಷಿಪ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎಂಬ ಸುದ್ದಿ ನಮಗೆ ಹೆಮ್ಮೆ ಮೂಡಿಸುತ್ತದೆ. ಆದರೆ ದೇಶದ ಆಂತರಿಕ ವ್ಯವಸ್ಥೆಯನ್ನು ಗಮನಿಸಿದಾಗ ಧರ್ಮದ ವಿಚಾರಕ್ಕೆ, ಜಾತಿಯ ವಿಚಾರಕ್ಕೆ ನಡೆಯುವ ಸಂಘರ್ಷಗಳು, ಲಂಚಗುಳಿತನ, ಅರಾಜಕತೆ, ತಾರತಮ್ಯ ನೀತಿ ಇವುಗಳ ಕುರಿತೇ ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಸಮಯ ಹಾಳಾಗುತ್ತಿದೆ. ನಮ್ಮ ಮುಂದಿನ ಪೀಳಿಗೆಯ ಮಕ್ಕಳನ್ನು ಪ್ರಬುದ್ಧರಾಗಿಸುವ ಕಾರ್ಯಕ್ಕೆ ಯಾರೂ ಮುಂದಾಗುತ್ತಿಲ್ಲ. ದೇಶದ ಪ್ರಗತಿ ತಿಳಿಯಬೇಕಾದುದು ಸ್ಟ್ಯಾಂಡರ್ಡ್ ಆಫ್ ಲಿವಿಂಗ್‌ನಿಂದ ಅಲ್ಲ, ಕ್ವಾಲಿಟಿ ಆಫ್ ಲಿವಿಂಗ್‌ನಿಂದ, ಅಲ್ಲವೇ?

ಇಂದಿನ ಯುವ ಪೀಳಿಗೆಯು ವಿದೇಶಿ ಸಂಸ್ಕೃತಿಯ ಅಂಧಾನುಕರಣೆ ಮಾಡುತ್ತಿದೆ. ಅವರ ಲೈಫ್‌ಸ್ಟೈಲ್, ಅವರ ಆಹಾರ, ವಿಹಾರ, ಧಿರಿಸು ಇತ್ಯಾದಿ. ಅದೇ ರೀತಿ ಇಂದಿನ ಜಪಾನ್, ಜರ್ಮನ್ ದೇಶಗಳಲ್ಲಿ ಇರುವ ಉತ್ತಮ ಸಂಸ್ಕೃತಿಗಳನ್ನು ಸಹ ಅನುಸರಿಬಹುದಲ್ಲವೇ? ಅಲ್ಲಿನ ಜನರಲ್ಲಿರುವ ಕಾಯಕನಿಷ್ಠೆಯನ್ನು, ದೇಶಾಭಿಮಾನವನ್ನು, ನಮ್ಮವರು ಸಹ ಪಾಲಿಸಬಹುದಲ್ಲವೇ?

ಪ್ರಬುದ್ಧ ರಾಷ್ಟ್ರ ನಿರ್ಮಾಣದ ಕುರಿತು ಶಿಕ್ಷಣ ತಜ್ಞರು ಚಿಂತನೆ ನಡೆಸಬೇಕಿದೆ. ಸರ್ಕಾರವು ಸಹ ಗಂಭೀರವಾಗಿ ಪರಿಗಣಿಸಿ ಸೂಕ್ತ ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕಿದೆ. ಸರ್ಕಾರವೂ ಸಹ ಜವಾಬ್ದಾರಿಯಿಂದ ವರ್ತಿಸಬೇಕಿದೆ. ಇದಕ್ಕೆ ಪ್ರತಿಯೊಬ್ಬ ನಾಗರಿಕನ ಪಾತ್ರವೂ ಸಹ ಮುಖ್ಯವಾಗಿರುತ್ತದೆ. ನಾನು ಭಾರತೀಯ ಎಂದು ಹೇಳಿಕೊಳ್ಳಲು ಹೆಮ್ಮೆಪಡುವಂತೆ ಆಗಬೇಕು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ನೋಡಿದ ವಿಡೀಯೋ ಒಂದರಲ್ಲಿ ವಿದೇಶಿ ಮಹಿಳೆ ಯೊಬ್ಬರು ಭಾರತದ ಸಂಸ್ಕೃತಿಗೆ ಮಾರುಹೋಗಿ ತಮ್ಮ ಮಗಳಿಗೆ 'ಇಂಡಿಯಾ' ಎಂಬ ಹೆಸರನ್ನು ಇಟ್ಟಿರುವುದಾಗಿ ಹೇಳಿದ್ದಾರೆ. ಇನ್ನು ಕೆಲವು ವರ್ಷಗಳು ನಮ್ಮ ದೇಶದ ಜನರ ಮನೋಭಾವ ಬದಲಾಗದೇ ಇದ್ದಲ್ಲಿ, ಆ ವಿದೇಶಿ ಮಹಿಳೆ ತಮ್ಮ ಮಗಳ ಹೆಸರನ್ನು ಬದಲಿಸುವುದರಲ್ಲಿ ಅನುಮಾನವೇ ಇಲ್ಲ. ಏನಂತೀರಿ?

ಹೂರಣ : ಕಟ್ಟಡ ಕಟ್ಟಿದರೆ ಅಭಿವೃದ್ಧಿ ಎನ್ನಿಸುವುದಿಲ್ಲ, ದೇಶದ ಜನರಲ್ಲಿ ಪ್ರಬುದ್ಧತೆ ಮೂಡುವಂತ ವ್ಯವಸ್ಥೆ ಕಟ್ಟಬೇಕು!

ಹಿಂದಿ ಬದಲು ನೀವು ಫ್ರೆಂಚ್ ಓದಿ...!!

• ಭಾಷಾ ನೀತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಪೇಚಾಟ • ಬೇರೊಂದು ಭಾರತೀಯ ಭಾಷೆ ಆಯ್ಕೆಗೆ ಅವಕಾಶ ಮಾಡಿಕೊಡಲು ಸುತಾರಾಂ ಸಿದ್ಧರಿಲ್ಲ • ಫ್ರೆಂಚ್ ಕಲಿತರೂ ಉಪಯೋಗವಿಲ್ಲ ಅಂದರೂ ಕಲಿಯುವ ಅನಿವಾರ್ಯತೆ ನಿರ್ಮಾಣ • ಖಾಸಗಿ ಕಾಲೇಜುಗಳಲ್ಲಂತೂ ಸುಲಭ ಪಾಸ್ 'ಭರವಸೆ'

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.8– ಹಿಂದಿ ಭಾಷೆ ಹೇರಿಕೆ ವಿವಾದ ಮುನ್ನೆಲೆಗೆ ಬಂದ ಹಿನ್ನೆಲೆಯಲ್ಲಿ ಇದೀಗ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಖಾಸಗಿ ಕಾಲೇಜುಗಳಲ್ಲಿ ಐಚ್ಛಿಕ ಭಾಷೆಯಾಗಿ ಇಂಗ್ಲೀಷ್‌ನೊಂದಿಗೆ ಫ್ರೆಂಚ್ ಕಲಿಯಲು ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುತ್ತಿರುವ ಆರೋಪ ಕೇಳಿ ಬಂದಿದ್ದು, ಆದರೆ, ವಿದ್ಯಾರ್ಥಿಗಳಿಗೆ ಪೂರಕವಾದ ಭಾರತೀಯ ಯಾವುದಾದರೂ ಭಾಷೆ ಕಲಿಕೆಗೆ ಕ್ರಮ ಕೈಗೊಳ್ಳುವಂತೆ ಪೋಷಕರು ಒತ್ತಾಯಿಸುತ್ತಿದ್ದಾರೆ.



ಕಳೆದ ಎರಡು ವರ್ಷದಿಂದ ಹಿಂದಿ ಹೇರಿಕೆ ವಿವಾದ ತೀವ್ರ ಸ್ವರೂಪ ಪಡೆದು ಕೊಳ್ಳುತ್ತಿದ್ದು, ರಾಜ್ಯದಲ್ಲಿ ಕನ್ನಡಪರ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳು ಹಿಂದಿ ಭಾಷೆ ಬಲವಂತಕ್ಕೆ ಹೇರಿಕೆ ಮಾಡದಂತೆ ಹೋರಾಟ ಮಾಡಿದ್ದವು. ಇದನ್ನೇ ಬಂಡವಾಳವಾಗಿ ಮಾಡಿಕೊಂಡ ಕೆಲವು ಖಾಸಗಿ ಕಾಲೇಜು ಗಳು ಐಚ್ಛಿಕ ಭಾಷೆಯಾಗಿ ಈ ಹಿಂದೆ ಇಂಗ್ಲೀಷ್ ನೊಂದಿಗೆ ಹಿಂದಿ ಕಲಿಸುತ್ತಿದ್ದ ಪದ್ಧತಿಯಲ್ಲಿ ಕೆಲ ಮಾರ್ಪಾಡು ಮಾಡಿ, ಹಿಂದಿಗೆ ಬದಲಾಗಿ ಈಗ ಫ್ರೆಂಚ್ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಇದರಿಂದ ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಹೋಗ ಬಯಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು. ಈ ಹಿಂದೆ ಪ್ರವಾಸೋದ್ಯಮ ವಿಷಯ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಮತ್ತು ವಿದೇಶಿ ವಿದ್ಯಾರ್ಥಿಗಳು ಮಾತ್ರ ಫ್ರೆಂಚ್ ಭಾಷೆಯನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳುತ್ತಿದ್ದರು. ಆದರೆ, ಈಗ ಎರಡನೇ ಐಚ್ಛಿಕ ಭಾಷೆಯಾಗಿ ಇಷ್ಟವಿಲ್ಲದಿದ್ದರೂ ಫ್ರೆಂಚ್ ಭಾಷೆಯನ್ನೇ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.

ಪ್ರಾದೇಶಿಕ ಭಾಷೆಗೆ ಕುತ್ತು: ವಿಶ್ವವಿದ್ಯಾನಿಲಯ ಸಂಯೋಜಿತ ಖಾಸಗಿ ಕಾಲೇಜುಗಳಲ್ಲಿ ಎರಡು ಐಚ್ಛಿಕ ವಿಷಯಗಳಲ್ಲಿ ಒಂದು ಅಂತರರಾಷ್ಟ್ರೀಯ ಭಾಷೆ, ಮತ್ತೊಂದು ಪ್ರಾದೇಶಿಕ ಭಾಷೆ(ಮಾಡ್ರನ್ ಇಂಡಿಯನ್ ಲಾಂಗ್ವೇಜ್) ಬೋಧಿಸುವ ನಿಯಮವಿದೆ. ಆದರೆ, ಈ ನಿಯಮಕ್ಕೆ ತಿಲಾಂಜಲಿ ನೀಡಿರುವ ಖಾಸಗಿ ಕಾಲೇಜುಗಳಲ್ಲಿ ಒಂದು ಇಂಗ್ಲೀಷ್, ಮತ್ತೊಂದು ಫ್ರೆಂಚ್ ಭಾಷೆ ಬೋಧಿಸಲಾಗುತ್ತಿದೆ. ಎರಡು ಅಂತರರಾಷ್ಟ್ರೀಯ ಭಾಷೆಯಾಗಿರುವುದರಿಂದ ಪ್ರಾದೇಶಿಕ ಭಾಷೆಗೆ ಧಕ್ಕೆಯಾಗುತ್ತಿದೆ. ಭಾರತೀಯ ಭಾಷೆಗಳಲ್ಲೇ ಒಂದನ್ನು ಕಲಿಸುವ ಗೋಜಿಗೆ ಖಾಸಗಿ ಕಾಲೇಜುಗಳು ಮುಂದಾಗುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಪಾಸಾಗೋದು ಸುಲಭ: ಖಾಸಗಿ ಕಾಲೇಜುಗಳಲ್ಲಿ ಫ್ರೆಂಚ್ ಭಾಷೆ ತೆಗೆದು ಕೊಳ್ಳುವುದರಿಂದ ಸುಲಭವಾಗಿ ಆ ವಿಷಯದಲ್ಲಿ ಪಾಸಾಗಬಹುದೆಂದು ವಿದ್ಯಾರ್ಥಿಗಳ ಮನವೊಲಿಸಲಾಗುತ್ತಿದೆ. ಫ್ರೆಂಚ್ ಭಾಷೆಯ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವವರೇ, ಆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದರಿಂದ ಯಾರನ್ನೂ ಫೇಲ್ ಮಾಡುತ್ತಿಲ್ಲ. ಇದರಿಂದ ಆ ಭಾಷೆ ಕಲಿಕೆಯಿಂದ ಉಪಯೋಗ ಇಲ್ಲದಿದ್ದರೂ, ಫ್ರೆಂಚ್ ಕಲಿಯುವವರ ಸಂಖ್ಯೆ ದಿನೇ ದಿನೆ ಏರಿಕೆಯಾಗುತ್ತಿದೆ. ಈ ಭಾಷೆ ಗೊತ್ತಿರುವ ಉಪನ್ಯಾಸಕರ ಸಂಖ್ಯೆಯೂ ಕಡಿಮೆಯಿದ್ದು, ಖಾಸಗಿ ಕಾಲೇಜುಗಳು ಲಭ್ಯವಿರುವವರಿಂದಲೇ ಹೆಚ್ಚಿನ ಅವಧಿಯಲ್ಲಿ ಕೆಲಸ ಮಾಡಿಸಿಕೊಳ್ಳುವ ತಂತ್ರಗಾರಿಕೆಯನ್ನೂ ಅನುಸರಿಸುತ್ತಿವೆ. ಇದರಿಂದ ಕಾಲೇಜಿನ ಆಡಳಿತ ಮಂಡಳಿ ಪ್ರವೇಶ ವೇಳೆಯೇ ಐಚ್ಛಿಕ ಭಾಷೆಯಾಗಿ ಹಿಂದಿಯನ್ನು ಆಯ್ಕೆ ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಫ್ರೆಂಚ್ ಭಾಷೆ ನೀಡುತ್ತಿವೆ. ಹಾಗಾಗಿ ಕಳೆದ ಎರಡು ವರ್ಷದಿಂದ ಫ್ರೆಂಚ್ ಭಾಷೆ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಅನುಮೋದನೆ ನೀಡಬಾರದು: ಖಾಸಗಿ ಕಾಲೇಜುಗಳ ಫ್ರೆಂಚ್ ಭಾಷೆ ಬೋಧನೆ ಬೇಡಿಕೆಗೆ ಮೈಸೂರು ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸಭೆ ಅನುಮೋದನೆ ನೀಡಬಾರದು. ಇನ್ನು ಮುಂದಿನ ದಿನಗಳಲ್ಲಾದರೂ ಬಲವಂತವಾಗಿ ಫ್ರೆಂಚ್ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ವಿದ್ಯಾರ್ಥಿಗಳ ತಲೆಗೆ ತುಂಬುವ ಪ್ರಯತ್ನಕ್ಕೆ ಕಡಿವಾಣ ಹಾಕಬೇಕು. ಪದವಿ ವಿದ್ಯಾರ್ಥಿಗಳಿಗೆ ಹಿಂದಿ ಭಾಷಾ ಜ್ಞಾನ ವಿದ್ದರೆ ದೇಶದ ಉದ್ದಗಲಕ್ಕೂ ಕೆಲಸ ಹಾಗೂ ವ್ಯವಹಾರ ನಿರ್ವಹಿಸುವ ಅವಕಾಶ ಒದಗಿ ಬಂದರೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು. ಅಲ್ಲದೆ, ಶಾಲಾ ಅವಧಿಯಲ್ಲಿಯೇ ಹಿಂದಿ ಭಾಷೆಯ ಪ್ರಾಥಮಿಕ ಜ್ಞಾನ ತುಂಬುವುದರಿಂದ ಕಾಲೇಜು ಶಿಕ್ಷಣದಲ್ಲಿ ಆ ಭಾಷೆಯನ್ನೇ ಮುಂದುವರೆಸುವುದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ನೆರವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ.

ಬಲವಂತ ಮಾಡಿದರೆ ಮಾಹಿತಿ ನೀಡಿ


ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಫ್ರೆಂಚ್ ಭಾಷೆ ಕಲಿಯುವಂತೆ ಒತ್ತಡ ಹೇರಿದರೆ ಅಂತಹ ಕಾಲೇಜುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇಂತಹ ಖಾಸಗಿ ಕಾಲೇಜುಗಳ ಬಗ್ಗೆ ಪೋಷಕರು ಮಾಹಿತಿ ನೀಡಿದರೆ, ಕ್ರಮ ಕೈಗೊಳ್ಳುತ್ತೇವೆ. ಉದ್ಯೋಗ ಸೇರಿದಂತೆ ವಿದೇಶಕ್ಕೆ ತೆರಳ ಬಯಸುವ ವಿದ್ಯಾರ್ಥಿಗಳಿಗೆ ಫ್ರೆಂಚ್ ಭಾಷೆ ಕಲಿತರೆ ಅನುಕೂಲಕಾರಿ. ಆದರೆ, ಇಷ್ಟ ಇಲ್ಲದೇ ಇದ್ದರೂ ಅದೇ ಭಾಷೆ ಕಲಿಯಬೇಕೆಂದು ಒತ್ತಾಯ ಮಾಡಬಾರದು.

– ಪ್ರೊ. ಎನ್.ಕೆ.ಲೋಕನಾಥ್, ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಒಳ್ಳೆಯವರ ಸಹವಾಸದಿಂದ ಒಳ್ಳೆಯದೇ ಆಗುತ್ತದೆ

ರಾಜಯೋಗಿನಿ ಬ್ರಹ್ಮಾಕುಮಾರಿ ತೃಪ್ತಿ ಬೆಹೆನ್ ಜೀ ಅಭಿಮತ



ಮೈಸೂರು ಹುಣಸೂರು ರಸ್ತೆಯಲ್ಲಿರುವ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ರಾಜಯೋಗ ಎಜುಕೇಶನ್ ರಿಸರ್ಚ್ ಸೆಂಟರ್‌ನಲ್ಲಿ ಯುವ ರಾಜಯೋಗ ವಿದ್ಯಾರ್ಥಿಗಳ ಐದು ದಿನದ ಮೌನ, ರಾಜಯೋಗ ಧ್ಯಾನ, ಜ್ಞಾನ, ದಿವ್ಯ ಜೀವನದ ಪುನಶ್ಚೇತನ, ವ್ಯಕ್ತಿತ್ವ ವಿಕಸನ ಕಾರ್ಯಾಗಾರಕ್ಕೆ ಸೂರತ್ ಮಹಾನಗರ ಈಶ್ವರೀಯ ವಿಶ್ವ ವಿದ್ಯಾಲಯಗಳ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ತೃಪ್ತಿ ಬೆಹೆನ್ ಜೀ ಚಾಲನೆ ನೀಡಿದರು. ಚಿತ್ರದಲ್ಲಿ ಬಿಕೆ ಲಕ್ಷ್ಮೀಜೀ, ರುದ್ರೇಶ್, ಸಂತೋಷ ಅವರನ್ನು ಕಾಣಬಹುದು.

ಮೈಸೂರು, ಜೂ.8– ನಗರದ ಹುಣಸೂರು ರಸ್ತೆಯಲ್ಲಿರುವ ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ಎಜುಕೇಶನ್ ರಿಸರ್ಚ್ ಸೆಂಟರ್‌ನಲ್ಲಿ ಯುವ ರಾಜಯೋಗ ವಿದ್ಯಾರ್ಥಿಗಳ ಐದು ದಿನದ ಮೌನ ರಾಜಯೋಗ ಧ್ಯಾನ, ವ್ಯಕ್ತಿತ್ವ ವಿಕಸನ, ದಿವ್ಯ ಜೀವನದ ಪುನಶ್ಚೇತನ ಕಾರ್ಯಾಗಾರವನ್ನು ಸೂರತ್ ಮಹಾನಗರದ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯ ಸಂಚಾಲಕಿ, ಕೃಷಿ ಮತ್ತು ಗ್ರಾಮೀಣ ಸೇವಾ ವಿಭಾಗದ ರಾಷ್ಟ್ರೀಯ ಸಂಯೋಜಕರು ಹಾಗೂ ಬ್ರಹ್ಮಾಕುಮಾರಿಯರ ಮನೋಬಲ ತರಬೇತುದಾರರಾದ ರಾಜಯೋಗಿನಿ ಬ್ರಹ್ಮಾಕುಮಾರಿ ತೃಪ್ತಿ ಬೆಹೆನ್ ಜೀ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಸಾಧನೆಯ ಗುರಿಯನ್ನು ತಲುಪಲು ಸಕಾರಾತ್ಮಕತೆ, ಶಾಂತಿಮಯ ಜೀವನ, ಶಕ್ತಿಶಾಲಿ ಸ್ಥಿತಿ, ಜಾಗೃತಿ, ಏಕಾಗ್ರತೆ ಹಾಗೂ ಆಸಕ್ತಿ ಬಹಳ ಅವಶ್ಯಕ ಎಂದರು.

ಸತ್ಯತೆ, ಸ್ವಚ್ಛತೆ, ಸರಳತೆ ಜೀವನದ ಬುನಾದಿ ಆಗಬೇಕು. ಈ ಮೌಲ್ಯಗಳಿಂದಲೇ ವಿವೇಕಾನಂದರು ಭಾರತದ ಆಧ್ಯಾತ್ಮಿಕತೆಯನ್ನು ವಿಶ್ವದ ಮಟ್ಟಕ್ಕೆ ಏರಿಸಿದರು. ಚುಚ್ಚುವುದು ಸೂಜಿಯ ಗುಣ. ಆದರೆ ದಾರದ ಜೊತೆ ಗೆಳೆತನ ಮಾಡಿದ ಮೇಲೆ ಸೂಜಿ ಬದಲಾಗಿ ಎಲ್ಲವನ್ನು ಜೋಡಿಸಲು ಮುಂದಾಗುತ್ತದೆ. ಅದಕ್ಕೆ ಹೇಳುವುದು ಒಳ್ಳೆಯವರ ಜೊತೆ ಇದ್ದರೆ ಒಳ್ಳೆಯದೇ ಆಗುತ್ತದೆ ಎಂದರು.

ನಾವು ಸತ್ಯವಂತರಾದಾಗ ನಾವು ಮಾಡುವ ಕಾರ್ಯಗಳು ಮಾತುಗಳು ಒಂದೇ ಆಗಿರುತ್ತವೆ. ನಾವು ಹೇಳುವುದನ್ನು ಮಾಡುತ್ತೇವೆ. ಮಾಡುವುದನ್ನು ಹೇಳುತ್ತೇವೆ. ಆ ಕಾರಣ ನಾವೆಲ್ಲರಿಂದಲೂ ಗೌರವ ಮತ್ತು ಪ್ರೀತಿಯನ್ನು ಪಡೆಯುತ್ತೇವೆ ಎಂದರು. ಈ ಶಿಬಿರದಲ್ಲಿ ಪ್ರತಿಯೊಬ್ಬರು ಮುಖದ ಮೌನ, ಮನಸ್ಸಿನ ಮೌನ, ಮೊಬೈಲ್ ಮೌನದಿಂದಲೂ ಇರಬೇಕೆಂದು ಕರೆ ನೀಡಿದರು

ಕಾರ್ಯಕ್ರಮದ ಆಯೋಜಕರಾದ ಮೈಸೂರು ಉಪ ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಮಾತನಾಡಿ, ವಿದ್ಯಾರ್ಥಿಗಳು ನಿರಂತರವಾಗಿ ಕಲಿಯುತ್ತಲೇ ಇರಬೇಕು. ಏಕೆಂದರೆ ದೀಪವು ನಿರಂತರ ಉರಿಯುತ್ತಿದ್ದರೆ ಅನೇಕ ದೀಪಗಳನ್ನು ಹೊತ್ತಿಸಲು ಸಾಧ್ಯ ಎಂದರು.

ಯುವಕರನ್ನು ವಿಧ್ವಂಸಕರು ಎಂದು ಕರೆಯುತ್ತಾರೆ. ಆದರೆ ಯುವ ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರು ತಮ್ಮ ತನು ಮನ ಧನದಿಂದ ಸುಳ್ಳಾಗಿರುವ ಜಗತ್ತನ್ನು ಸತ್ಯಯುಗವನ್ನಾಗಿ ಪರಿವರ್ತಿಸುವ ವಿಶ್ವಕಲ್ಯಾಣದ ಕಾರ್ಯದಲ್ಲಿ ತೊಡಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸೋನಲ್ ಬೆಹೆನ್ ಜಿ, ಭೂಪತ್ ಬಾಯ್, ರುದ್ರೇಶ್, ಸಂತೋಷ್ ಓಂ ಶಾಂತಿ ನ್ಯೂಸ್ ಸರ್ವಿಸ್‌ನ ಬಿ ಕೆ ಆರಾಧ್ಯ ಯೋಗ ಭವನದ ಕುಮಾರಣ್ಣ, ಬಿಕೆ ಶಾರದಾಜೀ, ಶಿವಲೀಲಾಜೀ, ಮಲ್ಲಿಕಾರ್ಜುನಣ್ಣ ಪ್ರಾಣೇಶಣ್ಣ, ರಂಗನಾಥಣ್ಣ, ಡಾ.ಹೇಮಪ್ರಭ, ಗೀತಾ, ನಾಗರಾಜ, ಗಂಗಣ್ಣ, ನಾಗಶ್ರೀ, ಮುಂತಾದವರು ಹಾಜರಿದ್ದರು

ಪರಿಸರ ಸಂರಕ್ಷಿಸದಿದ್ದರೆ ಜೀವರಾಶಿಗೆ ಉಳಿಗಾಲವಿಲ್ಲ

● ಶಾಸಕ ಜಿ.ಟಿ.ದೇವೇಗೌಡರ ಕಳಕಳಿ ನುಡಿ ● ಪರಿಸರ ದಿನಾಚರಣೆ ಅಂಗವಾಗಿ ಆಟೋಮೋಟಿವ್ ಆಕ್ಸೆಲ್‌ನಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ



ಮೈಸೂರು ಹೊರವಲಯದ ಕೂರ್ಗಳ್ಳಿ ಗ್ರಾಮದಲ್ಲಿ ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್, ನಗರಸಭೆ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿರುವ ಕೆರೆ ಅಭಿವೃದ್ಧಿ ಹಾಗೂ ಗಿಡ ನೆಡುವ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಮೈಸೂರು, ಜೂ.8(ಎಸ್‌ಬಿಡಿ)– ಪರಿಸರವನ್ನು ಸಂರಕ್ಷಣೆ ಮಾಡದಿದ್ದರೆ ಮನುಷ್ಯ ಸೇರಿದಂತೆ ಸಕಲ ಜೀವರಾಶಿಯ ಉಳಿವು ಅಸಾಧ್ಯ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಹೊರವಲಯದ ಕೂರ್ಗಳ್ಳಿ ಗ್ರಾಮದಲ್ಲಿ ನಗರಸಭೆ, ಅರಣ್ಯ ಇಲಾಖೆ ಹಾಗೂ ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ ಕೆರೆ ಅಭಿವೃದ್ಧಿ ಹಾಗೂ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಗತ್ತಿನಲ್ಲಿ ತಾಪಮಾನ, ಹವಾಮಾನ ವೈಪರೀತ್ಯದಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಪರಿಸರ ಇಲ್ಲದೆ ಬದುಕಲು ಸಾಧ್ಯವಿಲ್ಲ ಎಂಬ ಅರಿವಿನೊಂದಿಗೆ ಅಭಿವೃದ್ಧಿ ಜೊತೆಗೆ ಪರಿಸರವನ್ನು ಸಂರಕ್ಷಿಸಿಕೊಳ್ಳಬೇಕಿದೆ ಎಂದರು.

ನಾವು ಜೀವಿಸುವ ಪರಿಸರದಲ್ಲಿ ಗಿಡ–ಮರಗಳಿದ್ದರೆ ಸ್ವಚ್ಛ ಗಾಳಿ ಸಿಗುವುದಷ್ಟೇ ಅಲ್ಲ, ಸ್ವಚ್ಛ ಸಮಾಜ ನಿರ್ಮಾಣಕ್ಕೂ ಸಹಕಾರಿಯಾಗುತ್ತದೆ. ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ ಗಾಳಿ, ನೀರು ಇನ್ನಿತರ ಪ್ರಾಕೃತಿಕ ಸಂಪತ್ತನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ಇದರ ಅರಿವಿದ್ದ ನಮ್ಮ ಪೂರ್ವಜರು ಸಾಲು ಮರಗಳನ್ನು ಬೆಳೆಸುತ್ತಿದ್ದರು. ನಾನು ಸಹಕಾರ ಸಚಿವನಾಗಿದ್ದಾಗ ವಿಧಾನಸಭಾಧ್ಯಕ್ಷರಾಗಿದ್ದ ಕೆ.ಆರ್.ಪೇಟೆ ಕೃಷ್ಣ, ವಿಧಾನ ಪರಿಷತ್ ಸಭಾಪತಿಯಾಗಿದ್ದ ಪ್ರೊ.ಬಿ.ಕೆ. ಚಂದ್ರಶೇಖರ್ ಅವರೊಂದಿಗೆ ಸಮಾಲೋಚಿಸಿ, ಸಾಲುಮರದ ತಿಮ್ಮಕ್ಕ ಅವರ ಸಮ್ಮುಖದಲ್ಲಿ ಮೈಸೂರಿನಲ್ಲಿ ಶಾಲೆ, ಆಸ್ಪತ್ರೆ, ರಸ್ತೆಬದಿ, ಪಾರ್ಕ್ ಮೊದಲಾದ ಕಡೆ ಲಕ್ಷ ಗಿಡ ನೆಡುವ ಕಾರ್ಯಕ್ರಮ ಮಾಡಿದ್ದೆವು.

> ಹಲವು ಕಾರಣಗಳಿಂದ ನದಿಗಳು ಕಲುಷಿತಗೊಳ್ಳುತ್ತಿವೆ. ಲಕ್ಷ್ಮಣತೀರ್ಥ ನದಿ ಮೂಲಕ ಕಲ್ಮಶಗಳು ಕೆಆರ್‌ಎಸ್‌ಗೆ ಸೇರುತ್ತಿದೆ. ಈ ಗಂಭೀರ ವಿಚಾರವನ್ನು ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಸರ್ಕಾರದ ಗಮನ ಸೆಳೆದಿದ್ದೇನೆ. ನದಿಗಳಿಗೆ ವಿಷಕಾರಕ ವಸ್ತುಗಳು ಸೇರದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಎಚ್ಚೆತ್ತುಕೊಳ್ಳಬೇಕು.
> –ಜಿ.ಟಿ.ದೇವೇಗೌಡರು, ಶಾಸಕರು

ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿದ್ದಾಗಲೂ ಮೈಸೂರಿನಿಂದ ಕುಶಾಲನಗರ, ಕೆ.ಆರ್.ನಗರ ಮತ್ತು ಹುಣಸೂರಿನಿಂದ ಹನಗೋಡುವರೆಗೆ ರಸ್ತೆ ಬದಿ ಗಿಡ ನೆಡಲಾಗಿತ್ತು. ಅವು ದೊಡ್ಡ ಮರಗಳಾಗಿ ಗಾಳಿ–ನೆರಳು ನೀಡುತ್ತಿವೆ. ನಗರದ ರಿಂಗ್ ರಸ್ತೆಯಲ್ಲಿ ಬೇವಿನ ಮರಗಳು ಸೊಂಪಾಗಿ ಬೆಳೆದಿವೆ. ಇಂತಹ ಸಾಮಾಜಿಕ ಕಾರ್ಯಗಳು ತುಂಬಾ ಖುಷಿ ಕೊಡುತ್ತವೆ ಎಂದು ಸಂತಸ ವ್ಯಕ್ತಪಡಿಸಿದರು.

ಜನರ ಪ್ರೇರೇಪಿಸಬೇಕು: ಮೈಸೂರು ನಗರಪಾಲಿಕೆಯಂತೆ ನಗರಸಭೆ, ಪಟ್ಟಣ ಪಂಚಾಯಿತಿಗಳಿಂದಲೂ ಹಸಿ ಹಾಗೂ ಒಣ ತ್ಯಾಜ್ಯವನ್ನು ಬೇರ್ಪಡಿಸಿ, ವಿಲೇವಾರಿ ಮಾಡಬೇಕು. ಮನೆಗಳ ಮುಂದೆ ಗಿಡ ನೆಡುವ ಮೂಲಕ ಮತ್ತೊಂದು ಗಿಡ ನೆಟ್ಟು ಬೆಳೆಸಲು ಜನರಿಗೆ ಪ್ರೇರೇಪಿಸಬೇಕು. ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿರುವ ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್ ಸಂಸ್ಥೆ ವತಿಯಿಂದ ಕೂರ್ಗಳ್ಳಿ ಕೆರೆಯನ್ನು ಅಭಿವೃದ್ಧಿ ಮಾಡುತ್ತಿರುವುದು ಶ್ಲಾಘನೀಯ. ಕಾರ್ಮಿಕರ ಹಿತ ಕಾಯುವುದರ ಜೊತೆಗೆ ಇಂತಹ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುವುದರಿಂದ ಸಂಸ್ಥೆಗೆ ಮತ್ತಷ್ಟು ಶ್ರೇಯಸ್ಸು ಸಿಗಲಿದೆ ಎಂದು ಆಶಿಸಿದರು.

ಪಾಲಿಕೆ ವ್ಯಾಪ್ತಿಗಾಗಿ ಹೋರಾಡಿದ್ದೆ: ವಿಜಯನಗರ ಹಾಗೂ ಕೂರ್ಗಳ್ಳಿಯನ್ನು ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲು ಹೋರಾಟ ಮಾಡಿದ್ದೆ. ಈ ಸಂಬಂಧ ನಿರ್ಣಯಕ್ಕಾಗಿ ಮಂಡಿಸಿದ್ದ ವಿಷಯವನ್ನೇ ತಿರಸ್ಕರಿಸಿದ್ದಾಗ ಮನಸ್ಸಿಗೆ ತುಂಬಾ ನೋವುಂಟಾಗಿತ್ತು. ಆಗಿನ ಅನುಭವದಿಂದ ಎಚ್ಚೆತ್ತುಕೊಂಡು ನಿರಂತರ ಪ್ರಯತ್ನದಿಂದ ರಾಜ್ಯದಲ್ಲೇ ಮೊದಲಿಗೆ ಒಂದೇ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ನಗರಸಭೆ ಹಾಗೂ ನಾಲ್ಕು ಪಟ್ಟಣ ಪಂಚಾಯಿತಿ ರಚನೆ ಮಾಡಿಸುವಲ್ಲಿ ಯಶಸ್ವಿಯಾದೆ. ಇದೀಗ ಅಭಿವೃದ್ಧಿ ಕೆಲಸಗಳು ಸುಗಮವಾಗಿ ನಡೆಯುತ್ತಿವೆ. ಆರು ವರ್ಷಗಳಿಂದ ಯಾವ ಬಡಾವಣೆಯಲ್ಲೂ ರಸ್ತೆ ಮಾಡಲು ಸಾಧ್ಯವಾಗಿರಲಿಲ್ಲ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ 300 ಕೋಟಿ ರೂ. ಅನುದಾನ ಮಂಜೂರು ಮಾಡಿಸಿಕೊಂಡು, ಏಕಕಾಲದ ಕಾಮಗಾರಿಗೆ ಕ್ರಮ ಕೈಗೊಂಡಿದ್ದರಿಂದ ಉತ್ತಮ ರಸ್ತೆಗಳ ನಿರ್ಮಾಣವೂ ಸಾಧ್ಯವಾಯಿತು ಎಂದು ತಿಳಿಸಿದರು.

ಈ ವೇಳೆ ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್ ಸಂಸ್ಥೆಯ ಮುಖ್ಯಸ್ಥ ಮುರುಳಿ ಕೃಷ್ಣ, ನಾಗರಾಜು ಗರ್ಗೇಶ್ವರಿ, ರಂಗನಾಥ್, ಮನ್ಮಥ್, ಕೂರ್ಗಳ್ಳಿ ಪೌರಾಯುಕ್ತ ಹೆಚ್.ಬಿ.ಚಂದ್ರಶೇಖರ್, ಅರಣ್ಯಾಧಿಕಾರಿಗಳಾದ ಸುಂದರ್, ಸ್ವಾಮಿ, ಮುಖಂಡರಾದ ಅಭಿಜ್ಞಾ, ನಂಜುಂಡೇಗೌಡ, ಸತೀಶ್, ರಾಮು, ಕುಮಾರ್, ಮಲ್ಲೇಶ್, ವಾಸು, ಚಂದ್ರಶೇಖರ್, ಮೂರ್ತಿ, ಮೈದನಹಳ್ಳಿ ಚಂದ್ರಶೇಖರ್, ಪರಿಸರ ತಜ್ಞ ಮನೋಜ್ ಪಾಟೀಲ್, ಪರಿಸರ ಇಂಜಿನಿಯರ್ ಗಿರಿಜಾ ಮತ್ತಿತರರು ಉಪಸ್ಥಿತರಿದ್ದರು.

ಕೆಂಪೇಗೌಡರ ಜಯಂತಿ ಪೂರ್ವಭಾವಿ ಸಭೆ



ಮೈಸೂರಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಿದ ನಂತರ, ಶ್ರೀಗಳ ನಿರ್ದೇಶನದಂತೆ ಕಾರ್ಯಕ್ರಮ ರೂಪುರೇಷೆಗಳ ಸಂಬಂಧ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ ಸೇರಿದಂತೆ ಮೈಸೂರಿನ ವಿವಿಧ ಒಕ್ಕಲಿಗ ಸಂಘ ಸಂಸ್ಥೆಗಳ ಸದಸ್ಯರು ಚರ್ಚಿಸಿದರು. ಕಾರ್ಯಕ್ರಮದ ಪ್ರಚಾರ ವಾಹನ, ಪೋಸ್ಟರ್ ವಿನ್ಯಾಸ ಅಂತಿಮಗೊಳಿಸಿ, ಅಂತಿಮ ಸಿದ್ಧತೆ ಬಗ್ಗೆ ಬರುವ ಮಂಗಳವಾರ ಸಂಜೆ ಸಭೆ ನಡೆಸಲು ನಿರ್ಧರಿಸಲಾಯಿತು.

ಸೂಟ್‌ಕೇಸ್‌ನಲ್ಲಿ ಬಾಲಕಿ ಶವ: ದುಷ್ಕರ ಬಂಧನ

ಬೆಂಗಳೂರು: ಬೆಂಗಳೂರಿನ ಹೊರವಲಯದಲ್ಲಿ ಸೂಟ್‌ಕೇಸ್‌ನಲ್ಲಿ ಪತ್ತೆಯಾಗಿದ್ದ ಅಪ್ರಾಪ್ತೆ ಶವ ಪತ್ತೆ ಪ್ರಕರಣವನ್ನು ಕೊನೆಗೂ ಪೊಲೀಸರು ಭೇದಿಸಿದ್ದು, ಲೈಂಗಿಕ ಕ್ರಿಯೆಗೆ ಸಹಕರಿಸಲಿಲ್ಲ ಎಂದು ದುರುಳರು ಆಕೆಯನ್ನು ಕೊಂದು ಹಾಕಿದ್ದಾರೆ ಎಂದು ಹೇಳಲಾಗಿದೆ.

ಬೆಂಗಳೂರಿನ ಆನೇಕಲ್ ತಾಲೂಕಿನ ಹಳೇ ಚಂದಾಪುರ ರೈಲ್ವೆ ಬ್ರಿಡ್ಜ್ ಬಳಿ ಸೂಟ್‌ಕೇಸ್‌ನಲ್ಲಿ ಪತ್ತೆಯಾಗಿದ್ದ ಅಪರಿಚಿತ ಬಾಲಕಿಯ ಶವ ಪ್ರಕರಣವನ್ನು ಸೂರ್ಯನಗರ ಠಾಣಾ ಪೊಲೀಸರು ಕೊನೆಗೂ ಭೇದಿಸಿದ್ದು, ಆರೋಪಿಗಳು ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಬಳಿಕ ಕೊಲೆ ಮಾಡಿ ಶವವನ್ನು ಸೂಟ್‌ಕೇಸ್‌ನಲ್ಲಿ ಹಾಕಿ ರೈಲ್ವೆ ಹಳಿ ಪಕ್ಕದಲ್ಲಿ ಎಸೆದು ಹೋಗಿದ್ದಾರೆ ಎಂಬುದು ಪೊಲೀಸ್ ತನಿಖೆಯಲ್ಲಿ ಬಹಿರಂಗವಾಗಿದೆ.

ಕಳೆದ ಮೇ ತಿಂಗಳ 21ರಂದು ಬೆಂಗಳೂರಿನ ಹೊರವಲಯದಲ್ಲಿರುವ ಹಳೆಯ ಚಂದಾಪುರ ರೈಲ್ವೆ ಸೇತುವೆಯ ಬಳಿ ಅನುಮಾನಾಸ್ಪದ ಸೂಟ್‌ಕೇಸ್ ಪತ್ತೆಯಾಗಿತ್ತು. ಸ್ಥಳೀಯರು ಅದನ್ನು ತೆಗೆದು ನೋಡಿದಾಗ ಅದರಲ್ಲಿ ಯುವತಿಯ ಶವ ಪತ್ತೆಯಾಗಿತ್ತು. ಸ್ಥಳೀಯರು ಆರಂಭದಲ್ಲಿ ಇದನ್ನು ರೈಲಿನಿಂದ ತಂದು ಬಿಸಾಡಿರಬಹುದು ಎಂದು ಭಾವಿಸಿದ್ದರು. ಆದರೆ ಈ ಪ್ರಕರಣದ ಬೆನ್ನು ಹತ್ತಿದ್ದ ಸೂರ್ಯನಗರ ಪೊಲೀಸ್ ಠಾಣಾ ಅಧಿಕಾರಿಗಳು ಕೊನೆಗೂ ಪ್ರಕರಣ ಭೇದಿಸಿದ್ದಾರೆ.

ಈ ಪ್ರಕರಣದ ಪ್ರಮುಖ ಆರೋಪಿಗಳಾದ ಬಿಹಾರ ಮೂಲದ ಆಶಿಕ್ ಕುಮಾರ್ (22) ಮುಖೇಶ್ ರಾಜಬನ್ಶಿ (35), ಇಂದುದೇವಿ (32) ರಾಜರಾಮ್ ಕುಮಾರ್ (18) ಪಿಂಟು ಕುಮಾರ್ (18), ಕಾಲು ಕುಮಾರ್(17) ರಾಜು ಕುಮಾರ್(17) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಮೇ 20ರಂದು ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ್ದರು ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಪ್ರಶ್ನಿಸುವ ಮನೋಭಾವ ಮರೆತರೆ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಅಪಾಯವಿದೆ

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಆತಂಕದ ನುಡಿ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿದರು.

ಮೈಸೂರು, ಜೂ.8(ಎಂಟಿವೈ)– ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಮರೆತರೆ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಅಪಾಯವಿದೆ ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಹಿಂದೆ ದಲಿತ, ರೈತ ಹಾಗೂ ವಿದ್ಯಾರ್ಥಿ ಸಂಘಟನೆಗಳು ಯಾವುದೇ ಹೋರಾಟ ಮಾಡಿದರೂ ಅದರಲ್ಲಿ ಮಹಾರಾಣಿ ಕಾಲೇಜಿನ ಹೆಣ್ಣುಮಕ್ಕಳು ಪ್ರಧಾನವಾಗಿ ಪಾಲ್ಗೊಳ್ಳುತ್ತಿದ್ದರು. ಆದರೆ, ಇಂದು ವಿದ್ಯಾರ್ಥಿಗಳಲ್ಲಿ ಹೋರಾಟದ ಕಿಚ್ಚು ಕ್ಷೀಣಿಸುತ್ತಿದೆ. ವಿದ್ಯಾರ್ಥಿಗಳು ಚಳವಳಿ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ದೂರ ಉಳಿದಿದ್ದಾರೆ. ವಿದ್ಯಾರ್ಥಿಗಳು ತಮ್ಮ ಹಕ್ಕಿಗಾಗಿ ಹೋರಾಟ ಮಾಡುವುದನ್ನು ಮರೆತಿದ್ದಾರೆ. ವಿದ್ಯಾರ್ಥಿಗಳಿಗೆ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಲಿಸುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ. ಜಾತಿ ತಾರತಮ್ಯ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ವಿದ್ಯಾರ್ಥಿಗಳು ಮುಕ್ತವಾಗಿ ಯೋಚಿಸಬೇಕು. ಶೋಷಿತರು, ಅನ್ಯಾಯಕ್ಕೆ ಒಳಗಾದವರು ಸರ್ಕಾರದ ಜನ ವಿರೋಧಿ ಕ್ರಮಗಳ ವಿರುದ್ಧ ನಡೆಯುವ ಹೋರಾಟಗಳಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಶತಮಾನಗಳ ಕಾಲ ದಾಸ್ಯದಲ್ಲಿದ್ದ ಶೋಷಿತರು ಮತ್ತು ಮಹಿಳೆಯರ ವಿಮೋಚನೆಗಾಗಿ ಡಾ.ಬಿ.ಆರ್. ಅಂಬೇಡ್ಕರ್ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರ ಶ್ರಮ, ತ್ಯಾಗ ಅಪರಿಮಿತವಾದದ್ದು. ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತ ಮಾಡದೇ ವಿದ್ಯಾರ್ಥಿಗಳು ಮುಕ್ತವಾಗಿ ಓದಬೇಕು. ಜ್ಞಾನ ಸಂಪಾದನೆಗೆ ಅವರು ಪಟ್ಟ ಶ್ರಮದಿಂದ ಸ್ಫೂರ್ತಿ ಪಡೆದು ಅಧ್ಯಯನಶೀಲರಾಗಬೇಕು. ಸ್ಪರ್ಧಾತ್ಮಕ ಬದುಕಿನಲ್ಲಿ ಭವಿಷ್ಯ ರೂಪಿಸಿಕೊಳ್ಳುವುದು ಸುಲಭವಲ್ಲ. ರ್‍ಯಾಂಕ್ ಪಡೆದರೂ ಕೌಶಲ ಅತ್ಯಗತ್ಯ. ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರ ಬದುಕು ಸಮೃದ್ಧವಾಗುತ್ತದೆ. ನಾಯಕತ್ವ ಗುಣವೂ ಬೆಳೆಯುತ್ತದೆ ಎಂದು ತಿಳಿಸಿದರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಪ್ರೊ.ಅಬ್ದುಲ್ ರೆಹಮಾನ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಚಂದ್ರಶೇಖರ, ಸಹ ಪ್ರಾಧ್ಯಾಪಕಿ ಡಾ.ಪ್ರಮೀಳಾ ಹೆಚ್.ಸಿ, ಡಾ.ದಾಕ್ಷಾಯಿಣಿ ಸಿ., ನಿಲಯ ಪಾಲಕಿ ಪದ್ಮಾ ಸಿ. ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಆರ್‌ಸಿಬಿ ವಿಜಯೋತ್ಸವ ವೇಳೆ ದುರಂತದ ಸಂತ್ರಸ್ತರಿಗೆ

ಕೆಎಸ್‌ಸಿಎ ಉದ್ಯೋಗ ಕಲ್ಪಿಸಲು ಆಗ್ರಹ



ಮೈಸೂರು, ಜೂ.8– ಆರ್‌ಸಿಬಿ ವಿಜಯೋತ್ಸವದ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೀವ ಕಳೆದುಕೊಂಡ 11 ಅಭಿಮಾನಿಗಳ ಕುಟುಂಬದವರಿಗೆ ಕೆಎಸ್‌ಸಿಎ ಉದ್ಯೋಗ ಕಲ್ಪಿಸಬೇಕು ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಹಾಗೂ ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಆಗ್ರಹಿಸಿದ್ದಾರೆ.

ಬಿಸಿಸಿಐನ ಅಂಗಸಂಸ್ಥೆಯಾದ ಕೆಎಸ್‌ಸಿಎ ಹಾಗೂ ಆರ್‌ಸಿಬಿ ಕ್ರಿಕೆಟ್ ತಂಡವು ಯಾವುದೇ ಸರ್ಕಾರದ ಸ್ವಾಮ್ಯತೆಗೆ ಒಳಪಡುವುದಿಲ್ಲ. ಆದ್ದರಿಂದ ಈ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ವಿಜಯೋತ್ಸವದ ವೇಳೆ ಸಂಭವಿಸಿದ ದುರಂತಕ್ಕೆ ಸರ್ಕಾರ ಹೊಣೆಯಾಗುವುದಿಲ್ಲ. ಸರಕಾರಕ್ಕೆ ಕೆಟ್ಟ ಹೆಸರು ತರುವ ಕುತಂತ್ರಕ್ಕೆ 11 ಮಂದಿ ಬಲಿಯಾಗಿದ್ದಾರೆ.

ಅಹಮದಾಬಾದ್‌ನಲ್ಲಿ ಐಪಿಎಲ್ ಫೈನಲ್ ಪಂದ್ಯವು ಜೂ.3ರ ರಾತ್ರಿ 7.30ಕ್ಕೆ ಪ್ರಾರಂಭವಾಗಿ 11.45ಕ್ಕೆ ಮುಕ್ತಾಯವಾಯಿತು. ಆದರೆ ಪಂದ್ಯದ ಆರಂಭಕ್ಕೂ ಮುನ್ನವೇ ಕೆಎಸ್‌ಸಿಎ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಆರ್‌ಸಿಬಿ ಅಭಿನಂದನಾ ಕಾರ್ಯಕ್ರಮಕ್ಕೆ ಅವಕಾಶ ಕೇಳಿ, ಪೊಲೀಸ್ ಬಂದೋಬಸ್ತ್‌ಗೆ ಮನವಿ ಮಾಡಿದ್ದು ಸಾಕಷ್ಟು ಅನುಮಾನ ಸೃಷ್ಟಿಸಿದೆ. ಅಲ್ಲದೆ ನಂತರದಲ್ಲಿ ಸರ್ಕಾರದ ದಿಕ್ಕು ತಪ್ಪಿಸಿ, ರಾಜ್ಯಪಾಲರು, ಮುಖ್ಯಮಂತ್ರಿಗಳಾದಿಯಾಗಿ ಸಚಿವರುಗಳು ಸಂಭ್ರಮಾಚರಣೆಯಲ್ಲಿ ಭಾಗವಹಿಸುವಂತೆ ಮಾಡಲಾಗಿದೆ. ಒಂದು ವೇಳೆ ಭಾಗವಹಿಸದಿದ್ದರೆ ಬೆಂಗಳೂರು ತಂಡದ ಬಗ್ಗೆ ಸರ್ಕಾರಕ್ಕೆ ಅಭಿಮಾನವಿಲ್ಲ ಎಂಬ ಆರೋಪ ಬರಬಹುದೆಂದು ಎಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ.

ಆದರೆ ಸಾಗರೋಪಾದಿಯಲ್ಲಿ ಧಾವಿಸಿದ ಲಕ್ಷಾಂತರ ಜನರನ್ನು ಪೊಲೀಸರು ನಿಯಂತ್ರಿಸಲಾಗದೆ ದುರಂತ ಸಂಭವಿಸಿದೆ. ಆದರೆ ಇದನ್ನೇ ರಾಜಕೀಯ ದಾಳವಾಗಿ ಬಳಸಿ ವಿರೋಧ ಪಕ್ಷದವರು ಸರ್ಕಾರದ ವಿರುದ್ಧ ಆರೋಪ ಮಾಡುತ್ತಿರುವುದು ಸರಿಯಲ್ಲ. ಸತ್ಯಾಸತ್ಯತೆ ಬಯಲಿಗೆಳೆಯಲು ಸರ್ಕಾರ ಕೂಡಲೇ ಕೆಎಸ್‌ಸಿಎ ಮತ್ತು ಆರ್‌ಸಿಬಿ ತಂಡದವರ ತನಿಖೆಗೊಳಪಡಿಸಲು ಸಿಬಿಐಗೆ ವಹಿಸಬೇಕು. ಈ ಸಂಸ್ಥೆಯವರು ಸಾವನ್ನಪ್ಪಿದ ಅಭಿಮಾನಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರದ ಜೊತೆಗೆ ಪ್ರತಿ ಕುಟುಂಬದ ತಲಾ ಒಬ್ಬರಿಗೆ ಉದ್ಯೋಗ ಕಲ್ಪಿಸಬೇಕು ಎಂದು ಭಾಸ್ಕರ್ ಒತ್ತಾಯಿಸಿದ್ದಾರೆ.

ಎರಡು ಮರಿಗಳಿಗೆ ಜನ್ಮ ನೀಡಿದ 'ಮೌಸಮಿ' ಬಿಳಿ ಹುಲಿ




ಭುವನೇಶ್ವರ: ಒಡಿಶಾದ ನಂದನಕಾನನ ಜೈವಿಕ ಉದ್ಯಾನದಲ್ಲಿ 'ಮೌಸಮಿ' ಎಂಬ ಬಿಳಿಹುಲಿ ಎರಡು ಮರಿಗಳಿಗೆ ಜನ್ಮ ನೀಡಿದೆ.

ಶನಿವಾರ ರಾತ್ರಿ 9 ಗಂಟೆಯಿಂದ 11 ಗಂಟೆಯ ಅವಧಿಯಲ್ಲಿ 'ಮೌಸಮಿ' ಮರಿಗಳಿಗೆ ಜನ್ಮ ನೀಡಿದೆ. ಒಂದು ಹುಲಿ ಮರಿ ಸಹಜ ಬಣ್ಣದ್ದಾದರೆ, ಇನ್ನೊಂದು ಮರಿ ತಾಯಿಯಂತೆ ಬಿಳಿ ಬಣ್ಣವನ್ನು ಹೊಂದಿದೆ ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

ತಾಯಿ ಹುಲಿ ಹಾಗೂ ಮರಿಗಳು ಆರೋಗ್ಯವಾಗಿರುವಂತೆ ಕಂಡು ಬಂದಿವೆ. 24 ತಾಸೂ ಅವುಗಳ ಮೇಲೆ ಉದ್ಯಾನದ ಸಿಬ್ಬಂದಿ ನಿಗಾವಹಿಸಿದ್ದಾರೆ. ಕೆಲ ದಿನಗಳ ನಂತರ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಮರಿಗಳು ಇನ್ನೂ ತಾಯಿಯೊಂದಿಗೆ ಅಂಟಿಕೊಂಡಿರುವುದರಿಂದ ಅವುಗಳ ಲಿಂಗ ತಿಳಿದು ಬಂದಿಲ್ಲ ಎಂದು ತಿಳಿಸಿದ್ದಾರೆ. ಪಾರ್ಕ್‌ನ 'ರಾಜೇಶ್' ಎಂಬ ಸಹಜ ಬಣ್ಣದ ಹುಲಿ ಹಾಗೂ 'ಮೌಸಮಿ' ಮಿಲನದಿಂದ ಮರಿಗಳು ಜನಿಸಿವೆ ಎಂದು ಅವರು ಹೇಳಿದ್ದಾರೆ

ಇದರೊಂದಿಗೆ ನಂದನಕಾನನ ಬಯೊಲಾಜಿಕಲ್ ಪಾರ್ಕ್‌ನಲ್ಲಿ ಹುಲಿಗಳ ಸಂಖ್ಯೆ 29ಕ್ಕೆ ಹೆಚ್ಚಳವಾಗಿದೆ. ಇದರಲ್ಲಿ 17 ಗಂಡು ಹುಲಿ ಹಾಗೂ 10 ಹೆಣ್ಣು ಹುಲಿ ಇವೆ. ಜೊತೆಗೆ ಎರಡು ಹುಲಿಮರಿಗಳಿವೆ. 19 ಹುಲಿಗಳು ಸಹಜ ಬಣ್ಣವನ್ನು ಹೊಂದಿದ್ದರೆ, 6 ಬಿಳಿಹುಲಿ ಇವೆ. ನಾಲ್ಕು ಕಪ್ಪುಬಣ್ಣದ ಹುಲಿಗಳಿವೆ ಎಂದು ವಿವರಿಸಿದ್ದಾರೆ.

ಶಾಲಾಮಟ್ಟದಲ್ಲಿ ಪರಿಸರ ಜಾಗೃತಿಗೆ ಮೈಗ್ರಾಪ ನಿರ್ಧಾರ



ಮೈಸೂರು ಗ್ರಾಹಕ ಪರಿಷತ್ ಸ್ಥಾಪನೆಯಾಗಿ 35 ವರ್ಷಗಳಾದ ಹಿನ್ನೆಲೆಯಲ್ಲಿ ಗ್ರಾಹಕ ಚಳವಳಿಯ ರೂವಾರಿ, ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಬಾಮೀ ವಿ.ಶೆಣೈ ಮತ್ತು ಪತ್ನಿ ಸುಮನ ಶೆಣೈ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.8(ಎಸ್‌ಪಿಎನ್)–ಗ್ರಾಹಕ ಚಳವಳಿ, ಪರಿಸರ ಜಾಗೃತಿ, ಪ್ಲಾಸ್ಟಿಕ್ ನಿಷೇಧ ಕುರಿತು ಶಾಲಾ ಹಂತದಲ್ಲಿ ಮಕ್ಕಳಿಗೆ ತಿಳಿಸಿಕೊಡುವ ಮೊದಲು ಶಿಕ್ಷಕರ ಹಂತದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಮೈಸೂರು ಗ್ರಾಹಕ ಪರಿಷತ್ ಸದಸ್ಯರಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಶಿಕ್ಷಣಾಧಿಕಾರಿ ಜಿ.ವೆಂಕಟಾಚಲ ಅವರೊಂದಿಗೆ ನಡೆದ ಸಂವಾದದಲ್ಲಿ ಈ ಸಲಹೆ ವ್ಯಕ್ತವಾಯಿತು.

ಮೈಗ್ರಾಪ ಸದಸ್ಯ ಡಿ.ವಿ.ದಯಾನಂದ ಸಾಗರ್, ಶಾಲಾ ಹಂತದಲ್ಲಿ ಇಕೋ ಮತ್ತು ಗ್ರಾಹಕ ಕ್ಲಬ್ ಸ್ಥಾಪನೆ, ಪರಿಸರ ಜಾಗೃತಿ, ಪ್ಲಾಸ್ಟಿಕ್ ಉಪಯೋಗ ಕಡಿಮೆ ಮಾಡುವ ಕುರಿತು ಜಾಗೃತಿ ಮೂಡಿಸಬೇಕು. ಇದಕ್ಕೂ ಮೊದಲು ಶಿಕ್ಷಕರಿಗೆ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು. ಇದಕ್ಕೆ ಶಿಕ್ಷಣಾಧಿಕಾರಿ ಜಿ.ವೆಂಕಟಾಚಲ ಮಾತನಾಡಿ, ಶಾಲಾ ಹಂತದಲ್ಲಿ ಯಾವುದೇ ಅಭಿಯಾನ ಅನುಷ್ಠಾನವಾಗಬೇಕಾದರೆ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಂದ ಸುತ್ತೋಲೆ ಹೊರಡಿಸಬೇಕು. ಆಗ ಮಾತ್ರ ಇಂತಹ ಅಭಿಯಾನಗಳನ್ನು ಹಮ್ಮಿಕೊಳ್ಳಲು ಸಾಧ್ಯ ಎಂದು ಸದಸ್ಯರ ಸಲಹೆಗೆ ಉತ್ತರಿಸಿದರು.

ಮುಂದುವರೆದು ಮೈಗ್ರಾಪ ಸದಸ್ಯರು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಆಯುಕ್ತರೊಂದಿಗೆ ಸಭೆ ನಡೆಸಿ, ಇದರ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಸಂಘ–ಸಂಸ್ಥೆಗಳೊಂದಿಗೆ ಅಭಿಯಾನ ಹಮ್ಮಿಕೊಳ್ಳುವ ಕುರಿತು ಮನವಿ ಮಾಡಿದರೆ, ಹಿರಿಯ ಅಧಿಕಾರಿಗಳು ಇದರ ಬಗ್ಗೆ ಸಾಧಕ–ಬಾಧಕ ಪರಿಶೀಲಿಸಿ ಕೆಳಹಂತದ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ಆದೇಶ ನೀಡುತ್ತಾರೆ. ಆಗ ರಾಜ್ಯಾದ್ಯಂತ ಶಿಕ್ಷಕರಿಗೆ ಅಭಿಯಾನ ಹಮ್ಮಿಕೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿದರು.

ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲು ಪ್ರತಿ ವರ್ಷ ಇಲಾಖೆಯಿಂದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅನುದಾನ ಬಿಡುಗಡೆಯಾಗುತ್ತದೆ. ಪ್ರಾಥಮಿಕ ಶಾಲೆಗೆ 4 ಸಾವಿರ, ಹಿರಿಯ ಪ್ರಾಥಮಿಕ ಶಾಲೆಗೆ 9 ಸಾವಿರ ಹಾಗೂ ಪ್ರೌಢಶಾಲೆಗೆ 25 ಸಾವಿರ ರೂ.ಗಳ ಅನುದಾನವನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬಿಡುಗಡೆ ಮಾಡಲಾಗುತ್ತದೆ. ಈ ಅನುದಾನದಲ್ಲಿ ಇಕೋ ಮತ್ತು ಗ್ರಾಹಕ ಕ್ಲಬ್‌ಗಳನ್ನು ಸ್ಥಾಪಿಸಿ, ಪ್ಲಾಸ್ಟಿಕ್ ಬಳಕೆಯಿಂದಾಗುವ ಸಮಸ್ಯೆ, ಗ್ರಾಹಕ ಕಾಯ್ದೆ ಹಾಗೂ ಪರಿಸರ ಜಾಗೃತಿ ಕುರಿತು ಅರಿವು ಮೂಡಿಸಲು ಅನುಕೂಲವಾಗುತ್ತದೆ ಎಂದರು.

ಕೇಂದ್ರ ಸರ್ಕಾರದ ಸೂಚನೆಯಂತೆ ಪ್ರತಿ ವಿದ್ಯಾರ್ಥಿಯಿಂದ ತನ್ನ ತಾಯಿ ನೆನಪಿನಲ್ಲಿ ಗಿಡ ನೆಡುವ ಕಾರ್ಯಕ್ರಮ ಚಾಲ್ತಿಯಲ್ಲಿದೆ. ಸಸಿ ನೆಡುವ ಕಾರ್ಯ ಶಾಲಾ ಆವರಣದಲ್ಲಿ ಆಗಬೇಕಿಲ್ಲ. ಮನೆ ಆವರಣ, ಕೃಷಿ ಜಮೀನಿನಲ್ಲಿ ಗಿಡನೆಟ್ಟು ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಅದರ ಫೋಟೋ ಅಪ್‌ಡೇಟ್ ಮಾಡಬಹುದಾಗಿದೆ. ಈಗಾಗಲೇ ಹಲವು ಶಾಲೆಗಳಲ್ಲಿ ಇಕೋ ಕ್ಲಬ್‌ಗಳ ಸ್ಥಾಪಿಸಿ, ಇದರ ಉಪಯೋಗ ಕುರಿತು ಕಾರ್ಯಚಟುವಟಿಕೆಗಳು ಆರಂಭವಾಗಿವೆ ಎಂದು ಸದಸ್ಯರ ಅಭಿಪ್ರಾಯಗಳಿಗೆ ಉತ್ತರಿಸಿದರು.

ಒಂಟಿಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ದಾಖಲಾತಿ ಇಲ್ಲದೆ, ಮುಚ್ಚಿ ಹೋಗಿದೆ. ಈ ಶಾಲೆ 120X90 ಅಡಿ ನಿವೇಶನದಲ್ಲಿದ್ದು ಇದನ್ನು ವಿಶೇಷ ಚೇತನರಿಗೆ ತರಗತಿಗಳಿಗೆ ಉಪಯೋಗಿಸಲು ಕಾರ್ಯಕ್ರಮ ರೂಪಿಸುವಂತೆ ಸಲಹೆ ವ್ಯಕ್ತವಾಯಿತು.

ಮೈಸೂರಿನಲ್ಲಿ ಆಟದ ಮೈದಾನ ಇಲ್ಲದ ಖಾಸಗಿ ಶಾಲೆಗಳಿಗೆ ಶಾಲಾ ಶಿಕ್ಷಣ ಇಲಾಖೆಯಿಂದ ಅನುಮತಿ ನೀಡಲಾಗುತ್ತಿದೆ. ಈ ನಿರ್ಧಾರ ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ. ಇಂತಹ ಶಾಲೆಗಳ ವಿರುದ್ಧ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಹಲವು ಸದಸ್ಯರು ಬೇಸರ ವ್ಯಕ್ತಪಡಿಸಿದರು. ಈ ವೇಳೆ ನಿವೃತ್ತ ಪ್ರಾಧ್ಯಾಪಕ ರಂಗರಾಜು, ಸದಸ್ಯರಾದ ಬಾನುಪ್ರಶಾಂತ್ ಸೇರಿದಂತೆ ಇತರರಿದ್ದರು.

ಸಭೆಯಲ್ಲಿ ನಿವೃತ್ತ ಪ್ರಾಧ್ಯಾಪಕ ಎನ್.ಎಸ್.ರಂಗರಾಜು, ಡಿ.ವಿ.ದಯಾನಂದ ಸಾಗರ್, ಅರುಣ್‌ಕುಮಾರ್ ಶೆಟ್ಟಿ, ಬಿ.ವಿ.ಬಾನು ಪ್ರಶಾಂತ್, ಬಿ.ಎಸ್.ಸೋಮಶೇಖರ್, ವಿಶ್ವನಾಥ್, ಎನ್.ಟಿ.ಯದುರಾಜ್, ಮಾಲವಿಕ ಗುಬ್ಬಿವಾಣಿ, ವಿಜಯ ರಮೇಶ್, ವಿ.ಎಸ್.ಸೇತುರಾವ್, ಎಸ್.ಎಲ್.ನಾಗಭೂಷಣ್, ಜಿ.ಶ್ರೀಧರ್, ರೂಪ ಪಾಲಾಕ್ಷ, ರವಿಚಂದ್ರ, ಪ್ರೊ.ಎನ್.ಎಸ್.ರಂಗರಾಜು, ಗೀತಾವೇಲುಮಣಿ, ಎಸ್.ವಿ.ರಾಘವೇಂದ್ರ, ಪ್ರಭ ನಂದೀಶ್, ಎಸ್.ಕೆ.ದಿನೇಶ್ ಸೇರಿದಂತೆ ಇತರಿದ್ದರು.

ಗ್ರಾಮಕ್ಕೊಂದು ಕೆರೆ, ದೇಗುಲವಿರಬೇಕು: ನಂಜಾವಧೂತ ಶ್ರೀ

ಮಾದನಾಯಕನ ಹಳ್ಳಿಯಲ್ಲಿ ಶ್ರೀ ಸಿದ್ದರಾಮೇಶ್ವರ ಸ್ವಾಮಿ ದೇವರ ಪುನರ್ ಪ್ರತಿಷ್ಠಾಪನೆ, ಬ್ರಹ್ಮಕಳಶೋತ್ಸವ

ಮದ್ದೂರು, ಜೂ.8– ಊರಿಗೊಂದು ಕೆರೆ, ಊರಿಗೊಂದು ದೇವಸ್ಥಾನವಿರಬೇಕು ಎಂದು ನಮ್ಮ ಪೂರ್ವಜರು ಬಹಳ ಹಿಂದೆಯೇ ಹೇಳಿದ್ದಾರೆ. ಅದನ್ನು ಮುಂದುವರೆಸಿ ಕೊಂಡು ಹೋಗುವ ಮನೋಭಾವವನ್ನು ಯುವಕರು ಸೇರಿದಂತೆ ಜನತೆ ಬೆಳೆಸಿಕೊಂಡು ಹೋಗಬೇಕು ಎಂದು ತುಮಕೂರು ಶ್ರೀ ಗುರು ಗುಂಡ ಬ್ರಹ್ಮೇಶ್ವರಸ್ವಾಮಿ ಮಹಾ ಸಂಸ್ಥಾಪನ ಮಠದ ನಂಜಾವಧೂತ ಮಹಾಸ್ವಾಮೀಜಿ ತಿಳಿಸಿದರು.

ತಾಲೂಕಿನ ಮಾದನಾಯಕನಹಳ್ಳಿ ಗ್ರಾಮದ ಶ್ರೀ ಸಿದ್ದರಾಮೇಶ್ವರಸ್ವಾಮಿ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಳಶೋತ್ಸವ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು.

ಜನತೆ ಸನ್ಮಾರ್ಗಗಳಲ್ಲಿ ನಡೆಯಬೇಕು ಆಗ ಮಾತ್ರ ಸಮಾಜದಲ್ಲಿ ಸುಭಿಕ್ಷೆಯಿಂದ ಇರಲು ಸಾಧ್ಯವಾಗುತ್ತದೆ, ಸಚ್ಚಾರಿತ್ರ್ಯ, ಸದ್ವಿಚಾರಗಳು ಮನುಷ್ಯನನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.

ಸಾವಿರಾರು ವರ್ಷಗಳ ಹಿನ್ನೆಲೆಯಿರುವ ಶ್ರೀ ಸಿದ್ದರಾಮೇಶ್ವರ ದೇವಸ್ಥಾನವನ್ನು ಶ್ರೀ ಪಟ್ಟಲದಮ್ಮ ಟ್ರಸ್ಟ್‌ನ ಪದಾಧಿಕಾರಿಗಳು ಅತ್ಯಂತ ಸುಂದರವಾಗಿ ನಿರ್ಮಿಸಿ ಪುನರ್ ಪ್ರತಿಷ್ಠಾಪನೆ ಮಾಡುತ್ತಿರುವುದು ಅತ್ಯಂತ ಖುಷಿ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಂಗೇರಿಯ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ದೇವಸ್ಥಾನಗಳನ್ನು ನಿರ್ಮಿಸಿ ಭಕ್ತಿಯಿಂದ ದೇವರನ್ನು ಪೂಜಿಸಿದರೆ ಇಷ್ಟಾರ್ಥ ದೊರೆಯುತ್ತದೆ. ದೇವರಲ್ಲಿ ಆಧ್ಯಾತ್ಮಿಕತೆ ಬರಲು ದೇವಸ್ಥಾನಗಳು ಮೂಲ ಕೇಂದ್ರಗಳಾಗಿವೆ. ಜತೆಗೆ ನಮ್ಮ ಸಂಸ್ಕೃತಿ, ಸಂಸ್ಕಾರ, ಪರಂಪರೆ, ಧರ್ಮ, ಆಚಾರ ವಿಚಾರ, ಸದ್ವಿಚಾರಗಳನ್ನು ಜನತೆ ಮೈಗೂಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.



ಮದ್ದೂರು ತಾಲೂಕಿನ ಮಾದನಾಯಕನಹಳ್ಳಿ ಗ್ರಾಮದ ಶ್ರೀ ಸಿದ್ದರಾಮೇಶ್ವರಸ್ವಾಮಿ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಳಶೋತ್ಸವ ಸಮಾರಂಭವನ್ನು ತುಮಕೂರು ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಮಹಾಸಂಸ್ಥಾನ ಮಠದ ನಂಜಾವಧೂತ ಮಹಾಸ್ವಾಮೀಜಿ ಉದ್ಘಾಟಿಸಿದರು.

ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಮಾತನಾಡಿ, ಮಂಡ್ಯ ಜಿಲ್ಲೆಯು ಅದರಲ್ಲಿಯೂ ಮದ್ದೂರು ತಾಲೂಕು ನನ್ನ ತಂದೆ ಎಚ್.ಡಿ.ಕುಮಾರಸ್ವಾಮಿರವರಿಗೆ ಮರುಜನ್ಮ ನೀಡಿದೆ, ಇಂದು ಅವರು ಕೇಂದ್ರ ಸರ್ಕಾರದಲ್ಲಿ ಉನ್ನತ ಸ್ಥಾನದಲ್ಲಿರುವುದಕ್ಕೆ ನಿಮ್ಮ ಆಶೀರ್ವಾದವೇ ಕಾರಣವೆಂದ ಅವರು ಮುಂದಿನ ದಿನಗಳಲ್ಲಿ ಕ್ಷೇತ್ರದ ಜನರ ಋಣ ತೀರಿಸುವುದಕ್ಕೆ ದೊಡ್ಡ ಕೈಗಾರಿಕೆಗಳನ್ನು ಜಿಲ್ಲೆಯಲ್ಲಿ ಸ್ಥಾಪಿಸುವ ಗುರಿ ಹೊಂದಿದ್ದಾರೆ ಎಂದರು.

ಪಟ್ಟಲದಮ್ಮದೇವಿ ಟ್ರಸ್ಟ್‌ನ ಅಧ್ಯಕ್ಷ ಮಾದನಾಯಕನಹಳ್ಳಿ ಕೆ.ರಾಜಣ್ಣ ಮಾತನಾಡಿ, ಮಾದನಾಯಕನಹಳ್ಳಿಯಲ್ಲಿ ಶ್ರೀ ಸಿದ್ದರಾಮೇಶ್ವರ ಸ್ವಾಮಿ ನೂತನ ದೇಗುಲ ಸುಂದರವಾಗಿ ನಿರ್ಮಾಣವಾಗಲು ದಾನಿಗಳು, ಭಕ್ತಾಧಿಗಳು, ಗ್ರಾಮಸ್ಥರು ಸೇರಿದಂತೆ ಹಲವಾರು ಮಂದಿ ಕೈ ಜೋಡಿಸಿದ್ದಾರೆ ಹಾಗೂ ಟ್ರಸ್ಟ್ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಹಗಲಿರುಳು ದುಡಿದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಸಿದ್ದರಾಮೇಶ್ವರಸ್ವಾಮಿ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಲಶೋತ್ಸವದ ಅಂಗವಾಗಿ ಭಾನುವಾರ ದೇಗುಲದಲ್ಲಿ ಬೆಳಗ್ಗೆ ಬ್ರಹ್ಮ ಕಲಶಾಭಿಷೇಕ, ಶಿಖರ ಕಲಾಭಿಷೇಕ, ಪ್ರಸನ್ನ ಪೂಜೆ, ಮಂತ್ರಾಕ್ಷತೆ, ಮಹಾಮಂಗಳಾರತಿ ಹಮ್ಮಿಕೊಳ್ಳಲಾಗಿತ್ತು ಹಾಗೂ ಮಧ್ಯಾಹ್ನ ಸಹಸ್ರಾರು ಭಕ್ತಾಧಿಗಳಿಗೆ ರಾಗಿ ಮುದ್ದೆ, ಅವರೇಕಾಳು ಕೂಟು, ಒಬ್ಬಟ್ಟು, ಪಾಯಸ, ಅನ್ನ ಸಾಂಬಾರು, ಮಜ್ಜಿಗೆಯ ಬಾಳೆ ಎಲೆ ಊಟವನ್ನು ಉಣ ಬಡಿಸಿದ್ದು ಹಾಗೂ ದೇವರ ಕುರಿತು ಹಮ್ಮಿಕೊಂಡಿದ್ದ ರಸ ಮಂಜರಿ ಕಾರ್ಯಕ್ರಮ ಭಕ್ತಾಧಿಗಳ ಗಮನ ಸೆಳೆಯಿತು.

ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥಸ್ವಾಮೀಜಿ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಪಟ್ಟಲದಮ್ಮದೇವಿ ಟ್ರಸ್ಟ್ ಅಧ್ಯಕ್ಷ ಮಾದನಾಯಕನಹಳ್ಳಿ ಕೆ.ರಾಜಣ್ಣ, ಕಾರ್ಯದರ್ಶಿ ಪ್ರೊ.ಮಲ್ಲಯ್ಯ, ಖಜಾಂಚಿ ಗಿರೀಶ್, ಪ್ರಧಾನ ಅರ್ಚಕ ಸೂರ್ಯನಾರಾಯಣ ದಿಕ್ಷೀತ್, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಉದ್ಯಮಿ ಸುಬ್ರಮಣ್ಯ ನಾಯ್ಡು, ಮುಖಂಡರಾದ ಡಿ.ಟಿ. ಸಂತೋಷ್, ಮಹರ್ನವಮಿ ದೊಡ್ಡಿ ಚಂದ್ರಣ್ಣ, ಕೂಳಗೆರೆ ಶೇಖರ್, ದೇವರಾಜು, ನಾಗರಾಜು, ಶಶಿಕಲಾಹೊನ್ನೇಗೌಡ, ಬಿಳಿಮರೀಗೌಡ ಇದ್ದರು.

ಬೆಂಗಳೂರು ಕಾಲ್ತುಳಿತದಲ್ಲಿ ಸಾವನ್ನಪ್ಪಿದ ಕೆ.ಆರ್.ಪೇಟೆ ಯುವಕನ ಕುಟುಂಬಕ್ಕೆ 25ಲಕ್ಷ ರೂ. ಚೆಕ್ ವಿತರಣೆ

ಕೆ.ಆರ್.ಪೇಟೆ, ಜೂ.8– ಬೆಂಗಳೂರಲ್ಲಿ ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟ ತಾಲೂಕಿನ ರಾಯಸಮುದ್ರ ಗ್ರಾಮದ ಪೂರ್ಣಚಂದ್ರ ಅವರ ತಾಯಿ ಕಾಂತಾಮಣಿ ಅವರಿಗೆ ಸರ್ಕಾರದಿಂದ 25 ಲಕ್ಷ ರೂ.ಗಳ ಚೆಕ್ ಅನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ವಿತರಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಸಚಿವ ಎನ್.ಚೆಲುವರಾಯಸ್ವಾಮಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಉಂಟಾಗಿ ರಾಯಸಮುದ್ರ ಗ್ರಾಮದ ಶಿಕ್ಷಕ ಆರ್.ಬಿ.ಚಂದ್ರು ಮತ್ತು ಕಾಂತಾಮಣಿ ದಂಪತಿಗಳ ಪುತ್ರ ಪೂರ್ಣಚಂದ್ರ ಸೇರಿದಂತೆ 11 ಕ್ರೀಡಾ ಪ್ರೇಮಿಗಳು ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಇಂತಹ ದುರಂತ ನಡೆಯಬಾರದಿತ್ತು ಎಂದರು.

ಕಾಲ್ತುಳಿತದಲ್ಲಿ ಮೃತಪಟ್ಟ ಎಲ್ಲಾ 11 ಮಂದಿಯ ಕುಟುಂಬಕ್ಕೂ ರಾಜ್ಯ ಸರ್ಕಾರವು ತಲಾ 25ಲಕ್ಷ ರೂ.ಗಳನ್ನು ಪರಿಹಾರ ನೀಡಿದೆ. ಸರ್ಕಾರವು ಎಷ್ಟೇ ಪರಿಹಾರ ನೀಡಬಹುದು. ಕಳೆದು ಹೋದ ಜೀವವನ್ನು ವಾಪಸ್ ತರಲು ಸಾಧ್ಯವಾಗುವುದಿಲ್ಲ. ಪುತ್ರನನ್ನು ಕಳೆದುಕೊಂಡ ಪೋಷಕರು ಮತ್ತು ಕುಟುಂಬದವರ ಮನಸ್ಸಿಗೆ ಆಗಿರುವ ನೋವನ್ನು ಸಹಿಸುವ ಶಕ್ತಿಯನ್ನು ಆ ದೇವರು ನೀಡಲಿ ಎಂದು ಪ್ರಾರ್ಥಿಸಿದರು.

ಇದೇ ವೇಳೆ ಮೃತ ಪೂರ್ಣಚಂದ್ರ ಅವರ ಭಾವನಿಗೆ ಕೆ.ಆರ್.ಪೇಟೆಯ ಫುಡ್ ಪಾರ್ಕ್‌ನಲ್ಲಿ ಉದ್ಯೋಗ ಕೊಡಿಸುವಂತೆ ಜೊತೆಯಲ್ಲಿದ್ದ ಜಿಲ್ಲಾಧಿಕಾರಿಗಳಿಗೆ ಸಚಿವರು ಸೂಚಿಸಿದರು.



ಕಾಲ್ತುಳಿತದಲ್ಲಿ ಸಾವನ್ನಪ್ಪಿದ್ದ ಪೂರ್ಣಚಂದ್ರ ಅವರ ತಾಯಿಗೆ ರಾಜ್ಯ ಸರ್ಕಾರದಿಂದ 25ಲಕ್ಷ ರೂ. ಗಳ ಪರಿಹಾರದ ಚೆಕ್ ಅನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ವಿತರಿಸಿ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್, ಕ್ಷೇತ್ರದ ಶಾಸಕ ಹೆಚ್.ಟಿ. ಮಂಜು, ತಹಸೀಲ್ದಾರ್ ಎಸ್.ಯು.ಅಶೋಕ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಜಿ.ಪಂ. ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ನಿವೃತ್ತ ಪ್ರಾಂಶುಪಾಲ ಆರ್.ಟಿ.ಶಿವಕುಮಾರ್, ಗ್ಯಾಸ್ ರಾಜಶೇಖರ್, ಮಡುವಿನಕೋಡಿ ಕಾಂತರಾಜು, ರಾಜಯ್ಯ, ಹೆತ್ತೋನಹಳ್ಳಿ ನಾರಾಯಣಗೌಡ, ಗ್ರಾ.ಪಂ. ಉಪಾಧ್ಯಕ್ಷ ಯೋಗೇಶ್, ಸಚಿವರ ಆಪ್ತ ಸಹಾಯಕ ಚೇತನಾಮಹೇಶ್, ಇನ್ಸ್‌ಪೆಕ್ಟರ್ ಸುಮಾರಾಣಿ, ಎಸ್.ಐ ನವೀನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆರ್‌ಸಿಬಿ ತಂಡ ಐಪಿಎಲ್ ಚಾಂಪಿಯನ್ ಆಗಿ ಹೊರ ಹೊಮ್ಮಿದ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಕಾಲ್ತುಳಿತ ಉಂಟಾಗಿ ಪೂರ್ಣ ಚಂದ್ರ ಸೇರಿದಂತೆ 11 ಮಂದಿ ಸಾವನ್ನಪ್ಪಿ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಶ್ರೀರಂಗಪಟ್ಟಣ ಬಳಿ ರಸ್ತೆ ಅಪಘಾತ: ಬೈಕ್ ಸವಾರ ಸಾವು, ಮತ್ತೋರ್ವನಿಗೆ ಗಂಭೀರ ಗಾಯ

ಮೃತ ದೇಹ, ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಲು ನೆರವಾದ ಸಚಿವ ಚಲುವರಾಯಸ್ವಾಮಿ

ಮಂಡ್ಯ, ಜೂ.8– ಶ್ರೀರಂಗಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿ ಮತ್ತೋರ್ವ ಗಂಭೀರವಾಗಿ ಗಾಯಗೊಂಡಿದ್ದಾನೆ.

ಶ್ರೀರಂಗಪಟ್ಟಣದ ಚೆಕ್ ಪೋಸ್ಟ್ ಬಳಿ ಶ್ರೀ ಸಾಯಿ ಆಶ್ರಮದ ಸಮೀಪವಿರುವ ಸೇತುವೆಯಲ್ಲಿ ಈ ಘಟನೆ ಸಂಭವಿಸಿದ್ದು, ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಪರಾರಿಯಾಗಿದೆ.

ಮೃತ ವ್ಯಕ್ತಿ ಮತ್ತು ಗಾಯಾಳುವಿನ ವಿವರ ತಿಳಿದು ಬಂದಿಲ್ಲ. ಈ ವೇಳೆ ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಗಾಯಾಳು ಮತ್ತು ಮೃತ ದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲು ನೆರವಾಗಿದ್ದಾರೆ.

ಸ್ಥಳಕ್ಕೆ ಶ್ರೀರಂಗಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಡಿಕ್ಕಿ ಹೊಡೆದು ಪರಾರಿಯಾಗಿರುವ ಬಸ್‌ನ ಹುಡುಕಾಟ ನಡೆಸಿದ್ದಾರೆ. ಈ ಸಂಬಂಧ ಟೌನ್ ಠಾಣೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಭಾರತೀನಗರದ ಬಳಿ ಈಜಲು ಹೋದ ಯುವಕರಿಬ್ಬರ ಸಾವು

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮೃತರ ಕುಟುಂಬಕ್ಕೆ ಸಾಂತ್ವನ

ಭಾರತೀನಗರ, ಜೂ.8– ಇಲ್ಲಿಗೆ ಸಮೀಪದ ಕ್ಯಾತಘಟ್ಟದ ಹೆಬ್ಬಾಳದಲ್ಲಿ ಈಜಲು ಹೋದ ಇಬ್ಬರು ಯುವಕರು ಸಾವನ್ನಪ್ಪಿದ್ದಾರೆ.

ಆಲಭುಜನಹಳ್ಳಿ ಗ್ರಾಮದ ಸಿದ್ದರಾಜು ಅವರ ಪುತ್ರ ಎ.ಎಸ್.ಚೇತನ್(16) ಹಾಗೂ ಸ್ವಾಮಿ ಅವರ ಪುತ್ರ ದರ್ಶನ್ (19) ಮೃತ ದುರ್ದೈವಿಗಳು.

ಈ ಇಬ್ಬರು ಯುವಕರು ಆಲಭುಜನಹಳ್ಳಿ ಗ್ರಾಮದವರಾಗಿದ್ದು, ಆತ್ಮೀಯ ಸ್ನೇಹಿತರಾಗಿದ್ದರು. ಕ್ಯಾತಘಟ್ಟ ಗ್ರಾಮದ ಬಳಿ ಇರುವ ಶಿಂಷಾ ನದಿಯ ಹೆಬ್ಬಾಳದಲ್ಲಿ ಈಜಲು ಹೋಗಿದ್ದಾರೆ. ಈ ವೇಳೆ ನೀರಿನ ಸುಳಿಯಲ್ಲಿ ಸಿಲುಕಿ ಸಾವನಪ್ಪಿದ್ದಾರೆಂದು ತಿಳಿದು ಬಂದಿದೆ. ಚೇತನ್ ಭಾರತೀ ಕಾಲೇಜಿನಲ್ಲಿ ಪ್ರಥಮ ಪಿಯುಸಿಗೆ ದಾಖಲಾಗಿದ್ದ,



ದರ್ಶನ್



ಚೇತನ್

ಮತ್ತೋರ್ವ ದರ್ಶನ್ ಮೈಸೂರಿನ ಕಾಲೇಜಿನಲ್ಲಿ ಎಂಎಸ್‌ಸಿ ಮಾಡುತ್ತಿದ್ದ. ಈ ಇಬ್ಬರು ಯುವಕರು ಮೃತಪಟ್ಟ ಹಿನ್ನೆಲೆಯಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ಆಲಭುಜನಹಳ್ಳಿ ಗ್ರಾಮಕ್ಕೆ ತೆರಳಿ ಅಂತಿಮ ದರ್ಶನ ಪಡೆದು ಕುಟುಂಬಕ್ಕೆ ಧೈರ್ಯ ತುಂಬಿದ್ದಾರೆ.

ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಆಲಭುಜನಹಳ್ಳಿಯಲ್ಲಿ ನೆರವೇರಿತು.

ಮಡುವಿನಕೋಡಿ ಗ್ರಾ.ಪಂಗೆ ನಾಗರಾಜು ಉಪಾಧ್ಯಕ್ಷ

ಕೆ.ಆರ್.ಪೇಟೆ, ಜೂ.8– ತಾಲೂಕಿನ ಬೂಕನಕೆರೆ ಹೋಬಳಿಯ ಮಡುವಿನಕೋಡಿ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಿಂದಿನ ಉಪಾಧ್ಯಕ್ಷೆ ರತಿ ಮಹದೇವ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನ ಬಯಸಿ ನಾಗರಾಜು ಹೊರತುಪಡಿಸಿ ಉಳಿದ ಯಾವ ಸದಸ್ಯರು ಉಮೇದುವಾರಿಕೆ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿಯಾಗಿ ಹೇಮಾವತಿ ನೀರಾವರಿ ಇಲಾಖೆಯ ನಂ.5ರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆನಂದ್ ಕಾರ್ಯನಿರ್ವಹಿಸಿದರು.

ನಾಲ್ವಡಿ ಜನ್ಮದಿನ ಆಚರಣೆ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪಾಂಡವಪುರ, ಜೂ.8– ವಿದ್ಯಾರ್ಥಿಗಳು ಜೀವನದಲ್ಲಿ ಶ್ರದ್ಧೆ, ಶಿಸ್ತು ಹಾಗೂ ಉತ್ತಮ ಗುರಿ ಹೊಂದುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್‌ಪುಟ್ಟಣ್ಣಯ್ಯ ಕರೆ ನೀಡಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆ, ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಕಾಶ್‌ಮೇನಾಗರ ಅವರ 'ಕವಿಕಾವ್ಯ ಡಿಂಡಮ' ಕೃತಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳು ಜೀವನದಲ್ಲಿ ಕಷ್ಟಪಟ್ಟು ಓದಿದರೆ ಮಾತ್ರ ಸಮಾಜದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ, ಕಷ್ಟಪಟ್ಟು ಓದಿ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿರುವ ಕಾರಣಕ್ಕೆ ಮಕ್ಕಳಿಗೆ ಕಸಾಪ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಹೆಚ್ಚಿನ ಶ್ರಮಪಟ್ಟು ಅಧ್ಯಯನ ಮಾಡಬೇಕು ಎಂದು ತಿಳಿಸಿದರು.





ಪಾಂಡವಪುರ ಪಟ್ಟಣದ ಕಸಾಪ ಭವನದಲ್ಲಿ ನಡೆದ ನಾಲ್ವಡಿ ಜಯಂತಿ, ಪ್ರತಿಭಾ ಪುರಸ್ಕಾರ, ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಪ್ರಕಾಶ್‌ಮೇನಾಗರ ಅವರ 'ಕವಿಕಾವ್ಯ ಡಿಂಡಮ' ಕೃತಿ ಬಿಡುಗಡೆಗೊಳಿಸಿದರು. (ಎಡ ಚಿತ್ರದಲ್ಲಿ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುತ್ತಿರುವುದನ್ನು ಕಾಣಬಹುದು.

ತಹಸೀಲ್ದಾರ್ ಸಂತೋಷ್‌ಕುಮಾರ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಂಡ್ಯ ಜಿಲ್ಲೆಗೆ ಕೊಟ್ಟಿರುವ ಕೊಡುಗೆ ಅಪಾರವಾಗಿದೆ. ಮೈಸೂರು ವಿವಿ, ಮೈಸೂರು ಬ್ಯಾಂಕ್, ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣ, ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆ, ಕೆರೆಕಟ್ಟೆಗಳ ನಿರ್ಮಾಣ ಸೇರಿದಂತೆ ಅನೇಕ ಪುಣ್ಯದ ಕೆಲಸಗಳನ್ನು ಮಾಡಿ ಜನರ ನೆಮ್ಮದಿಯ ಬದುಕಿಗೆ ಕಾರಣರಾಗಿದ್ದಾರೆ. ಇಂತಹ ಪುಣ್ಯಾತ್ಮರನ್ನು ಜಿಲ್ಲೆಯ ಜನತೆ ಪ್ರತಿದಿನ ಸ್ಮರಿಸಬೇಕು ಎಂದು ಬಣ್ಣಿಸಿದರು.

ನಾಲ್ವಡಿ ಪ್ರಶಸ್ತಿ ಸ್ವೀಕರಿಸಿ ಗಾನಸುಮ ಕೆ.ಪರಮೇಶ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ಆಗಮಿಸಿ ಪ್ರಕಾಶ್ ಮೇನಾಗರ ಅವರ 'ಕವಿಕಾವ್ಯ ಡಿಂಡಿಮ' ಕೃತಿ ಬಿಡುಗಡೆಗೊಳಿಸಿ ತುರ್ತು ಕಾರ್ಯಕ್ರಮ ನಿಮಿತ್ತ ತೆರಳಿದರು.

2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿದ 74 ಮಂದಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಗಾನಸುಮ ಕೆ.ಪರಮೇಶ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಲಾಯಿತು.

ಸಮಾರಂಭದಲ್ಲಿ ನಿವೃತ್ತ ಶಿಕ್ಷಕ ಚಂದ್ರಶೇಖರಯ್ಯ, ಮುತ್ತಿಗೆರೆ ಮಂಜು, ಟಿ.ಪಿ.ರೇವಣ್ಣ, ಕನಗನಮರಡಿ ಕೃಷಿ ಪತ್ತಿನ ಸಹಕಾರದ ಅಧ್ಯಕ್ಷ ಎಚ್.ಜೆ.ರಾಮಕೃಷ್ಣ, ಕಸಾಪ ಪದಾಧಿಕಾರಿಗಳಾದ ಧರ್ಮರತ್ನಾಕರ, ಧನಂಜಯ್, ಉದ್ಯಮಿ ಶಿವಕುಮಾರ್, ಜ್ಞಾನೇಶ್‌ನರಹಳ್ಳಿ, ವೆಂಕಟೇಶ್, ಬಾಲಕೃಷ್ಣ, ಶಿವರಾಜು, ಶ್ರೀನಿವಾಸ್ ಮತ್ತು ಗ್ರಾಮಸ್ಥರು ಸೇರಿದಂತೆ ಹಲವರು ಹಾಜರಿದ್ದರು.

ಒಂದನೇ ಪುಟದಿಂದ

ಯಾರೂ ನನಗೆ ಮಾಹಿತಿಯನ್ನ ನೀಡಿಲ್ಲ

ಕುಮಾರಸ್ವಾಮಿ ನಾನು ಪೊಲೀಸರಿಗೆ ಧಮ್ಕಿ ಹಾಕಿದ್ದೇನೆಂದು ಸುಳ್ಳು ಹೇಳಿದ್ದಾರೆ. ಈ ಪ್ರಕರಣದಲ್ಲಿ ನಾವೇನು ತಪ್ಪು ಮಾಡಿಲ್ಲ ಎಂದು ಪುನರುಚ್ಚರಿಸಿದರು.

ಎಲ್ಲರಿಗೂ ನೋವಾಗಿದೆ: ಆರ್‌ಸಿಬಿ ಗೆದ್ದಾಗ ಬಿಜೆಪಿಯವರು ಮೆರವಣಿಗೆ ಮಾಡುವ ಬಗ್ಗೆ ಟ್ವೀಟ್ ಮಾಡಿದ್ದು, ಇದೀಗ ಅವರೇ ಈ ಪ್ರಕರಣಕ್ಕೆ ಬೇರೆ ಬಣ್ಣ ಹಚ್ಚುವ ಕೆಲಸ ಮಾಡಿದ್ದಾರೆ ಎಂದು ಬಿಜೆಪಿ ಮಾಡಿದ್ದ ಟ್ವೀಟ್ ಅನ್ನು ಓದಿದ ಸಿಎಂ, ನಾನು ಮುಖ್ಯಮಂತ್ರಿ ಆದಾಗಿನಿಂದ ಯಾವತ್ತೂ ಇಂತಹ ಪ್ರಕರಣ ಆಗಿರಲಿಲ್ಲ. ಈಗ ಆಗಿರುವುದಕ್ಕೆ ವೈಯಕ್ತಿಕವಾಗಿ ನೋವಾಗಿದೆ. ಕೇವಲ ನನಗೆ ಮಾತ್ರವಲ್ಲ ಎಲ್ಲರಿಗೂ ನೋವಾಗಿದೆ. ವಿಧಾನ ಸೌಧದ ಮುಂದೆ ಏನಾದರೂ ಕಾರ್ಯಕ್ರಮ ಮಾಡದೇ ಇದ್ದಿದ್ದರೆ ಅದಕ್ಕೂ ಬಿಜೆಪಿಯ ವರು ಬೇರೆ ಬಣ್ಣ ಕಟ್ಟುತ್ತಿದ್ದರು ಎಂದರು.

ಬೆಂಗಳೂರಿನ ತಮ್ಮ ನಿವಾಸದಲ್ಲಿ ಸಚಿವರು ಮತ್ತು ಅಧಿಕಾರಿಗಳೊಂದಿಗಿನ ಸಭೆ ನಡೆಸಿದ ಸಂಬಂಧ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಿರಂತರವಾಗಿ ಸಭೆ ನಡೆಯುತ್ತಾ ಇರುತ್ತದೆ. ಇದರಲ್ಲಿ ವಿಶೇಷವಿಲ್ಲ. ದುರಂತದ ಘಟನೆಯಿಂದ ಸರಕಾರಕ್ಕೆ ಮುಜುಗರ ಆಗಿಲ್ಲ. ಇನ್ನೂ ನಮ್ಮನ್ನು ರಾಜೀನಾಮೆ ಕೇಳುವ ಬಿಜೆಪಿ ಹಾಗೂ ಕುಮಾರಸ್ವಾಮಿ ಅವರು, ಕುಂಭಮೇಳದಲ್ಲಿ 50–60 ಜನ ಸತ್ತರು, ಯಾರಾದ್ರೂ ಕೇಳಿದ್ರಾ. ಸೇತುವೆ ಉದ್ಘಾಟನೆಯಂದೇ ಬಿದ್ದು ಹೋಗಿ ನೂರಾರು ಜನ ಸಾವನ್ನಪ್ಪಿದರು. ಆಗ ಪ್ರಧಾನಿಯವರು ರಾಜೀನಾಮೆ ಕೊಟ್ರಾ, ಯಾರಾದ್ರೂ ಕೇಳಿದ್ದಿರಾ ಎಂದು ಪ್ರಶ್ನಿಸಿದರು.

ನರೇಗಾ ಅನುದಾನ ವಿಳಂಬ: ರಾಜ್ಯ ದಲ್ಲಿ ನರೇಗಾ ಸಿಬ್ಬಂದಿಗಳಿಗೆ ವೇತನ ಬರುತ್ತಿಲ್ಲ ಎಂಬುದಕ್ಕೆ ಪ್ರತಿಕ್ರಿಯಿಸಿ, ನರೇಗಾದಲ್ಲಿ ಅನುದಾನ ಬಹಳ ವರ್ಷದಿಂದ ವಿಳಂಬವಾಗುತ್ತಿದೆ. ರಾಜ್ಯದ ಪಾಲನ್ನು ಖರ್ಚು ಮಾಡುತ್ತಿದ್ದೇವೆ. ಕೇಂದ್ರದಿಂದ ಕಾಲಕ್ಕೆ ಸರಿಯಾಗಿ ಅನುದಾನ ತಲುಪಿಸಿಲ್ಲ. ಈ ಸಂಬಂಧ ಅನೇಕ ಪತ್ರ ಬರೆದಿದ್ದೇವೆ. ಆದರೂ ಅನುದಾನ ನೀಡಿಲ್ಲ ಎಂದು ತಿಳಿಸಿದರು.

ಕೆಡಿಪಿ ಸಭೆ ಕುರಿತು ಚರ್ಚೆ: ಇನ್ನೂ ಮೈಸೂರಿನಲ್ಲಿ ಕೆಡಿಪಿ ಸಭೆ ಸರಿಯಾಗಿ ನಡೆಯದ ಕುರಿತ ಪ್ರಶ್ನೆಗೆ ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸು ವುದಾಗಿ ಹೇಳಿದರಲ್ಲದೇ ಕಳೆದ ವರ್ಷದ ದಸರಾ ಲೆಕ್ಕ ಪತ್ರದ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿದರು. ಸಚಿವ ಕೆ.ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಮತ್ತಿತರರಿದ್ದರು.

ಅಪಘಾತ: ಬೆಂಗಳೂರಿನ ಇಬ್ಬರು ಸಾವು

ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಪ್ರತ್ಯೇಕ ದುರಂತದಲ್ಲಿ ಮೂವರ ಸಾವು: ಈ ಮಧ್ಯೆ ಭಾರತೀನಗರ ಬಳಿಯ ಕ್ಯಾತಘಟ್ಟದ ಹೆಬ್ಬಾಳದಲ್ಲಿ ಈಜಲು ಹೋಗಿ ಆಲಭುಜನ ಹಳ್ಳಿಯ ಎ.ಎಸ್. ಜೀವನ್(16) ಹಾಗೂ ದರ್ಶನ್(19) ಮುಳುಗಿ ಸಾವನ್ನಪ್ಪಿದ್ದಾರೆ. ಅಲ್ಲದೆ ಶ್ರೀರಂಗಪಟ್ಟ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದು, ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೋರ್ವ ತೀವ್ರವಾಗಿ ಗಾಯಗೊಂಡಿದ್ದಾನೆ.

ಭದ್ರತಾ ಮುಖ್ಯಸ್ಥರ ವಿರೋಧ!

ಜೂನ್ 3ರ ಮಂಗಳವಾರ ಬೆಳಿಗ್ಗೆ 4 ಗಂಟೆಯವರೆಗೆ ಪೊಲೀಸ್ ಸಿಬ್ಬಂದಿ ಕರ್ತವ್ಯದಲ್ಲಿ ದ್ದರು. ಹೀಗಾಗಿ, ಅಲ್ಪಾವಧಿಯಲ್ಲಿ ಇಂತಹ ಭವ್ಯ ಕಾರ್ಯಕ್ರಮವನ್ನು ಆಯೋಜಿಸಲು ಈಗಾಗಲೇ ಪ್ರತಿರೋಧ ವ್ಯಕ್ತವಾಗಿತ್ತು. ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ನಗರ ಪೊಲೀಸ್ ಆಯುಕ್ತರಾದ ಬಿ ದಯಾನಂದ, ಹೆಚ್ಚುವರಿ ಪೊಲೀಸ್ ಆಯುಕ್ತ (ಪಶ್ಚಿಮ) ವಿಕಾಶ್ ಕುಮಾರ್ ವಿಕಾಶ್, ಉಪ ಪೊಲೀಸ್ ಆಯುಕ್ತ (ಕೇಂದ್ರ) ಶೇಖರ್ ಎಚ್ ಟಿ ಮತ್ತು ಇತರ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಇಬ್ಬರು ಪದಾಧಿಕಾರಿಗಳು ಸಹ ತಮ್ಮ ಕಾರ್ಯದರ್ಶಿ ಮತ್ತು ಖಜಾಂಚಿ ಹುದ್ದೆಗಳಿಗೆ ಇಬ್ಬರು ರಾಜೀನಾಮೆ ನೀಡಿದ್ದಾರೆ.

ಶೆಟ್ಟಿ ಹತ್ಯೆ ಪ್ರಕರಣ: ತನಿಖೆ ಎನ್‌ಐಎಗೆ

ಎನ್‌ಐಎಗೆ ವಹಿಸಬೇಕೆಂದು ಒತ್ತಾಯಿಸಿ ದ್ದರು. ನಿಷೇಧಿತ ಸಂಘಟನೆಯಾದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾರ್ಯ ಕರ್ತರು ಈ ಕೊಲೆಯಲ್ಲಿ ಭಾಗಿಯಾಗಿರಬ ಹುದು ಎಂದು ಅವರು ತಮ್ಮ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದರು.

ಈ ಘಟನೆಯನ್ನು ಪ್ರತ್ಯೇಕ ಅಪರಾಧ ಘಟನೆಯಾಗಿ ನೋಡಲಾಗುವುದಿಲ್ಲ ಎಂದು ಚೌಟ ಬರೆದಿದ್ದರು. ಇದು ಕರಾವಳಿ ಕರ್ನಾ ಟಕದಲ್ಲಿ ಹರಡುತ್ತಿರುವ ಇಸ್ಲಾಮಿಕ್ ಮೂಲಭೂತವಾದ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಗಳ ಒಂದು ಭಾಗವಾಗಿದೆ. ಇದಕ್ಕೂ ಮೊದಲು, ಬಿಜೆಪಿ ಯುವ ನಾಯಕ ಪ್ರವೀಣ್ ನೆಟ್ಟಾರು ಅವರನ್ನು ಅದೇ ಪ್ರದೇಶದಲ್ಲಿ PFI ಪಿಎಫ್‌ಐ ಕಾರ್ಯಕರ್ತರು ಹತ್ಯೆ ಮಾಡಿದ್ದರು. ಸುಹಾಸ್ ಶೆಟ್ಟಿ ಕ್ರಿಮಿನಲ್ ದಾಖಲೆಯನ್ನು ಹೊಂದಿದ್ದಾರೆ. ಅವರ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮತ್ತು ಮಂಗಳೂರು ನಗರದಲ್ಲಿ ನಾಲ್ಕು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈತ ಈ ಹಿಂದೆ ಬಜರಂಗ ದಳದೊಂದಿಗೆ ಸಂಬಂಧ ಹೊಂದಿದ್ದ ಮತ್ತು 23 ವರ್ಷದ ಮುಸ್ಲಿಂ ಯುವಕ ಮೊಹಮ್ಮದ್ ಫಾಜಿಲ್ ಹತ್ಯೆಯಲ್ಲಿ ಆತನ ಹೆಸರು ಕೇಳಿಬಂದಿತ್ತು. ಬಿಜೆಪಿ ನಾಯಕ ಪ್ರವೀಣ್ ನೆಟ್ಟಾರು ಹತ್ಯೆಯಾದ ಎರಡು ದಿನಗಳ ನಂತರ ಜು.2022ರಲ್ಲಿ ಈ ಕೊಲೆ ನಡೆದಿತ್ತು. ಫಾಜಿಲ್ ಹತ್ಯೆಯು ಕೋಮು ದ್ವೇಷದಿಂದ ಪ್ರೇರಿತವಾಗಿದೆ ಎಂದು ಹೇಳಲಾಗಿದ್ದು, ಶೆಟ್ಟಿಯನ್ನು ಈ ಪ್ರಕರಣದಲ್ಲಿ ಶಂಕಿತನನ್ನಾಗಿ ಪರಿಗಣಿಸಲಾಗಿದೆ.

ಇನ್ಮುಂದೆ ಶಾಲೆಗಳಲ್ಲಿ ಟ್ರಾಫಿಕ್ ಪಾಠ!

ಸಮಾಲೋಚನೆ ನಡೆಸಿಲ್ಲ. ಯಾವುದೇ ಮೀಟಿಂಗ್ ಕರೆದಿಲ್ಲ. ಹೀಗಿರುವಾಗ ಹೆಚ್ಚುವರಿ ಸಂಚಾರ ಸುರಕ್ಷತೆ ಕುರಿತು ಪಠ್ಯ ಕುರಿತು ಪೋಷಕರು ಒಪ್ಪುತ್ತಾರಾ ಎಂಬ ಪ್ರಶ್ನೆ ಎದುರಾಗಿದೆ.

ಟ್ರಾಫಿಕ್ ಪೊಲೀಸರಿಂದ ಸಿದ್ಧಪಡಿಸಿ ರುವ ಪಠ್ಯ ಕ್ರಮ: 2025–26ನೇ ಸಾಲಿನ ಪಠ್ಯ ಕ್ರಮದಲ್ಲಿ ಟ್ರಾಫಿಕ್ ಲೈಟ್, ಸಂಚಾರ, ವೈಯುಕ್ತಿಕ ಸುರಕ್ಷತೆ, ರಸ್ತೆ ಸುರಕ್ಷತೆ, ಸಡಕ್ ಕೀ ರಕ್ಷಾ ಸಬ್ ಕೀ ಸುರಕ್ಷ ಪಠ್ಯಗಳನ್ನು ಅಳವಡಿಸಲಾಗಿದೆ. ಪಠ್ಯಪುಸ್ತಕ ರಚನೆ ಅಥವಾ ಪರಿಷ್ಕರಣೆ ಸಮಯದಲ್ಲಿ ಸಮಿತಿ ಅಧ್ಯಕ್ಷರ ಗಮನಕ್ಕೆ ತಂದು ಮುಂದಿನ ಕ್ರಮ ವಹಿಸಲಾಗುವುದು ಎಂದು ಕರ್ನಾಟಕ ಪಠ್ಯ ಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಳುಗಿಸಿ ಮಗಳ ಕೊಂದ ತಾಯಿ

ಆದರೂ ಗಂಡ–ಹೆಂಡತಿ ನಡುವೆ ಒಮ್ಮತ ಮೂಡಿರಲಿಲ್ಲ. ಹಲವು ವರ್ಷಗಳಿಂದ ನೆಲಮಂಗಲದಲ್ಲಿ ರಘು ಕೆಲಸ ಮಾಡುತ್ತಿದ್ದರು. ಶನಿವಾರ ಬೆಂಗಳೂರಿನ ನೆಲಮಂಗಲದಿಂದ ಮಗಳು ಸಾನ್ವಿಯನ್ನು ಕರೆದುಕೊಂಡು ಶ್ವೇತಾ ತವರು ಮನೆಗೆ ಬಂದಿದ್ದರು. ಮನೆ ಕೀ ಇಲ್ಲದ ಕಾರಣ ಪಕ್ಕದ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ ಒಂಬತ್ತು ಗಂಟೆ ಸಮಯದಲ್ಲಿ ಜಮೀನು ಕಡೆಗೆ ಹೋಗುತ್ತೇನೆಂದು ಪುತ್ರಿಯನ್ನು ಕರೆದುಕೊಂಡು ಹೋಗಿದ್ದರು. ತಮ್ಮ ಜಮೀನಿನ ಪಕ್ಕದಲ್ಲಿದ್ದ ಕಟ್ಟೆಯಲ್ಲಿ ಮಗಳನ್ನು ಮುಳುಗಿಸಿದ್ದಾರೆ. ಮಗು ಕಿರುಚಾಡುತ್ತಿದ್ದನ್ನು ಕೇಳಿ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರು ಓಡಿಬಂದಿದ್ದಾರೆ. ಕೂಡಲೇ ವರಸೆ ಬದಲಿಸಿ ನಾನು ಮಗು ಇಬ್ಬರೂ ಸಾಯಲು ಪ್ರಯತ್ನಿಸಿದ್ದೆವು ಎಂದು ಗ್ರಾಮಸ್ಥರಿಗೆ ಶ್ವೇತಾ ಹೇಳಿಕೊಂಡಿದ್ದಾರೆ. ತಕ್ಷಣವೇ ಬಾಲಕಿಯನ್ನು ಎತ್ತಿಕೊಂಡು ಗ್ರಾಮಸ್ಥರು ಆಸ್ಪತ್ರೆಗೆ ಕರೆತಂದಿದ್ದಾರೆ. ಅಷ್ಟರಲ್ಲಿ ಬಾಲಕಿ ಸಾವನ್ನಪ್ಪಿದ್ದಾಳೆ. ಸ್ಥಳಕ್ಕೆ ಹಿರಿಸಾವೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

'ಆರ್‌ಸಿಬಿ ಅಂಬಾಸಿಡರ್'ಗಳಂತೆ ವರ್ತನೆ!

3.15ಕ್ಕೆ ಸಂಭವಿಸಿತು. ವಿಜಯೋತ್ಸವ ಕಾರ್ಯಕ್ರಮವು ಸಂಜೆ 4.30–5ಕ್ಕೆ ಪ್ರಾರಂಭವಾಯಿತು. ಅಷ್ಟೊತ್ತಿಗಾಗಲೇ ಏಳರಿಂದ ಎಂಟು ಸಾವುಗಳು ಸಂಭವಿಸಿದ್ದವು. ನಂತರ ಉಪ ಮುಖ್ಯಮಂತ್ರಿ ಮತ್ತೊಂದು ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರೀಡಾಂಗಣಕ್ಕೆ ಹೋದರು. ಅಲ್ಲಿ ಸಂಜೆ 6.30–7ರ ಸುಮಾರಿಗೆ 1 ಕೋಟಿ ರೂ. ಮೌಲ್ಯದ ಪಟಾಕಿಗಳನ್ನು ಸಿಡಿಸಲಾಯಿತು. 11 ಸಾವುಗಳ ನಂತರ ಪಟಾಕಿಗಳನ್ನು ಸಿಡಿಸಲಾಯಿತು, ನಿಮಗೆ ಮಾನವೀಯತೆ ಇದೆಯೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ಸಾವಿನ ಬಗ್ಗೆ ಮಾಹಿತಿ ನೀಡಲು ವಿಫಲವಾದ ಕಾರಣ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ ಎಂದಿರುವ ಸರ್ಕಾರದ ಹೇಳಿಕೆಗೆ ಪ್ರತಿಕ್ರಿಯಿಸಿದ ಅಶೋಕ, ಸುದ್ದಿ ವಾಹಿನಿಗಳು ಘಟನೆ ಮತ್ತು ಸಾವುಗಳ ಕುರಿತು ಲೈವ್ ಅಪ್ಡೇಟ್‌ಗಳನ್ನು ನೀಡುತ್ತಿದ್ದವು, ಮಾಹಿತಿ ಮೊಬೈಲ್ ಫೋನ್‌ಗಳಲ್ಲಿ ಲಭ್ಯವಿತ್ತು. ನಿಮ್ಮ ಪಿಎಗಳು ಅಥವಾ ಕಾರ್ಯದರ್ಶಿಗಳು ಅಥವಾ ಅಧಿಕಾರಿಗಳು ಏನು ಮಾಡುತ್ತಿದ್ದರು. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ನೇರ ಹೊಣೆ ಗಾರರನ್ನಾಗಿ ಮಾಡಿ, ಸಚಿವರು, ಮುಖ್ಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು ಸೇರಿದಂತೆ ಇಡೀ ಸರ್ಕಾರವೇ ತೊಲಗಬೇಕು ಎಂದು ಹೇಳಿದರು. ಈ ಸಾವುಗಳು ಈ ಸರ್ಕಾರದ ಆರನೇ ಖಾತರಿಯಾಗಿದೆ. ಸರ್ಕಾರವನ್ನು ವಜಾಗೊಳಿಸುವಂತೆ ಒತ್ತಾಯಿಸಿ ನಾವು ಶೀಘ್ರದಲ್ಲೇ ರಾಜ್ಯಪಾಲರನ್ನು ಭೇಟಿ ಮಾಡಲು ಯೋಜಿಸಿದ್ದೇವೆ ಎಂದು ಅವರು ಹೇಳಿದರು.

ಹರಿಜನ್ ಪ್ರಕಾಶ್ ಯಮ್ನಪ್ಪಗೆ ಪಿಎಚ್.ಡಿ ಪದವಿ

ಮೈಸೂರು: ಡಾ. ಎಂ. ವಾಸಂತಿ ಅವರ ಮಾರ್ಗದರ್ಶನದಲ್ಲಿ ಹರಿಜನ್ ಪ್ರಕಾಶ್ ಯಮ್ನಪ್ಪ ಹಿಂದಿ ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರು ಮಿತ್ರ

ಕೌಶಲ್ಯಾಧಾರಿತ ಶಿಕ್ಷಣ ಪಡೆದರೆ ಉದ್ಯೋಗ ನಿಶ್ಚಿತ

- ಸಿಕ್ಕ ಕೆಲಸದಲ್ಲಿ ತೃಪ್ತಿ ಹೊಂದಿ, ಅನುಭವ ಪಡೆಯಿರಿ
- ಯಾವ ಕೆಲಸದ ಬಗ್ಗೆಯೂ ಕೀಳರಿಮೆ ಬೇಡ
- ಸ್ವಯಂ ಉದ್ಯೋಗದಿಂದ ನೂರಾರು ಜನರಿಗೆ ಕೆಲಸ ನೀಡಿ
- ಮೊಬೈಲ್ ಬಿಟ್ಟು ಪುಸ್ತಕ ಹಿಡಿದರೆ ಸಾಧನೆ ಸಾಧ್ಯ

ಶಾಸಕ ಕೆ.ಹರೀಶ್ ಗೌಡ ವಿಶ್ವಾಸದ ನುಡಿ

ಮೈಸೂರು, ಜೂ.8(ಎಂಟಿವೈ)– ಪ್ರಸ್ತುತ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ತಕ್ಷಣ ಕೆಲಸ ಸಿಗುವುದಿಲ್ಲ. ಜೊತೆಗೆ ಕೌಶಲ್ಯಾಧಾರಿತ ಶಿಕ್ಷಣ ಪಡೆಯಬೇಕು. ಇದರಿಂದ ಉದ್ಯೋಗ ನಿಶ್ಚಿತವಾಗಿ ಸಿಗುತ್ತದೆ ಎಂದು ಶಾಸಕ ಕೆ.ಹರೀಶ್ ಗೌಡ, ಯುವ ಸಮೂಹಕ್ಕೆ ಕಿವಿಮಾತು ಹೇಳಿದರು.

ನಗರದ ಗೋಕುಲಂ 3 ನೇ ಹಂತದ ವಿವೇಕಾನಂದಹಾಲ್‌ನಲ್ಲಿ ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್ ನ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ ಒಂದು ಲಕ್ಷಕ್ಕೂ ಹೆಚ್ಚು ಯುವಕರು ಪದವಿ, ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಆದರೆ ಇವರೆಲ್ಲರಿಗೂ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ದೊರೆಯುತ್ತಿಲ್ಲ ಎಂದರು.

ಈ ಮೊದಲು ಬಲವಂತವಾಗಿ ಕರೆದು ಸರ್ಕಾರಿ ಕೆಲಸ ಕೊಡಲಾಗುತ್ತಿತ್ತು ಆದರೆ, ಈಗ ಕೆಲಸ ಕೊಡುತ್ತೇವೆ ಅಂದ್ರೂ ಯಾರು ಕರೆಯುವುದಿಲ್ಲ, ಎಷ್ಟೇ ಒತ್ತಡ ಹಾಕಿದರೂ ಸರ್ಕಾರಿ ಕೆಲಸ ಸಿಗುವ ಪರಿಸ್ಥಿತಿ ಇಲ್ಲ. ಖಾಸಗಿ ಕೆಲಸ ಕೂಡ ಇದಕ್ಕಿಂತ ಹೊರತಾಗಿಲ್ಲ ಈ ಹಿನ್ನೆಲೆಯಲ್ಲಿ ಕೌಶಲ್ಯಾಧಾರಿತ ಶಿಕ್ಷಣ ಪಡೆದು ಕೆಲಸ ಗಿಟ್ಟಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಹರೀಶ್‌ಗೌಡ ಸಲಹೆ ನೀಡಿದರು.

ಕೆಲಸಕ್ಕಾಗಿ ಚಾತಕ ಪಕ್ಷಿಯಂತೆ ಕಾಯುವ ಬದಲು, ಸ್ವಯಂ ಉದ್ಯೋಗ ಮಾಡುವಂತೆ ಉತ್ತೇಜಿಸಿದರೂ ಆಸಕ್ತಿ ತೋರುವುದಿಲ್ಲ. ಲಾಭದಾಯಕ ಬಿಸಿನೆಸ್ ಮಾಡಿದ ನಾವೇ ನೂರಾರು ಜನರಿಗೆ ಉದ್ಯೋಗ ನೀಡಬಹುದು ಎಂದು ಮನವೊಲಿಸಿದರೂ ಕೇಳುವ ಮನಸ್ಥಿತಿಯಲ್ಲಿರುವುದಿಲ್ಲ ನಮಗೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಉದ್ಯೋಗವೇ ಬೇಕೆಂದು ಪಟ್ಟು ಹಿಡಿದು ವರ್ಷಗಳು ಕಾಯುತ್ತಾರೆ ಎಂದು ಹರೀಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಇದೇ ರೀತಿ ಉನ್ನತ ಶಿಕ್ಷಣದಲ್ಲೂ ಹೆಚ್ಚು ಅಂಕಗಳಿಸಿ ಸಾಧನೆ ಮಾಡುವಂತೆ ಉತ್ತೇಜಿಸುವುದು ಇದರ ಉದ್ದೇಶ. ತಂದೆ–ತಾಯಿಯ ಒತ್ತಡದಿಂದ ಓದಬಾರದು. ನಮ್ಮ ವಿದ್ಯಾರ್ಹತೆಯಲ್ಲಿ ಇಷ್ಟವಾದ ಇರಬೇಕು ಎಂದು.

ಇಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಬೇಕಿದೆ. ಮೈಸೂರಿನ ಜನರು ಇಂದು ಸಂತೃಪ್ತಿಯಿಂದ ಜೀವನ ಮಾಡಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೇ ಕಾರಣ. ಅವರ ಅಭಿವೃದ್ಧಿ ಬಗ್ಗೆ ವಿವರಿಸುತ್ತಾ ಹೋದರೆ ಒಂದು ದಿನವಾದರೂ ಸಾಲದು ಎಂದು ಹೇಳಿದರು.

ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್‌ನಿಂದ ಸಮಾಜಕ್ಕೆ ಹೆಚ್ಚು ಅನುಕೂಲ ಆಗಬೇಕು. ಮುಂದಿನ ಪೀಳಿಗೆಗೆ ಪ್ರಯೋಜನಕಾರಿಯಾದ ಬಹುಪಯೋಗಿ ಕಾರ್ಯ ರೂಪಿಸಬೇಕು ಎಂದು ಹರೀಶ್ ಗೌಡ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಟ್ರಸ್ಟ್ ಅಧ್ಯಕ್ಷರಾದ ಬಿ.ಎಸ್.ಶ್ರೀಧರ ರಾಜೆ ಅರಸ್ ಅವರು, ಉದ್ಯಮಿ ಜಗನಾಥ್ ಶಣೈ ಅವರು, ಕೊಡುಗೈ ದಾನಿಯಾಗಿದ್ದಾರೆ. ಬಿಜಿನೆಸ್‌ನಲ್ಲಿ ಆದಾಯ ಗಳಿಸುವ ಎಲ್ಲರೂ ಇವರಂತೆ ಸಮಾಜ ಸೇವಾ ಕಾರ್ಯ ಮಾಡಲಿ. ಇವರಂತೆ ಉದಾರತೆ ಎಲ್ಲರಲ್ಲೂ ಇರಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಶ್ರೀಧರರಾಜ ಅರಸ್ ಹಾಗೂ ಜಗನಾಥ ಶೆಣೈ ಅವರ ಜೊತೆ ಜೊತೆಯಾಗಿ ಸಮಾಜ ಸೇವಾ ಕಾರ್ಯ ಮಾಡುತ್ತಿದ್ದಾರೆ. ಈ ಇಳಿ ವಯಸ್ಸಿನಲ್ಲಿ ಉತ್ಸಾಹದಿಂದ ಕೆಲಸ ಮಾಡುವ ಇವರು ಪ್ರಯೋಜನಕ್ಕೂ ಮಾದರಿ ಎಂದು ಹೇಳಿದರು. ಈ ವೇಳೆ ವಿವಿಧ ತರಗತಿಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಟ್ರಸ್ಟ್‌ನ ಗೌರವಾಧ್ಯಕ್ಷ ಎಂ.ಎಲ್.ಬಸವರಾಜೇ ಅರಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅರಸು ಸಂಘದ ಅಧ್ಯಕ್ಷ ಹೆಚ್ ಎಂಟಿ ಲಿಂಗ ರಾಜೇ ಅರಸ್ ಗಣ್ಯರನ್ನು ಸ್ವಾಗತಿಸಿದರು.



ಮೈಸೂರಿನ ಗೋಕುಲಂ 3 ನೇ ಹಂತದ ವಿವೇಕಾನಂದ ಹಾಲ್‌ನಲ್ಲಿ ಭಾನುವಾರ ನಡೆದ ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್ ನ ನೂತನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಜೂ.22ರಂದು ಹೆಚ್.ಕೆ.ರಾಮು ಸೇರಿ ಮೂವರಿಗೆ 'ಜೀವನ್ಮುಖಿ ಪ್ರಶಸ್ತಿ' ಪ್ರದಾನ



ಶಿವರಾಜ ಪಾಟೀಲ

ಮೈಸೂರು, ಜೂ.8–ಬೆಂಗಳೂರಿನ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಮತ್ತು ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆಯ ವತಿಯಿಂದ ಜೂ.22ರಂದು ಸಂಜೆ 4 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಜೀವನ್ಮುಖಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಜಸ್ಟೀಸ್ ಶಿವರಾಜ ವಿ. ಪಾಟೀಲ, ಧಾರ್ಮಿಕ ದತ್ತಿ, ಮುಜರಾಯಿ ಇಲಾಖೆಯ ಆಯುಕ್ತ ಡಾ. ಎಂ.ವಿ.ವೆಂಕಟೇಶ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಮೈಸೂರಿನ ಹೆಚ್.ಕೆ.ರಾಮು, ಉದ್ಯಮಿ ಎಸ್.ರಾಜೇಂದ್ರ ಅವರುಗಳಿಗೆ ಜೀವನ್ಮುಖಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಚಾರ ಜಂಟಿ ಪೊಲೀಸ್ ಆಯುಕ್ತ ಅನುಚೇತ್ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು. ಲೇಖಕರು ಹಾಗೂ ಕರ್ನಾಟಕ ಜಾನಪದ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಟಿ.ತಿಮ್ಮೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಆಧುನಿಕ ಮೈಸೂರು ನಿರ್ಮಾತೃ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜಯಂತಿ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಮಾಜಿ ಶಾಸಕ ಎಂ ಕೆ ಸೋಮಶೇಖರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಕಾಂಗ್ರೆಸ್ ಮುಖಂಡರಾದ ಅಶೋಕಪುರಂ ಮಂಜು, ನಾಗಮಹದೇವ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಬಿಸಿಎಂ ಹಾಸ್ಟೆಲ್‌ಗಳು ವಿದ್ಯಾರ್ಥಿಗಳಿಗೆ ದಾರಿ ದೀಪವಿದ್ದಂತೆ

ಮಂಡ್ಯ ಡಿಸಿ ಡಾ. ಕುಮಾರ್ ಅಭಿಮತ



ಮೈಸೂರಿನ ಕುವೆಂಪುನಗರದಲ್ಲಿರುವ ಬಿಸಿಎಂ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ನಡೆದ ವಿಶ್ವಪರಿಸರ ದಿನಾಚರಣೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಪುರಸ್ಕಾರ ವಿತರಿಸಿದರು.

ಮೈಸೂರು, ಜೂ.8(ಎಂಟಿವೈ)– ಗ್ರಾಮೀಣ ಹಾಗೂ ಬಡ ಕುಟುಂಬದ ಸಾವಿರಾರು ವಿದ್ಯಾರ್ಥಿಗಳಿಗೆ ಸಾಧನೆ ಮಾಡಲು ಬಿಸಿಎಂ ವಿದ್ಯಾರ್ಥಿನಿಲಯಗಳು ದಾರಿ ದೀಪದಂತೆ ಕಾರ್ಯನಿರ್ವಹಿಸುತ್ತಿದ್ದು, ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳು ಸಾಧನೆ ಮಾಡುವ ಗುರಿಯೊಂದಿಗೆ ಅಭ್ಯಾಸ ನಿರತರಾಗಬೇಕು ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಬಿಸಿಎಂ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ವಿಶ್ವಪರಿಸರ ದಿನಾಚರಣೆ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ನನ್ನ ಶಿಕ್ಷಣವನ್ನು ಬಿಸಿಎಂ ಹಾಸ್ಟೆಲ್‌ನಲ್ಲಿಯೇ ಪೂರ್ಣಗೊಳಿಸಿದ್ದೇನೆ. ಇಂದು ಜಿಲ್ಲಾಧಿಕಾರಿಯಾಗಿದ್ದೇನೆ. ಬಿಸಿಎಂ ಹಾಸ್ಟೆಲ್ ನನ್ನ ಬದುಕಿಗೆ ದೇವಾಲಯವಿದ್ದಂತೆ. ನಾವೆಲ್ಲಾ ಈ ಮಟ್ಟಕ್ಕೆ ಬೆಳೆಯಲು ಡಿ.ದೇವರಾಜ ಅರಸು ಕಾರಣರಾಗಿದ್ದಾರೆ. ಸರ್ಕಾರ ನಿಮಗೆ ಎಲ್ಲಾ ಸವಲತ್ತುಗಳನ್ನು ನೀಡಿದೆ. ಈ ಸವಲತ್ತುಗಳನ್ನು ಸದುಪಯೋಗ ಮಾಡಿಕೊಂಡು ಚೆನ್ನಾಗಿ ಓದಿಕೊಂಡು ಸಾಧನೆ ಮಾಡುವ ಮೂಲಕ ನಿಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಬೇಕು. ವಿದ್ಯಾರ್ಥಿನಿಲಯಕ್ಕೆ ಒಳ್ಳೆಯ ಹೆಸರನ್ನು ತರಬೇಕು. ಬಿಸಿಎಂ ಹಾಸ್ಟೆಲ್‌ನ ಅನ್ನದ ಋಣವನ್ನು ಸಾಯೋವರೆಗೂ ತೀರಿಸಲು ಸಾಧ್ಯವಿಲ್ಲ. ವಾರ್ಡನ್ ಮತ್ತು ಅಡುಗೆಯವರನ್ನು ಪ್ರೀತಿಯಿಂದ ಕಾಣಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ಹಾಲು ಮಹಾಮಂಡಳಿ ವ್ಯವಸ್ಥಾಪಕ ನಿರ್ದೇಶಕ, ಹಾಗೂ ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಆದ ಬಿ.ಶಿವಸ್ವಾಮಿ ಮಾತನಾಡಿದರು.

ಎಲೆಕ್ಟ್ರಿಕಲ್ ವಾಹನ ಕೊಡುಗೆ: ರಸ್ತೆ ಅಪಘಾತದಿಂದಾಗಿ ಬೆನ್ನುಹುರಿಗೆ ಪೆಟ್ಟಾಗಿ ಸ್ವಾದೀನ ಕಳೆದುಕೊಂಡಿರುವ ಬಿಸಿಎಂ ಹಾಸ್ಟೆಲ್‌ನ ಹಿರಿಯ ವಿದ್ಯಾರ್ಥಿಯಾದ ದಡದಹಳ್ಳಿಯ ರವಿ ಎಂಬುವರಿಗೆ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ 1.25 ಲಕ್ಷ ರೂ. ವೆಚ್ಚದ ಎಲೆಕ್ಟ್ರಿಕಲ್ ಮೋಟಾರ್ ಸೈಕಲ್ ಅನ್ನು ಕೊಡುಗೆಯಾಗಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ, ಹುಣಸೂರು ತಹಶೀಲ್ದಾರ್ ಮಂಜುನಾಥ್, ಬಿಸಿಎಂ ಜಿಲ್ಲಾ ಅಧಿಕಾರಿ ರಾಘವೇಂದ್ರ ಕೆಎಎಸ್ ಹಿರಿಯ ಅಧಿಕಾರಿ ಚೈತ್ರ ಶಿವಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್, ಕಾರ್ಯದರ್ಶಿ ಬಿ.ಪಿ. ರಾಜೇಶ್, ಜಂಟಿ ಕಾರ್ಯದರ್ಶಿ ರಮೇಶ್ ಗೌಡ, ಖಜಾಂಚಿ ಕೆ. ರುಕ್ಮಾಂಗದ, ಮುಖಂಡರಾದ ಅಹಿಂದ ಜವರಪ್ಪ, ಎಂ.ಟಿ.ರವಿ ಕುಮಾರ್, ತಾಲೂಕು ಕಲ್ಯಾಣಾಧಿಕಾರಿ ಚಂದ್ರಕಲಾ, ಡಾ. ಜಗದೀಶ್, ಡಾ.ರವಿಕುಮಾರ್, ನಂದೀಶ, ಚೌಡೇಗೌಡ, ಮದುಸೂದನ್, ತಮ್ಮಯ್ಯ ಹಾಗೂ ನಿಲಯಪಾಲಕರು ಉಪಸ್ಥಿತರಿದ್ದರು.

ವಿದೇಶದಲ್ಲಿರುವ ಮಕ್ಕಳೊಡನೆ ಸೇರಿದರೆ ಜೈಲಿನ ಬಂಧಿಯಾಗುತ್ತೀರಾ!

ಇಂದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಪೈಪೋಟಿ ಇರುವ ಕಾರಣ ಯುವಕರು ಇಂತಹ ಹುದ್ದೆಯೇ ಬೇಕೆಂದು ಕಾಯುವ ಬದಲು ಸಿಕ್ಕುವ ಕೆಲಸದಲ್ಲಿ ತೃಪ್ತಿಪಟ್ಟುಕೊಳ್ಳಬೇಕು ಎಂದು ಉದ್ಯಮಿ ಡಾ.ಎಂ.ಜಗನಾಥ ಶೆಣೈ ಸಲಹೆ ನೀಡಿದರು.

ಯಾರೆ ಆಗಲೀ ಸದ್ಯಕ್ಕೆ ಸಿಗುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಇದರಿಂದ ಅನುಭವ ಸಿಗುತ್ತದೆ. ಮುಂದೆ ಇನ್ನು ಒಳ್ಳೆಯ ಕೆಲಸವನ್ನು ಗಿಟ್ಟಿಸಿಕೊಳ್ಳಬಹುದು. ಆದರೆ ಈ ಕೆಲಸ ನನಗೆ ಸರಿ ಹೊಂದುವುದಿಲ್ಲ ಎಂದು ಕೀಳರಿಮೆ ಬೇಡ ಎಂದು ಹೇಳಿದರು.

ಮೊಬೈಲ್ ನೋಡುವುದನ್ನು ಬಿಟ್ಟು ಪುಸ್ತಕಗಳನ್ನು ಓದುವ ಹವ್ಯಾಸ ಮೈಗೂಡಿಸಿಕೊಳ್ಳಬೇಕು. ಪುಸ್ತಕದ ಜ್ಞಾನಾರ್ಜನೆ ಒಳ್ಳೆಯ ಚಿಂತನೆ ರೂಢಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಮಕ್ಕಳಲ್ಲಿ ಸಂಸ್ಕಾರ ಇರಬೇಕು. ಯಾರನ್ನು ತುಚ್ಛವಾಗಿ ಕಾಣುವ ಮನಃಸ್ಥಿತಿ ಇರಬಾರದು. ಇಲ್ಲಿ ಓದಿ ವಿದೇಶಕ್ಕೆ ಹೋದಾಗ ಅಲ್ಲಿ ಒಳ್ಳೆಯ ಮನುಷ್ಯನಾಗಿ ಬದುಕಬೇಕು. ಎಲ್ಲೇ ಹೋಗಲಿ ಭಾರತೀಯನಾಗಿರಬೇಕು ಎಂಬ ಭಾವನೆ ಮೂಡಿಸಬೇಕು ಎಂದು ತಿಳಿಸಿದರು.

ನಮಗೆ ಸಿಗುವ ಆದಾಯದಲ್ಲಿ ಸ್ವಲ್ಪ ಪ್ರಮಾಣವನ್ನು ಸಮಾಜ ಸೇವಾ ಕಾರ್ಯಗಳಿಗೆ ಮೀಸಲಿಡಬೇಕು. ಇದರಿಂದ ದೇವರು ನಮಗೆ ನಾಲ್ಕು ಪಟ್ಟು ಆದಾಯ ಕೊಡುತ್ತಾನೆ. ಅಲ್ಲದೆ ಇದು ನಮ್ಮ ಮಕ್ಕಳ ಮನಸಿನ ಮೇಲೆ ಪರಿಣಾಮ ಬೀರಲಿದ್ದು, ಅವರು ಕೂಡ ಇದೇ ಹಾದಿಯಲ್ಲಿ ಸಾಗಲು ದಾರಿದೀಪವಾಗುತ್ತದೆ ಎಂದರು.

ಇಂದು ಬಹಳಷ್ಟು ಮಕ್ಕಳು ವಿದೇಶದಲ್ಲಿದ್ದರೆ ತಂದೆ–ತಾಯಿ ಭಾರತದಲ್ಲಿರುತ್ತಾರೆ. ನಿಮ್ಮಲ್ಲಿರುವ ಆಸ್ತಿ ಮಾರಾಟ ಮಾಡಿ ನಾವಿರುವ ಸ್ಥಳಕ್ಕೆ ಬನ್ನಿ ಎಂದು ಮಕ್ಕಳು ಒತ್ತಾಯ ಮಾಡುತ್ತಾರೆ. ಅವರ ಮಾತು ಕೇಳಿ ಆಸ್ತಿ ಮಾರಾಟ ಮಾಡಿ ಮಕ್ಕಳಿರುವ ಕಡೆ ಹೋದರೆ ನಿಮಗೆ ಜೈಲಿನಲ್ಲಿರುವ ಭಾವನೆ ಮೂಡುತ್ತದೆ. ಆದ ಕಾರಣ ತಂದೆ ತಾಯಿಗಳು ಈ ಕುರಿತಂತೆ ಸಾಧಕ–ಬಾಧಕಗಳ ಬಗ್ಗೆ ಚಿಂತನೆ ಮಾಡಬೇಕು ಎಂದು ಜಗನ್ನಾಥ ಶೆಣೈ ಸಲಹೆ ನೀಡಿದರು.

ಜೂ.11, ಖ್ಯಾತ ಸರೋದ್ ವಾದಕ ರಾಜೀವ್ ತಾರಾನಾಥ್ ಮೊದಲ ನೆನಪು



ಮೈಸೂರು, ಜೂ. 8–ಖ್ಯಾತ ಸರೋದ್ ವಾದಕರಾಗಿದ್ದ ಪಂ. ರಾಜೀವ ತಾರಾನಾಥರ ಮೊದಲ ನೆನಪಿನ ಕಾರ್ಯಕ್ರಮವನ್ನು ಜೂನ್ 11ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿದೆ.

ಗಣೇಶ ಅಮೀನಗಡ ಹಾಗೂ ರಘುಪತಿ ತಾಮ್ಹನ್‌ಕರ್ ಸಂಪಾದಿಸಿದ ಪಂ.ರಾಜೀವ ತಾರಾನಾಥರ ಕುರಿತ 'ಸರೋದ್ ಸ್ವರಯಾನ' ಕೃತಿಯ ಮೂರನೆಯ ಮುದ್ರಣವನ್ನು ಸಿತಾರ್ ವಾದಕಿ ಹಾಗೂ ಲೇಖಕಿ ಸಿ.ಎಸ್.ಸರ್ವಮಂಗಳಾ ಬಿಡುಗಡೆಗೊಳಿಸುವರು. ಹಿರಿಯ ರಂಗಕರ್ಮಿ ಕಪ್ಪಣ್ಣ ಅವರು ರಾಜೀವ ತಾರಾನಾಥರೊಂದಿಗಿನ ಒಡನಾಟದ ನೆನಪುಗಳನ್ನು ಹಂಚಿಕೊಳ್ಳುವರು. ಸಂಗೀತ ವಿವಿಯ ಕುಲಸಚಿವ (ಮೌಲ್ಯಮಾಪನ) ಪ್ರೊ.ಎಂ.ಜಿ.ಮಂಜುನಾಥ್ ಹಾಗೂ ಸಂಗೀತ ವಿವಿಯ ಹಣಕಾಸು ಅಧಿಕಾರಿಗಳು ಮತ್ತು ಪ್ರಭಾರ ಕುಲಸಚಿವರಾದ ರೇಖಾ ಉಪಸ್ಥಿತರಿರುವರು. ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಸಂಗೀತ ವಿವಿಯ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮವಿದೆ.

ನಾಲ್ವಡಿ ಜಯಂತ್ಯುತ್ಸವ



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ 141ನೇ ಜಯಂತ್ಯುತ್ಸವವನ್ನು ಸ್ನಾತಕ ಗ್ರಂಥಾಲಯದಲ್ಲಿ ಆಚರಿಸಲಾಯಿತು. ಗ್ರಂಥಪಾಲಕರಾದ ಡಾ.ಸೋಮಶೇಖರ, ಎಸ್.ಪ್ರಸಾದ್, ಕೆ.ಮಂಜುಳ, ಎಸ್.ಸೌಮ್ಯ, ಬಿ.ಮಂಜುನಾಥ, ರಾಜೇಶ್ವರಿ, ಕವಿತಾ ಹಾಗೂ ಸಿಬ್ಬಂದಿ ಹಾಜರಿದ್ದರು.

ಎಪಿಎಂಸಿಯಲ್ಲಿ ನಿಯಮಾವಳಿ ಧಿಕ್ಕರಿಸಿ ಅಧಿಸೂಚಿತವಲ್ಲದ ಪದಾರ್ಥಗಳ ಮಾರಾಟ; ಕರ್ನಾಟಕ ಸೇನಾ ಪಡೆ ಪ್ರತಿಭಟನಾ ಎಚ್ಚರಿಕೆ

ಮೈಸೂರು, ಜೂ.8– ಕೃಷಿ ಉತ್ಪನ್ನಗಳ ಕ್ರಯ–ವಿಕ್ರಯದ ನಿಯಂತ್ರಣಕ್ಕಾಗಿ ಸ್ಥಾಪಿತವಾಗಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಮಾರುಕಟ್ಟೆಯಲ್ಲಿ ಅಧಿಸೂಚಿತವಲ್ಲದ ಉತ್ಪನ್ನಗಳ ವ್ಯಾಪಾರವನ್ನು ವಾರದೊಳಗೆ ಸಂಪೂರ್ಣವಾಗಿ ನಿಷೇಧಿಸದಿದ್ದರೆ ಸಮಿತಿ ಕಚೇರಿ ಮುಂಭಾಗ ಧರಣಿ ನಡೆಸುವುದಾಗಿ ಕರ್ನಾಟಕ ಸೇನಾ ಪಡೆ ಎಚ್ಚರಿಕೆ ನೀಡಿದೆ.

ಈ ಸಂಬಂಧ ಸಂಘಟನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ನೇತೃತ್ವದಲ್ಲಿ ಎಪಿಎಂಸಿ ಕಾರ್ಯದರ್ಶಿಗೆ ಇಂದು ಮನವಿ ಸಲ್ಲಿಸಿ, ನಿಯಮ–ನಿಬಂಧನೆಗಳನ್ನು ಗಾಳಿಗೆ ತೂರಿ ನಡೆಸುತ್ತಿರುವ ನೀರು, ತಂಪು ಪಾನೀಯ, ಪ್ಲಾಸ್ಟಿಕ್ ಉತ್ಪನ್ನಗಳು, ಪನ್ಸಾರಿ ಉತ್ಪನ್ನಗಳು, ತಂಬಾಕು ಉತ್ಪನ್ನಗಳು, ಪೇಪರ್ ರೋಲ್, ಲೋಟ, ಪ್ಲೇಟ್ ಸೇರಿದಂತೆ ಅಧಿಸೂಚಿತವಲ್ಲದ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ನಿರ್ಬಂಧಿಸುವಂತೆ ಆಗ್ರಹಿಸಲಾಗಿದೆ.

ಮನವಿ ಪತ್ರದ ವಿವರ: ರೈತರು ಬೆಳೆದ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗಲಿ, ಅವರು ನೇರವಾಗಿ ಸಗಟು(ಹೋಲ್‌ಸೇಲ್) ವ್ಯಾಪಾರ ಮಾಡಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಮೈಸೂರಿನಲ್ಲಿ 1995–98ರ ಅವಧಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸ್ಥಾಪಿಸಲಾಯಿತು. ಹಳೇ ಸಂತೆಪೇಟೆಯಲ್ಲಿ ಆರ್‌ಎಂಸಿ ಲೈಸೆನ್ಸ್ ಹೊಂದಿದ್ದು, ಶುಲ್ಕ (ಸೆಸ್) ಪಾವತಿಸಿಕೊಂಡು ಬಂದಿರುವ ಸಗಟು ವ್ಯಾಪಾರಿಗಳಿಗೆ ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ವ್ಯಾಪಾರ–ವಹಿವಾಟು ನಡೆಸಲು ಖಾಲಿ ನಿವೇಶನಗಳನ್ನು ಕಲ್ಪಿಸಲಾಯಿತು. ಮಂಜೂರಾತಿ ವೇಳೆ ನಕ್ಷೆ ಅನ್ವಯವೇ ಕಟ್ಟಡ ನಿರ್ಮಿಸುವುದು ಸೇರಿದಂತೆ ಹಲವು ಷರತ್ತು ಹಾಗೂ ನಿಬಂಧನೆಗಳನ್ನು ವಿಧಿಸಲಾಗಿತ್ತು. ಆದರೆ ನಿಯಮ–ನಿಬಂಧನೆಗಳನ್ನು ಮೀರಿ ಮಳಿಗೆಗಳನ್ನು ನಿರ್ಮಿಸಿಕೊಂಡಿರುವುದಲ್ಲದೆ ಅಧಿಸೂಚಿತವಲ್ಲದ ವಸ್ತುಗಳ ವ್ಯಾಪಾರ–ವಹಿವಾಟಿಗೆ ನಿಯಮ ಬಾಹಿರವಾಗಿ ಬಾಡಿಗೆಗೆ ನೀಡಿರುವುದು ಕಂಡುಬಂದಿದೆ. ಈ ಅಕ್ರಮವನ್ನು ಎಪಿಎಂಸಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೂ ತಡೆಯುತ್ತಿಲ್ಲ. ಇದರಿಂದ ನಿತ್ಯ ಲಕ್ಷಾಂತರ ರೂ. ಸೆಸ್ ಪಾವತಿಯಾಗದೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ.



ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ನೇತೃತ್ವದಲ್ಲಿ ಎಪಿಎಂಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಎಪಿಎಂಸಿ ಲೈಸೆನ್ಸ್ ಹೊಂದಿರುವ ವ್ಯಾಪಾರಿಯು ಸತತ ಮೂರು ವರ್ಷ ವ್ಯಾಪಾರ ವಹಿವಾಟು ನಡೆಸದಿದ್ದರೆ, ಸೆಸ್ ಪಾವತಿಸದಿದ್ದರೆ, ಅಧಿಸೂಚಿತವಲ್ಲದ ವಸ್ತುಗಳ ಮಾರಾಟ ಮಾಡಿದರೆ ಲೈಸೆನ್ಸ್ ರದ್ದುಪಡಿಸಿ, ಮಳಿಗೆಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಸಮಿತಿಗೆ ಇದೆ ಎಂದು ಗುತ್ತಿಗೆ ಕರಾರು ಒಪ್ಪಂದ ಪತ್ರದಲ್ಲಿ ನಮೂದಿಸಲಾಗಿರುತ್ತದೆ. ನಿವೇಶನಗಳಲ್ಲಿ ಕಟ್ಟಡ ನಿರ್ಮಿಸುವಾಗ ಯಾವ ಕಾರಣಕ್ಕೂ ವಿಭಜಿಸಬಾರದು ಹಾಗೂ ಬೇರೆಯವರಿಗೆ ಬಾಡಿಗೆಗೆ ನೀಡಬಾರದು, ಒಂದಕ್ಕಿಂತ ಹೆಚ್ಚಿನ ವಿದ್ಯುತ್ ಮೀಟರ್ ಇರಬಾರದು ಎಂಬ ನಿಯಮವನ್ನೂ ವಿಧಿಸಲಾಗಿದೆ. ಆದರೆ ಈ ನಿಬಂಧನೆಗಳೆಲ್ಲವೂ ಕಾಗದಕ್ಕೆ ಸೀಮಿತವಾಗಿವೆ.


ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನಿರ್ಮಿಸಿರುವ ಎಪಿಎಂಸಿ ಮಾರುಕಟ್ಟೆಯಲ್ಲಿ ಸದ್ಯ ಸ್ಥಳೀಯ ರೈತರಿಗೆ ಅವಕಾಶ ಕಲ್ಪಿಸದೆ ಲಕ್ಷಾಂತರ ರೂ. ಲಂಚ ನೀಡುವ, ಜೇಷ್ಠತೆ ಹೊಂದಿರದ ವ್ಯಾಪಾರಿಗಳಿಗೆ ಮಣೆ ಹಾಕಲಾಗುತ್ತಿದೆ. ಕಾನೂನು ಬಾಹಿರವಾಗಿ ಎಪಿಎಂಸಿ ವ್ಯಾಪ್ತಿಗೆ ಒಳಪಡದ ದಿನಸಿ, ತಂಬಾಕು ಉತ್ಪನ್ನ, ಪ್ಲಾಸ್ಟಿಕ್, ಕಬ್ಬಿಣ, ತಂಪು ಪಾನೀಯ ಇನ್ನಿತರ ಎಪಿಎಂಸಿ ಕಾಯ್ದೆಯ ವ್ಯಾಪ್ತಿಗೆ ಒಳಪಡದ ವಸ್ತುಗಳ ವ್ಯಾಪಾರಿಗಳಿಗೆ ಅವಕಾಶ ನೀಡಲಾಗಿದೆ. ಪ್ರಭಾವಿ ರಾಜಕಾರಣಿಗಳ ಹಿಂಬಾಲಕರಿಗೆ ಶೇ.80ರಷ್ಟು ನಿವೇಶನಗಳು ಮಂಜೂರಾಗಿದ್ದು, ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ.

ಕಳೆದ ಮೇ 20ರಂದು ತಾವು ಪ್ರಕಟಣೆ ಮೂಲಕ, ಅಧಿಸೂಚಿತವಲ್ಲದ ಉತ್ಪನ್ನಗಳ ಮಾರಾಟವನ್ನು ಮಾರುಕಟ್ಟೆ ಪ್ರಾಂಗಣದಿಂದ ತೆರವುಗೊಳಿಸಲು ಸೂಚಿಸಿ, ಅದಕ್ಕೆ ಮೇ 31ರ ಗಡುವು ನೀಡಿದ್ದಿರಿ. ಆದರೆ ಈವರೆಗೂ ಅಧಿಸೂಚಿತವಲ್ಲದ ವಸ್ತುಗಳ ವ್ಯಾಪಾರ ನಿಲ್ಲಿಸಿಲ್ಲ. ಕಳೆದ ವರ್ಷವೂ ಈ ಸಂಬಂಧ ಆದೇಶಿಸಿ, ತಿಳುವಳಿಕೆ ಪತ್ರ ನೀಡಲಾಗಿತ್ತು. ಆದರೆ ಇನ್ನೊಂದು ವಾರದಲ್ಲಿ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದರೆ ಸಮಿತಿ ಕಚೇರಿ ಮುಂದೆ ಬೃಹತ್ ಧರಣಿ ನಡೆಸಲಾಗುವುದು ಎಂದು ಮನವಿ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

ದೇಶ – ವಿದೇಶ

ಭಾರತದಲ್ಲಿ 6,000 ದಾಟಿದ ಸಕ್ರಿಯ ಕೋವಿಡ್ ಸೋಂಕು ಕೇಸ್

ನವದೆಹಲಿ: ಭಾನುವಾರ ಬಿಡುಗಡೆಯಾದ ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ–ಅಂಶಗಳ ಪ್ರಕಾರ, ಕಳೆದ 48 ಗಂಟೆಗಳಲ್ಲಿ 769 ಹೊಸ ಕೋವಿಡ್ ಸೋಂಕುಗಳು ವರದಿಯಾಗಿವೆ. ಈ ಮೂಲಕ ಭಾರತದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 6,000 ದಾಟಿದೆ.



ಕೇರಳ ಹೆಚ್ಚು ಬಾಧಿತ ರಾಜ್ಯವಾಗಿ ಮುಂದುವರೆದಿದೆ, ನಂತರದ ಸ್ಥಾನಗಳಲ್ಲಿ ಗುಜರಾತ್, ಪಶ್ಚಿಮ ಬಂಗಾಳ ಮತ್ತು ದೆಹಲಿ ಇದೆ ಎಂದು ಸಚಿವಾಲಯ ತಿಳಿಸಿದೆ.

ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳಿಂದಾಗಿ, ಕೇಂದ್ರವು ಸೌಲಭ್ಯ ಮಟ್ಟದ ಸನ್ನದ್ಧತೆಯನ್ನು ಪರಿಶೀಲಿಸಲು ಅಣಕು ಅಭ್ಯಾಸಗಳನ್ನು ನಡೆಸುತ್ತಿದೆ ಮತ್ತು ಆಮ್ಲಜನಕ, ಐಸೋಲೇಷನ್ ಹಾಸಿಗೆಗಳು, ವೆಂಟಿಲೇಟರ್‌ಗಳು ಮತ್ತು ಅಗತ್ಯ ಔಷಧಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರಾಜ್ಯಗಳಿಗೆ ಸೂಚನೆ ನೀಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಭಾರತದಲ್ಲಿ 6,133 ಸಕ್ರಿಯ ಕೋವಿಡ್ ಪ್ರಕರಣಗಳಿವೆ ಮತ್ತು ಕಳೆದ 24 ಗಂಟೆಗಳಲ್ಲಿ ಇನ್ನೂ ಆರು ಸಾವುಗಳು ವರದಿಯಾಗಿವೆ ಎಂದು ಸಚಿವಾಲಯ ತಿಳಿಸಿದೆ.

ಮಣಿಪುರದಲ್ಲಿ ಮತ್ತೆ ಹಿಂಸಾಚಾರ; ಇಂಟರ್ನೆಟ್ ಸೇವೆ ಸ್ಥಗಿತ, ಹಲವೆಡೆ ಕರ್ಫ್ಯೂ

ಇಂಫಾಲ: ಮಣಿಪುರದಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದಿದೆ. ರಾತ್ರೋರಾತ್ರಿ ಎಲ್ಲಾ ಜಿಲ್ಲೆಗಳಲ್ಲಿ ಇಂಟರ್ನೆಟ್ ಸ್ಥಗಿತಗೊಳಿಸಲಾಗಿದ್ದು, ಹಲವೆಡೆ ಕರ್ಫ್ಯೂ ಜಾರಿ ಮಾಡಲಾಗಿದೆ. ಭದ್ರತಾ ಪಡೆಗಳು ಮಣಿಪುರದ ಇಂಫಾಲ್ ಪಶ್ಚಿಮದ ಕ್ವಾಕೆಟಾಲ್ ಪ್ರದೇಶದಲ್ಲಿ ಮೈತೆಯಿ ಸಂಘಟನೆಯ ನಾಯಕ ಅರಾಂಬೈ ಟೆಂಗೋಲ್ ಅವರನ್ನು ಬಂಧಿಸಿದ್ದು ಇದು ಅವರ ಬೆಂಬಲಿಗರನ್ನು ಕೆರಳಿಸಿದೆ. ಇದರ ಬೆನ್ನಲ್ಲೇ ಮಣಿಪುರದಲ್ಲಿ ಹಿಂಸಾಚಾರ ಭುಗಿಲೆದ್ದಿದೆ.



ಹಿಂಸಾಚಾರದ ಹಿನ್ನೆಲೆಯಲ್ಲಿ ಪೊಲೀಸರು ಹಲವು ಜಿಲ್ಲೆಗಳಲ್ಲಿ ಇಂಟರ್ನೆಟ್ ಮತ್ತು ಮೊಬೈಲ್ ಡೇಟಾ ಸೇವೆಗಳನ್ನು ಸ್ಥಗಿತಗೊಳಿಸಲಾಗಿದ್ದು, ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ತೌಬಲ್ ಮತ್ತು ಕಕ್ಚಿಂಗ್‌ನಂತಹ ಇತರ ಜಿಲ್ಲೆಗಳಲ್ಲಿಯೂ ಕರ್ಫ್ಯೂ ಜಾರಿ ಮಾಡಲಾಗಿದೆ, ಬಿಷ್ಣುಪುರ ಜಿಲ್ಲೆಯಲ್ಲೂ ಕರ್ಫ್ಯೂ ವಿಧಿಸಲಾಗಿದೆ.

ಪ್ರತಿಭಟನಾಕಾರರು ಮೈತೆಯಿ ಸ್ವಯಂಸೇವಕ ಗುಂಪು ಅರಾಂಬೈ ಟೆಂಗೋಲ್‌ಗೆ ಸೇರಿದವರಾಗಿದ್ದರು. ಇವರು ತಮ್ಮ ನಾಯಕನ ಬಿಡುಗಡೆಗೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದ್ದು, ರಸ್ತೆಗಳಲ್ಲಿ ಟೈರ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚುನಾವಣಾ ರ್‍ಯಾಲಿ ವೇಳೆ ಅಧ್ಯಕ್ಷೀಯ ಅಭ್ಯರ್ಥಿ ತಲೆಗೆ ಗುಂಡು ಹಾರಿಸಿದ ಅಪ್ರಾಪ್ತ

ದಕ್ಷಿಣ ಅಮೆರಿಕಾದ ದೇಶವಾದ ಕೊಲಂಬಿಯಾದಲ್ಲಿ ಚುನಾವಣಾ ಪ್ರಚಾರದ ಸಮಯದಲ್ಲಿ ಅಧ್ಯಕ್ಷೀಯ ಅಭ್ಯರ್ಥಿ ಮಿಗುಯೆಲ್ ಉರಿಬೆ ಮೇಲೆ ಗುಂಡು ಹಾರಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಉರಿಬೆ ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು ಮೊದಲ ಹಂತದ ಶಸ್ತ್ರಚಿಕಿತ್ಸೆ ಪೂರ್ಣಗೊಂಡಿದೆ. ಹೀಗಿದ್ದರೂ ಉರಿಬೆ ಜೀವನ್ಮರಣ ಹೋರಾಟ ನಡೆಸುತ್ತಿದ್ದು ಮುಂದಿನ ಕೆಲವು ಗಂಟೆಗಳು ಬಹಳ ನಿರ್ಣಾಯಕವಾಗಿವೆ.

ಶನಿವಾರ ಸಂಜೆ ಈ ಘಟನೆ ನಡೆದಿದೆ. ಸ್ಥಳೀಯ ಮಾಧ್ಯಮಗಳ ಪ್ರಕಾರ, ಉರಿಬೆಗೆ ಮೂರು ಬಾರಿ ಗುಂಡು ಹಾರಿಸಲಾಗಿದೆ ಅದರಲ್ಲಿ ಒಂದು ಅವರ ತಲೆಗೆ ಬಿದ್ದಿದೆ ಎಂದು ವರದಿಯಾಗಿದೆ. ಉರಿಬೆ ರಾಜಧಾನಿ ಬೊಗೋಟಾದಲ್ಲಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. 2026ರಲ್ಲಿ ಕೊಲಂಬಿಯಾದಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಲಿದೆ. ಮಿಗುಯೆಲ್ ಉರಿಬೆ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ಸ್ಪರ್ಧಿ ಎಂದು ಪರಿಗಣಿಸಲಾಗಿದೆ. 39 ವರ್ಷದ ಉರಿಬೆ ವಿರೋಧ ಪಕ್ಷದ ಸೆಂಟ್ರೊ ಡೆಮಾಕ್ರಟಿಕೊ ಕನ್ಸರ್ವೇಟಿವ್ ಪಕ್ಷದ ಸದಸ್ಯರಾಗಿದ್ದಾರೆ. ಭಾಷಣ ಮಾಡುತ್ತಿದ್ದಾಗ ದಾಳಿಕೋರ ಉರಿಬೆ ಅವರ ಹಿಂದಿನಿಂದ ಗುಂಡು ಹಾರಿಸಿದ್ದಾನೆ ಎಂದು ಪಕ್ಷ ಹೇಳಿಕೆ ನೀಡಿದೆ. ನಗರದ ಫಾಂಟಿಬನ್ ಪ್ರದೇಶದಲ್ಲಿ ದಾಳಿ ನಡೆದಿದೆ ಎಂದು ಬೊಗೋಟಾ ಮೇಯರ್ ಕಾರ್ಲೋಸ್ ಗ್ಯಾಲನ್ ಹೇಳಿದ್ದಾರೆ.

ಎಲೋನ್ ಮಸ್ಕ್ ಜೊತೆ ಮಾತುಕತೆ ಮುಗಿದ ಅಧ್ಯಾಯ: ಟ್ರಂಪ್



ಬ್ರಿಡ್ಜ್‌ವಾಟರ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಎಲೋನ್ ಮಸ್ಕ್ ನಡುವಿನ ಭಿನ್ನಮತ ಈಗಾಗಲೇ ಬಹಿರಂಗವಾಗಿದೆ. ನಿಮ್ಮ ಜೊತೆ ಸಂಬಂಧ ಸರಿಪಡಿಸುವ ಬಯಕೆಯನ್ನು ಹೊಂದಿಲ್ಲ. ಮುಂಬರುವ ಚುನಾವಣೆಗಳಲ್ಲಿ ಡೆಮೋಕ್ರಾಟ್‌ಗಳಿಗೆ ಸಹಾಯ ಮಾಡಲು ಪ್ರಯತ್ನಿಸಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಲೋನ್ ಮಸ್ಕ್‌ಗೆ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಎನ್‌ಬಿಸಿಯ ಕ್ರಿಸ್ಟನ್ ವೆಲ್ಕರ್‌ಗೆ ನೀಡಿದ ದೂರವಾಣಿ ಸಂದರ್ಶನದಲ್ಲಿ ಮಸ್ಕ್ ಅವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಯಾವುದೇ ಯೋಜನೆ ಇಲ್ಲ ಎಂದು ಹೇಳಿದ್ದಾರೆ. ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್‌ನ ಮೆಗಾ–ಬಿಲಿಯನೇರ್ ಸಿಇಒ ಆಗಿರುವ ಎಲೋನ್ ಮಸ್ಕ್ ಜೊತೆಗಿನ ಸಂಬಂಧ ಮುಗಿದ ಅಧ್ಯಾಯವೇ ಎಂದು ಕೇಳಿದಾಗ ಹೌದು, ನಾನು ಹಾಗೆಯೇ ಭಾವಿಸುತ್ತೇನೆ ಎಂದಿದ್ದಾರೆ.

ನಾನು ಬೇರೆ ಕೆಲಸಗಳಲ್ಲಿ ನಿರತನಾಗಿದ್ದೇನೆ. ನಿಮಗೆಲ್ಲಾ ತಿಳಿದಿರುವಂತೆ ನಾನು ಭಾರಿ ಬಹುಮತದಲ್ಲಿ ಚುನಾವಣೆಯನ್ನು ಗೆದ್ದಿದ್ದೇನೆ. ನನ್ನ ಆಡಳಿತದಲ್ಲಿ ನಾನು ಎಲೋನ್ ಮಸ್ಕ್ ಗೆ ಸಾಕಷ್ಟು ಸ್ವಾತಂತ್ರ್ಯ ನೀಡಿದ್ದೆ. ನನ್ನಿಂದಾಗಿ ಅವರ ಜೀವನ ಉಳಿದಿದೆ, ಇನ್ನು ಅವರ ಜೊತೆ ಮಾತನಾಡುವ ಯಾವುದೇ ಆಸೆಯಿಲ್ಲ ಎಂದಿದ್ದಾರೆ.

ಗಾಜಾದಲ್ಲಿ ಒಂದು ಪ್ಯಾಕ್ ಪಾರ್ಲೆ–ಜಿ 2 ಸಾವಿರ!

ಗಾಜಾ: ಭಾರತದಲ್ಲಿ ಎಲ್ಲರ ಕೈಗೆಟುಕುವಂತಿರುವ ಪಾರ್ಲೆ–ಜಿ ಬಿಸ್ಕತ್ ಸಂಘರ್ಷ ಪೀಡಿತ ಗಾಜಾದಲ್ಲಿ ಐಷಾರಾಮಿ ಆಹಾರವಾಗಿ ಮಾರ್ಪಟ್ಟಿದೆ. ತೀವ್ರ ಆಹಾರ ಕೊರತೆ ಎದುರಿಸುತ್ತಿರುವ ಗಾಜಾದಲ್ಲಿ ಒಂದು ಪ್ಯಾಕ್ ಬಿಸ್ಕತ್ 24 ಯುರೊಗೆ (ಸುಮಾರು 2,342) ಮಾರಾಟವಾಗುತ್ತಿದೆ. ಇದು ಭಾರತದಲ್ಲಿನ ಬೆಲೆಗಿಂತ 500 ಪಟ್ಟು ಹೆಚ್ಚು ಎಂದು ಟ್ರಿಬ್ಯೂನ್ ವೆಬ್‌ಸೈಟ್ ವರದಿ ತಿಳಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಮೊಹಮ್ಮದ್ ಜವಾದ್ ಎನ್ನುವ ವ್ಯಕ್ತಿ ಜೂನ್ 1 ರಂದು ವಿಡಿಯೊವೊಂದನ್ನು ಹಂಚಿಕೊಂಡು ಗಾಜಾದಲ್ಲಿ ಆಹಾರದ ಕೊರತೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಹೇಳಿದ್ದರು.



ಮೊಹಮ್ಮದ್ ಅವರು ಮಗಳು ಪಾರ್ಲೆ–ಜಿ ಬಿಸ್ಕತ್ತನ್ನು ಹಿಡಿದು ಖುಷಿಯಲ್ಲಿರುವ ವಿಡಿಯೊವನ್ನು ಹಂಚಿಕೊಂಡು ಹಲವು ದಿನಗಳ ಬಳಿಕ ನನ್ನ ಮಗಳು ರಫೀಫ್ ಅವಳ ಇಷ್ಟದ ಬಿಸ್ಕತ್ತನ್ನು ಪಡೆದಿದ್ದಾಳೆ. ಬಿಸ್ಕತ್ತಿನ ಬೆಲೆ 1.5 ಯುರೊದಿಂದ 24 ಯುರೊಗೆ ಏರಿಕೆಯಾದರೂ ಅವಳ ಬೇಡಿಕೆಯನ್ನು ನಿರಾಕರಿಸಲು ಮನಸ್ಸಾಗಲಿಲ್ಲ ಎಂದು ಬರೆದುಕೊಂಡಿದ್ದಾರೆ. ಈ ವಿಡಿಯೊ ಇಂಟರ್‌ನೆಟ್‌ನಲ್ಲಿ ಸಂಚಲನವನ್ನೇ ಸೃಷ್ಟಿಸಿದೆ.

ಮನೆ ನಿರ್ಮಿಸಿಕೊಟ್ಟು ಮಾತು ಉಳಿಸಿಕೊಂಡ ಶಾಸಕ ಮಂತರ್‌ಗೌಡ



ಮೀನಾ ಮತ್ತು ಕುಟುಂಬಸ್ಥರು ವಾಸವಿದ್ದ ಮುರುಕಲು ಮನೆ.



ನೂತನವಾಗಿ ನಿರ್ಮಿಸಿರುವ ಮನೆ.

ಮಡಿಕೇರಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದ ದಿನವೇ ಯುವಕನಿಂದ ಬರ್ಬರವಾಗಿ ಹತ್ಯೆಗೀಡಾಗಿದ್ದ ವಿದ್ಯಾರ್ಥಿನಿ ಮೀನಾಳ ಕುಟುಂಬಕ್ಕೆ ಶಾಸಕ ಡಾ.ಮಂತರ್‌ಗೌಡ ಮತ್ತವರ ಹಿತೈಷಿಗಳು ಮನೆ ನಿರ್ಮಿಸಿಕೊಟ್ಟು ಮಾನವೀಯತೆ ಮೆರೆದಿದ್ದಾರೆ.

ಸೋಮವಾರಪೇಟೆ ತಾಲೂಕಿನ ಕುಗ್ರಾಮ ಎಂದೇ ಕರೆಯಲ್ಪಡುವ ಕುಂಬಾರಗಡಿಗೆ ಗ್ರಾಮದಲ್ಲಿ ಸುಮಾರು 8 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮನೆಯನ್ನು ನಾಳೆ ಹಸ್ತಾಂತರ ಮಾಡಲಿದ್ದಾರೆ.

ಸಂಭ್ರಮದಲ್ಲಿ ಅಡಗಿತ್ತು ಸೂತಕ: ಫಲಿತಾಂಶ ಬಂದ ದಿನವೇ ವಿದ್ಯಾರ್ಥಿನಿ ಮೀನಾಳ ನಿಶ್ಚಿತಾರ್ಥ ಅದೇ ಗ್ರಾಮದ ಓಂಕಾರಪ್ಪ ಅಲಿಯಾಸ್ ಪ್ರಕಾಶ್ ಎಂಬಾತನೊಂದಿಗೆ ಸಂಭ್ರಮದಿಂದ ನಡೆದು ಮದುವೆಯ ದಿನಾಂಕವೂ ನಿರ್ಧಾರವಾಗಿತ್ತು. ಮೀನಾ ವಿದ್ಯಾಭ್ಯಾಸ ಮುಂದುವರಿಸುವ ಹಾಗೂ ಮದುವೆ ಮುಂದೂಡುವ ವಿಷಯ ತಿಳಿದ ಓಂಕಾರಪ್ಪ ಸಂಜೆ ವೇಳೆ ಮದ್ಯ ಸೇವಿಸಿ ಮೀನಾಳ ಮನೆಗೆ ಬಂದು ಕ್ಯಾತೆ ತೆಗೆದು ಮೀನಾಳನ್ನು ಮನೆಯಿಂದ ಹೊರಗೆ ಎಳೆದೊಯ್ದು ಕತ್ತಿಯಿಂದ ಕುತ್ತಿಗೆ ಕಡಿದು ಭೀಕರವಾಗಿ ಕೊಲೆ ಮಾಡಿ ರುಂಡವನ್ನೇ ಕೊಂಡೊಯ್ದಿದ್ದ.

ಈ ವಿಚಾರ ರಾಜ್ಯ ವ್ಯಾಪಿ ಸುದ್ದಿಯಾಗಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹಾಗೂ ಶಾಸಕ ಡಾ.ಮಂತರ್‌ಗೌಡ ಅವರು ಮೃತಪಟ್ಟ ಮೀನಾಳ ಮನೆಗೆ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದರು. ವಿದ್ಯುತ್ ಇಲ್ಲದ ಮುರುಕಲು ಮನೆಯಲ್ಲಿ ವಾಸ ಮಾಡುತ್ತಿದ್ದ ಮೀನಾಳ ಪೋಷಕರ ಸಂಕಷ್ಟಕ್ಕೆ ಮರುಗಿದ ಶಾಸಕ ಡಾ. ಮಂತರ್‌ಗೌಡ ಮತ್ತು ಅವರ ಹಿತೈಷಿಗಳು ಮನೆ ನಿರ್ಮಿಸಿಕೊಡುವ ಆಶ್ವಾಸನೆ ನೀಡಿದ್ದರು. ಇದೀಗ ಅವರ ಜಾಗದಲ್ಲೇ ಮನೆ ನಿರ್ಮಿಸಿಕೊಟ್ಟು ತಾವು ನೀಡಿದ್ದ ಭರವಸೆಯನ್ನು ಈಡೇರಿಸಿದ್ದಾರೆ.

ಮೀನಾ ಸೇರಿದಂತೆ ತಂದೆ ಯು.ಸುಬ್ರಮಣಿ, ತಾಯಿ ಜಾನಕಿ ಮತ್ತು ಸಹೋದರಿಯರು ಪ್ಲಾಸ್ಟಿಕ್ ಹೊದಿಕೆಯ ಮನೆಯಲ್ಲಿ ವಾಸ ಮಾಡುತ್ತಿದ್ದರು. ಮೃತ ವಿದ್ಯಾರ್ಥಿನಿ ಮೀನಾ 2 ಕಿ.ಮೀ ಕಾಡು ರಸ್ತೆಯಲ್ಲಿ ಪ್ರತಿನಿತ್ಯ ಕಾಲ್ನಡಿಗೆಯಲ್ಲಿ ಸೂರ್ಲಬ್ಬಿ ಸರ್ಕಾರಿ ಪ್ರೌಢಶಾಲೆಗೆ ತೆರಳಿ ವ್ಯಾಸಂಗ ಮಾಡುತ್ತಿದ್ದಳು. 2024ರ ಮೇ 9ರಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿ ಸೂರ್ಲಬ್ಬಿ ಸರ್ಕಾರಿ ಶಾಲೆಗೆ ಶೇ.100 ರಷ್ಟು ಫಲಿತಾಂಶ ಬಂದಿತ್ತು. ಶಾಲೆಯಲ್ಲಿ ಹಬ್ಬದ ವಾತಾವರಣವಿದ್ದು, ಇದೇ ಶಾಲೆಯಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿನಿ ಮೀನಾ ತೇರ್ಗಡೆ ಯಾಗಿದ್ದಳು. ಶಿಕ್ಷಕರೊಂದಿಗೆ ಸಂಭ್ರಮಿಸಿ ಸಂಜೆ ಮನೆಗೆ ಹೋಗಿ ತಮ್ಮ ಪೋಷಕರೊಂದಿಗೆ ವಿದ್ಯಾಭ್ಯಾಸ ಮುಂದುವರಿಸುವ ಇಂಗಿತವನ್ನೂ ವ್ಯಕ್ತಪಡಿಸಿಕೊಂಡಿದ್ದಳು.

ಭಾವಾನುವಾದದಿಂದ ಮಾತ್ರ ಸಾಹಿತ್ಯಕ್ಕೆ ಗಟ್ಟಿತನ

ಬೂಕರ್ ಪ್ರಶಸ್ತಿ ಪುರಸ್ಕೃತೆ ದೀಪಾಭಾಸ್ತಿ ಅಭಿಮತ



ಬೂಕರ್ ಪ್ರಶಸ್ತಿ ಪುರಸ್ಕೃತೆ ದೀಪಾಭಾಸ್ತಿ ಅವರನ್ನು ಪತ್ರಕರ್ತರ ಸಂಘದಿಂದ ಸನ್ಮಾನಿಸಲಾಯಿತು.

ಮಡಿಕೇರಿ, ಜೂ.8– ಪದಗಳ ತರ್ಜುಮೆಗಿಂತ ಭಾವನೆಗಳನ್ನು ದಾಖಲಿಸುವ ಭಾವಾನುವಾದ ಪ್ರಕಾರವು ಅನುವಾದ ಸಾಹಿತ್ಯದಲ್ಲಿ ಮಹತ್ವದ್ದಾಗಿರುತ್ತದೆ ಎಂದು ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತೆ ದೀಪಾಭಾಸ್ತಿ ಅಭಿಪ್ರಾಯಪಟ್ಟಿದ್ದಾರೆ.

ಪತ್ರಕರ್ತರ ಸಂಘದ ವತಿಯಿಂದ ನಗರದ ಖಾಸಗಿ ಸಭಾಂಗಣದಲ್ಲಿ ನಡೆದ ಅಭಿನಂದನಾ ಸಮಾರಂಭ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಾನು ಮುಷ್ತಾಕ್ ಅವರ 'ಹಸಿನಾ ಮತ್ತು ಇತರ ಕಥೆಗಳು' ಕೃತಿಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ ಬರೆದ ಕೃತಿ ಸಂಬಂಧ ಮಾಹಿತಿ ನೀಡಿದ ದೀಪಾಭಾಸ್ತಿ, ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದ ಮಾಡುವಾಗ ಖಂಡಿತವಾಗಿಯೂ ಪದಗಳನ್ನು ತರ್ಜುಮೆ ಮಾಡಬಾರದು. ಇದರ ಬದಲಿಗೆ ಮೂಲ ಕೃತಿಯಲ್ಲಿನ ಪದಗಳ ಭಾವವನ್ನು ಅರ್ಥೈಸಿಕೊಂಡು ತನ್ನದೇ ಶೈಲಿಯಲ್ಲಿ ಭಾವಾನುವಾದ ಮಾಡಿದರಷ್ಟೇ ಅನುವಾದ ಸಾಹಿತ್ಯಕ್ಕೆ ಗಟ್ಟಿತನ ದೊರಕುತ್ತದೆ ಎಂದು ಅಭಿಪ್ರಾಯಪಟ್ಟರು. ಪಂಪ, ಕುವೆಂಪು ಸೇರಿದಂತೆ ಕನ್ನಡದ ಅನೇಕ ಸಾಹಿತಿಗಳ ಶ್ರೇಷ್ಠ ಕೃತಿಗಳು ಇನ್ನಾದರೂ ಇಂಗ್ಲೀಷ್‌ಗೆ ಅನುವಾದಗೊಂಡು ಜಾಗತಿಕವಾಗಿ ಓದುಗರನ್ನು ತಲುಪಬೇಕಾದ ಅಗತ್ಯವಿದೆ. ಪಕ್ಕದ ಕೇರಳದಲ್ಲಿ ಅನುವಾದಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ ಎಂದೂ ಅವರು ಅಭಿಪ್ರಾಯಪಟ್ಟರು.

ಡಾ. ಶಿವರಾಮ ಕಾರಂತರ 'ಅದೇ ಊರು–ಅದೇ ಮರ' ಕೃತಿ ಮತ್ತು ಕೊಡಗಿನ ಗೌರಮ್ಮ ಅವರ ಕಥೆಗಳನ್ನು ಇಂಗ್ಲೀಷ್‌ಗೆ ಅನುವಾದಿಸಿ ಅದು ಖ್ಯಾತಿ ಪಡೆಯುತ್ತಿದ್ದ ಸಂದರ್ಭದಲ್ಲೇ ಭಾನುಮುಷ್ತಾಕ್ ಸ್ನೇಹಿತೆಯ ಮೂಲಕ ನನ್ನನ್ನು ಸಂಪರ್ಕಿಸಿ ತನ್ನ ಕಥೆಗಳನ್ನು ಇಂಗ್ಲೀಷ್‌ಗೆ ಅನುವಾದಿಸುವಂತೆ ಕೋರಿದ್ದರು. ಹೀಗಾಗಿಯೇ ಅವರ ಎಲ್ಲಾ ಕಥಾಸಂಕಲನ ಓದಿ ತನಗೆ ಇಷ್ಟವಾದ 12 ಕಥೆಗಳನ್ನು ಆಯ್ದುಕೊಂಡು ಹಾರ್ಟ್ ಲ್ಯಾಂಪ್ ಕೃತಿಯಾಗಿಸಿದೆ ಎಂದು ದೀಪಾಭಾಸ್ತಿ ಹೇಳಿದರು. ಭಾನುಮುಷ್ತಾಕ್ ಅವರ ಕಥೆಗಳಲ್ಲಿ ಹೆಚ್ಚಾಗಿ ಮುಸ್ಲಿಮ್ ಸಮುದಾಯದ ಸಂಸ್ಕೃತಿ, ಆಚಾರಗಳ ಉಲ್ಲೇಖ ಇದ್ದುದರಿಂದಾಗಿ ಆ ಬಗ್ಗೆ ಕೂಲಂಕಶವಾಗಿ ಅಧ್ಯಯನ ಮಾಡಿಯೇ ಹಾರ್ಟ್ ಲ್ಯಾಂಪ್ ಕೃತಿಯಲ್ಲಿ ಮೂಲ ಕಥೆಗಳಲ್ಲಿನ ಸಂಸ್ಕೃತಿ, ಆಚಾರ ವಿಚಾರಕ್ಕೆ ಧಕ್ಕೆಯಾಗದಂತೆ ಅನುವಾದ ಮಾಡಬೇಕಾದ ಸವಾಲು ತನಗಿತ್ತು ಎಂದೂ ಅವರು ಹೇಳಿದರು.

ಬೂಕರ್ ಪ್ರಶಸ್ತಿ ದೊರಕುವ ನಿರೀಕ್ಷೆ ಖಂಡಿತಾ ಇರಲಿಲ್ಲ. ಪ್ರಕಾಶಕರ ಆಹ್ವಾನದ ಮೇರೆಗೆ ಲಂಡನ್‌ನಲ್ಲಿ ಪ್ರಶಸ್ತಿ ವಿತರಣಾ ಸಮಾರಂಭಕ್ಕೆ ತೆರಳಿದ್ದೆ. ಪ್ರಶಸ್ತಿ ಘೋಷಣೆಯಾದ ಕ್ಷಣ ಅಲ್ಲಿನ ಸಂಭ್ರಮದ ವಾತಾವರಣದಲ್ಲಿ ಗಲಿಬಿಲಿಗೊಳಗಾದೆ. ನಂತರ ಭಾಷಣದಲ್ಲಿ ಡಾ.ರಾಜ್‌ಕುಮಾರ್ ಅವರ ಜೇನಿನ ಹೊಳೆಯೋ ಹಾಡನ್ನು ಆ ಕ್ಷಣದಲ್ಲಿ ಮನಸ್ಸಿಗೆ ತೋಚಿದಂತೆ ಸಾಂದರ್ಭಿಕವಾಗಿ ಉಲ್ಲೇಖಿಸಿದೆ. ಆ ಹಾಡು ಮತ್ತು ಡಾ.ರಾಜ್ ಕನ್ನಡದ ಪ್ರತಿನಿಧಿತ್ವ ಎಂದೆನಿಸಿತ್ತು. ಹೀಗಾಗಿ ಅಲ್ಲಿ ಹೇಳಿದ ಹಾಡು ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯುವ ಮೂಲಕ ನನ್ನ ಉದ್ದೇಶ ಸಾರ್ಥಕವಾದಂತಾಯಿತು ಎಂದೂ ದೀಪಾ ಭಾಸ್ತಿ ಹೇಳಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ಹಸಿರ ಸಿರಿ ನಡುವೆ ತನ್ನ ಪಾಡಿಗೆ ತಾನು ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ದೀಪಾ ಅವರ ಶ್ರಮಕ್ಕೆ ಶ್ಲಾಘನೀಯ ಪ್ರತಿಫಲ ಬೂಕರ್ ಪ್ರಶಸ್ತಿ ಮೂಲಕ ದೊರಕಿದೆ. ಈ ಮೂಲಕ ಕೊಡಗು ಜಿಲ್ಲೆಯು ವಿಶ್ವಸಾಹಿತ್ಯ ಲೋಕದ ಬಾನಂಗಳದಲ್ಲಿ ರಾರಾಜಿಸುವಂತಾಗಿದೆ ಎಂದು ಹೇಳಿದರು.

ಪತ್ರಕರ್ತರ ಸಂಘದ ಪರವಾಗಿ ದೀಪಾಭಾಸ್ತಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಸಲಹೆಗಾರರಾದ ಟಿ.ಪಿ.ರಮೇಶ್, ಬಿ.ಜಿ. ಅನಂತಶಯನ, ನಿರ್ದೇಶಕರು, ಸದಸ್ಯರು ಹಾಜರಿದ್ದರು.

ದೈವಜ್ಞ ಸಮಾಜದ ನೂತನ ಸಭಾಭವನ ಲೋಕಾರ್ಪಣೆ



ದೈವಜ್ಞ ಸಮಾಜದ ನೂತನ ಸಭಾಭವನವನ್ನು ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾಸ್ವಾಮೀಜಿ ಲೋಕರ್ಪಣೆಗೊಳಿಸಿದರು.

ವಿರಾಜಪೇಟೆ, ಜೂ.8 ನಿಸರ್ಗ ಬಡಾವಣೆಯಲ್ಲಿರುವ ದೈವಜ್ಞ ಸಮಾಜದ ನೂತನ ಕಟ್ಟಡ ಸಭಾಭವನವನ್ನು ಶ್ರೀ ಕ್ಷೇತ್ರ ಕರ್ಕಿ ದೈವಜ್ಞ ಬ್ರಾಹ್ಮಣ ಜ್ಞಾನೇಶ್ವರಿ ಪೀಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಮುಖ್ಯ ರಸ್ತೆಯಿಂದ ಪೂರ್ಣಕುಂಬದೊಂದಿಗೆ ಸ್ವಾಮೀಜಿಯವರನ್ನು ನೂತನ ಮಂಟಪದವರೆಗೆ ಮೆರವಣಿಗೆ ನಡೆಸಲಾಯಿತು. ಸತ್ಯನಾರಾಯಣ ಪೂಜೆ ಪ್ರಸಾದ ವಿತರಣೆ ನಡೆಯಿತು. ತಾ,7 ರಂದು ಗಣಪತಿ ಹೋಮ, ಮತ್ತು ದೇವತಾ ಕಾರ್ಯ ನಡೆದಿತ್ತು.

ಈ ಸಂದರ್ಭ ದೈವಜ್ಞ ಸಮಾಜದ ಅಧ್ಯಕ್ಷ ಉಲ್ಲಾಸ್ ಸಿ.ಶೇಟ್, ಗೌರವ ಅಧ್ಯಕ್ಷರಾದ ಎಂ.ಜಿ.ಮೋಹನ್ ಶೇಟ್, ಎಂ.ವೆಂಕಟೇಶ್ ಶೇಟ್, ಎ.ವಿ. ವೆಂಕಟೇಶ್ ಶೇಟ್, ಎಂ.ಜಿ.ಕಾಂತರಾಜ ಉಲ್ಲಾಸ್ ಶೇಟ್, ಉಪಾಧ್ಯಕ್ಷ ಎಂ.ಜಿ.ನಾರಾಯಣ, ಕಾರ್ಯದರ್ಶಿ ಬಿ.ಎಸ್.ಬಾಲಕೃಷ್ಣ, ಖಜಾಂಚಿ ರಾಜೇಶ್ ಆರ್.ಶೇಟ್, ಸಹ ಕಾರ್ಯದರ್ಶಿ ಬಿ.ಎಸ್.ವೆಂಕಟೇಶ್, ಲೆಕ್ಕ ಪರಿಶೋಧಕ ಎಂ.ಎಂ.ನಾಗೇಶ್, ನಿರ್ದೇಶಕರಾದ ಎಂ.ರಾಮದಾಸ್, ಎಂ.ಪ್ರಭಾಕರ ಶೇಟ್, ಬಿ.ಬಿ.ಚಂದ್ರು, ಎ.ಎಸ್.ಮಂಜುನಾಥ್, ಎಸ್.ಜಯರಾಂ, ಬಿ.ಬಿ.ಸಂತೋಷ್ ಹಾಗೂ ಸಮಾಜ ಬಾಂಧವರು ಭಾಗವಹಿಸಿದ್ದರು. ಅಪರಾಹ್ನ ಸಭಾ ಕಾರ್ಯಕ್ರಮ ನಡೆಯಿತು.

ನಿಸರ್ಗ ಬಡಾವಣೆಯ ಬಸ್ ತಂಗುದಾಣ ಉದ್ಘಾಟನೆ



ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಗೋಣಿಕೊಪ್ಪ ರಸ್ತೆಯಲ್ಲಿರುವ ನಿಸರ್ಗ ಬಡಾವಣೆಯಲ್ಲಿ ನಿರ್ಮಿಸಿರುವ ಬಸ್ ತಂಗುದಾಣವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆ, ಜೂ.8– ಪುರಸಭೆ ವ್ಯಾಪ್ತಿಯ ಗೋಣಿಕೊಪ್ಪ ರಸ್ತೆಯಲ್ಲಿರುವ ನಿಸರ್ಗ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಬಸ್ ತಂಗುದಾಣವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿ ಮಾತನಾಡಿದ ಅವರು, ಸ್ಥಳೀಯರ ಬೇಡಿಕೆಯಂತೆ ಶಾಸಕರ ವಿಶೇಷ ಅನುದಾನದಲ್ಲಿ 10.5 ಲಕ್ಷ ವೆಚ್ಚದ ಕಾಮಗಾರಿ ನಡೆಸಿದೆ. ಇದನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಸುಚಿತ್ವವನ್ನು ಕಾಪಾಡಿ ಕೊಳ್ಳುವಂತೆ ಹೇಳಿದರು.

ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ನಿಸರ್ಗ ಬಡಾವಣೆಯ ಕಾಣತಂಡ ಜಗದೀಶ್, ಬೀನ ಜಗದೀಶ್, ವಕೀಲ ಡಿ.ಸಿ. ಧ್ರುವಕುಮಾರ್, ಉದ್ಯಮಿ ಮನೋಜ್, ಕಾಳಮಂಡ ಜಗತ್, ಜಿಲ್ಲಾ ಕಾಂಗ್ರೆಸ್ ಗ್ಯಾರಂಟಿ ಅನುಷ್ಠಾನದ ಅಧ್ಯಕ್ಷ ಧರ್ಮಜ ಉತ್ತಪ್ಪ, ತಾಲೂಕು ಅಧ್ಯಕ್ಷ ಜಾನ್ಸನ್, ನಗರ ಸಮಿತಿ ಕಾರ್ಯದರ್ಶಿ ಎಂ.ಎಂ.ಶಶಿಧರನ್ ಹಾಗೂ ಪುರಸಭೆ ಸದಸ್ಯರು, ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

ನಾಳೆ ಭಾರತ ಸಿಂಧೂರ ಕೃತಿ ಲೋಕಾರ್ಪಣೆ

ಮಡಿಕೇರಿ, ಜೂ.8– ಭಾರತ ಸಿಂಧೂರ ಕೃತಿ ಲೋಕಾರ್ಪಣೆ ಕಾರ್ಯಕ್ರಮವು ಜೂ.10 ರಂದು ನಗರದ ಪತ್ರಿಕಾ ಭವನದಲ್ಲಿ ನಡೆಯಲಿದೆ.

ಶಕ್ತಿ ಕುಟುಂಬದ ರಾಜಲಕ್ಷ್ಮಿ ಗೋಪಾಲಕೃಷ್ಣ, ಬೆಂಗಳೂರು ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಚೊಟ್ಟಕೊರಿಯಂಡ ಕೆ.ಬಾಲಕೃಷ್ಣ, ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತ ಶಯನ, ಕೃತಿಕಾರ ಜಿ.ನಾ.ಸೋಮೇಶ್, ಶ್ರೀ ದಂಡಿನ ಮಾರಿಯಮ್ಮ ದೇವಾಲಯದ ಪ್ರಧಾನ ಅರ್ಚಕರು ನಿವೃತ್ತ ಯೋಧ ಜಿ.ಎ.ಉಮೇಶ್, ಬೆಂಗಳೂರು ನಿವೃತ್ತ ಹೈಕೋರ್ಟ್ ಉದ್ಯೋಗಿ ಸುಧೀಂದ್ರ ಡಿ.ತಿಳಗುಳ್, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಆರ್.ಸವಿತಾ ರೈ, ಕೊಡಗು ಪ್ರೆಸ್ ಕ್ಲಬ್ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಇತರರು ಪಾಲ್ಗೊಳ್ಳಲಿದ್ದಾರೆ.

ಗಿಡ ನೆಡುವ ಕಾರ್ಯಕ್ರಮ

ಮಡಿಕೇರಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೇಟಿ ಬಚಾವೋ– ಬೇಟಿ ಪಡಾವೋ ಯೋಜನೆ ಅಡಿ ಗಿಡ ನೆಡುವ ಕಾರ್ಯಕ್ರಮವು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಹಿಂಭಾಗದ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಮ್ಮಿಕೊಳ್ಳಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡಾ.ಅಂಬೇಡ್ಕರ್ ಸಂವಿಧಾನದಿಂದ ದೇಶ ಒಗ್ಗಟ್ಟಾಗಿದೆ



ತಾಲೂಕಿನ ಕೆಂಪನಪುರ ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆಯನ್ನು ಸಚಿವ ಎಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಚಾಮರಾಜನಗರ, ಜೂ. 8– ಬಿಜೆಪಿ, ಮೋದಿಯಿಂದ ದೇಶ ಒಗ್ಗಟ್ಟಾಗಿಲ್ಲ. ಅಂಬೇಡ್ಕರ್ ಸಂವಿಧಾನದಿಂದ ಮಾತ್ರ ದೇಶ ಒಗ್ಗಟ್ಟಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ತಾಲೂಕಿನ ಕೆಂಪನಪುರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣಾ ಸಮಿತಿಯಿಂದ ನಡೆದ ಜನ್ಮದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಬುದ್ಧ ಬೌದ್ಧ ಬಿಕ್ಕುಗಳ ಮೂಲಕ ಬೀಜ ಹಾಕಿದ ಪ್ರಜಾಪ್ರಭುತ್ವವನ್ನು, ಹೆಮ್ಮರವಾಗಿ ಬೆಳೆಸಿದ ಬಸವಣ್ಣ ಅವರ ಅನುಭವ ಮಂಟಪವನ್ನು, ಸಂವಿಧಾನದ ಮೂಲಕ ಪಾರ್ಲಿಮೆಂಟ್ ರಚನೆ ಮಾಡುವ ಮುಖಾಂತರ, ಸಂವಿಧಾನದ ನಿರ್ದೇಶನದ ತತ್ವಗಳನ್ನು, ಪ್ರಜಾಪ್ರಭುತ್ವ ಎನ್ನುವ ಆಡಳಿತವನ್ನು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಕೊಡುವ ಆಡಳಿತವನ್ನು ಜಾರಿಗೊಳಿಸಿದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಭಾರತೀಯರ ಪಾಲಿಗೆ ಅಂಬೇಡ್ಕರ್ ಅವರ ತತ್ವ ಮತ್ತು ಸಿದ್ಧಾಂತ ಸಾರ್ವಕಾಲಿಕವಾದದ್ದು. ಇಂದು ಎಲ್ಲ ಧರ್ಮ, ಎಲ್ಲ ಸಮುದಾಯದ ಸರ್ವರಿಗೂ ಮೀಸಲಾತಿ ಸಿಗುವ ಅವಕಾಶವನ್ನು ಸಂವಿಧಾನದ ಮೂಲಕ ಮಾಡಿಕೊಟ್ಟಿದ್ದಾರೆ ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸದಸ್ಯ ಕೆ.ಎಂ. ನಾಗರಾಜು ಪ್ರಾಸ್ತಾವಿಕ ಭಾಷಣ ಮಾಡಿದರು. ಟಿ.ನರಸೀಪುರ ನಳಂದ ಬುದ್ಧ ವಿಹಾರ ಬೋಧಿರತ್ನ ಬಂತೇಜಿ ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಎಚ್.ವಿ.ಚಂದ್ರು, ಗ್ರಾ.ಪಂ.ಅಧ್ಯಕ್ಷ ಕೆ.ಸಿ.ನಾಗರಾಜು, ಜಿ.ಪಂ.ಮಾಜಿ ಉಪಾಧ್ಯಕ್ಷ ಯೋಗೇಶ್, ಯಳಂದೂರು ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರಾಜೇಂದ್ರ, ಎಎಸ್ಪಿ ಶಶಿಧರ್, ಸಮಾಜ ಸೇವಕ ದುಗ್ಗಟಿ ವೀರಭದ್ರಪ್ಪ, ರೈತ ಸಂಘದ ಮುಖಂಡ ಮಹೇಶ್ ಪ್ರಭು, ಹೆಗ್ಗವಾಡಿ ಮಹೇಶ್ ಕುಮಾರ್, ಮುಖಂಡರಾದ ಕಂದಹಳ್ಳಿ ನಂಜುಂಡ ಸ್ವಾಮಿ, ಪುಟ್ಟಸ್ವಾಮಿ, ಗ್ರಾ.ಪಂ ಸದಸ್ಯ ಎಸ್.ಮಹಾದೇವಸ್ವಾಮಿ, ಎ.ಪ್ರಕಾಶ್, ಯಜಮಾನರಾದ ಕೆ.ಎಂ.ನಾಗರಾಜು, ನಂಜಯ್ಯ, ಮಲ್ಲಯ್ಯ, ಮೈಸೂರು ಡಿಎಸ್‌ಎಸ್ ಸಂಚಾಲಕ ಕೆ.ವಿ.ದೇವೇಂದ್ರ, ಜೈಭೀಮ್ ಮಹಾಪುರುಷ ಯುವಕರ ಸಂಘದ ಎನ್.ರಾಜೇಶ್ ಹಾಜರಿದ್ದರು.

ಹೆಗ್ಗವಾಡಿಪುರದಲ್ಲಿ ವಿಶ್ವ ಆಹಾರ ಸುರಕ್ಷತಾ ದಿನಾಚರಣೆ



ಹೆಗ್ಗವಾಡಿಪುರದಲ್ಲಿ ನಡೆದ ವಿಶ್ವ ಆಹಾರ ಸುರಕ್ಷತಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾರಂಪರಿಕ ನಾಟಿ ವೈದ್ಯ ಹೆಚ್.ಸಿ. ಮಹೇಶ್‌ಕುಮಾರ್ ಮಾತನಾಡಿದರು.

ಚಾಮರಾಜನಗರ,ಜೂ.8– ಪ್ರತಿಯೊಬ್ಬರಿಗೂ ಶುದ್ಧ ಆಹಾರ, ನೀರು ಪೂರೈಸಬೇಕು ಎಂದು ಪಾರಂಪರಿಕ ನಾಟಿ ವೈದ್ಯ ಹೆಚ್.ಸಿ.ಮಹೇಶ್‌ಕುಮಾರ್ ಒತ್ತಾಯಿಸಿದ್ದಾರೆ.

ತಾಲೂಕಿನ ಹೆಗ್ಗವಾಡಿಪುರದಲ್ಲಿ ನಡೆದ ವಿಶ್ವ ಆಹಾರ ಸುರಕ್ಷಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಊಟ ಬಲ್ಲವನಿಗೆ ರೋಗವಿಲ್ಲ... ಎಂಬ ಮಾತಿನಂತೆ ಸರಿಯಾಗಿ ಪೌಷ್ಟಿಕಾಂಶಯುಕ್ತ ಆಹಾರ ಸೇವನೆಯ ಕಡೆಗೆ ಹೆಚ್ಚಿನ ಒತ್ತು ನೀಡಬೇಕು. ಶುದ್ಧತೆಯ ಕಡೆಗೆ ವಿಶೇಷ ಗಮನ ಹರಿಸಬೇಕು. ಇಲ್ಲವಾದ್ದಲ್ಲಿ ಆರೋಗ್ಯ ಕೆಡುವ ಸಾಧ್ಯತೆ ಇರುತ್ತದೆ ಎಂದರು.

ಆಹಾರ ಸುರಕ್ಷತೆ ಎಲ್ಲರ ಹಿತಕ್ಕಾಗಿ ಅಗತ್ಯವಾಗಿದೆ ಆದ್ದರಿಂದ ಆರೋಗ್ಯಕರ ಜೀವನಕ್ಕಾಗಿ ಸ್ವಚ್ಛ, ಶುದ್ಧ ಆಹಾರಗಳನ್ನು ಸೇವಿಸಿ ಆಹಾರದ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಹೆಚ್.ಎಂ.ಓಂಕಾರ್, ಬಂಗಾರು ಅಂಬಳೆ, ಮಧುಸೂದನ್ ಇತರರು ಹಾಜರಿದ್ದರು.

ಮುಸ್ಲಿಮರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ : ಟಿ.ಎಸ್.ತಾಜುದ್ದೀನ್



ಈದ್ಗಾ ಮೈದಾನದಲ್ಲಿ ಶನಿವಾರ ಜಾಮೀಯ ಮಸೀದಿ ಕಮಿಟಿಯ ವತಿಯಿಂದ ಸಂತೆಮರಹಳ್ಳಿ ಪಿಎಸ್‌ಐ ಟಿ.ಎಸ್. ತಾಜುದ್ದೀನ್‌ರವರನ್ನು ಸನ್ಮಾನಿಸಲಾಯಿತು.

ಯಳಂದೂರು, ಜೂ.8 (ವಿ.ನಾಗರಾಜು)– ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕಾದರೆ ಶಿಕ್ಷಣ ಬಹಳ ಮುಖ್ಯ ಜೊತೆಗೆ ಉತ್ತಮ ಜ್ಞಾನಕ್ಕಾಗಿ ಶಿಕ್ಷಣ ಪ್ರಬಲ ಅಸ್ತ್ರವಾಗಿದ್ದು ಸಮುದಾಯ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುವಂತೆ ಸಂತೆಮರಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಟಿ.ಎಸ್. ತಾಜುದ್ದೀನ್ ಕರೆ ನೀಡಿದ್ದಾರೆ.

ಟಿ.ಎಸ್.ತಾಜುದ್ದೀನ್‌ರಿಗೆ ಮುಖ್ಯಮಂತ್ರಿಗಳ ಪದಕ ಲಭ್ಯವಾದ ಹಿನ್ನೆಲೆಯಲ್ಲಿ ಪಟ್ಟಣದ ಈದ್ಗಾ ಮೈದಾನದಲ್ಲಿ ಜಾಮೀಯ ಮಸೀದಿ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಇಸ್ಲಾಂ ಧರ್ಮದಲ್ಲಿ ಜ್ಞಾನಾರ್ಜನೆಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳ ಓದನ್ನು ಮೊಟಕುಗೊಳಿಸದಂತೆ ಪೂರ್ಣ ಪ್ರಮಾಣದ ಶಿಕ್ಷಣ ನೀಡಿ, ಉನ್ನತ ವ್ಯಾಸಂಗಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂದು ಸಲಹೆ ನೀಡಿದರು.

ಯಳಂದೂರು ಆರಕ್ಷಕ ವೃತ್ತ ನಿರೀಕ್ಷಕ ಕೆ. ಶ್ರೀಕಾಂತ್ ಮಾತನಾಡಿ, ತಾಜುದ್ದೀನ್ ಉತ್ತಮ ಪೊಲೀಸ್ ಅಧಿಕಾರಿಯಾಗಿ ಕುದೇರು ಪೊಲೀಸ್ ಠಾಣೆಯನ್ನು ಕರ್ನಾಟಕದ ನಂಬರ್ ಒನ್ ಹಾಗೂ ದೇಶದ 5ನೇ ಉತ್ತಮ ಪೊಲೀಸ್ ಠಾಣೆಯಾಗಿ ಮಾಡಿ ಪ್ರಶಸ್ತಿ ಪಡೆದುಕೊಂಡಿದ್ದರು. ಪ್ರಸ್ತುತ ಸಂತೆಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈಗ ಮುಖ್ಯಮಂತ್ರಿಗಳ ಚಿನ್ನದ ಪದಕವನ್ನು ಪಡೆದುಕೊಂಡಿರುವುದು ಇವರ ಕಾರ್ಯದಕ್ಷತೆಗೆ ಸಾಕ್ಷಿಯಾಗಲು ಮುಖ್ಯ ಕಾರಣ ಶಿಕ್ಷಣವಾಗಿದೆ. ಅದರಿಂದ ಮುಸ್ಲಿಂ ಸಮುದಾಯ ಹೆಚ್ಚು ಗಮನವನ್ನು ನೀಡಬೇಕೆಂದು ತಿಳಿಸಿದರು.

ಪಿಎಸ್‌ಐ ಆಕಾಶ್, ಜಾಮೀಯಾ ಮಸೀದಿಯ ಮುಖಂಡರಾದ ನಯಾಜ್ ಖಾನ್, ಇರ್ಫಾನ್, ಪಪಂ ನಾಮ ನಿರ್ದೇಶಿತ ಸದಸ್ಯ ಮುನವ್ವರ್ ಬೇಗ್ ಸೇರಿದಂತೆ ಅನೇಕರು ಇದ್ದರು.

ತಮಿಳು–ಕನ್ನಡಿಗ ಭಕ್ತರ ಸಂಗಮ, ಭಾವೈಕ್ಯತೆಯ ಸಂಕೇತ

ಸುತ್ತೂರು ಶ್ರೀಗಳಿಂದ ಹೊಂಗನೂರಿನಲ್ಲಿ ಮೂರು ದೇವಸ್ಥಾನ ಲೋಕಾರ್ಪಣೆ

ಚಾಮರಾಜನಗರ, ಜೂ.8– ಜಿಲ್ಲೆಯ ಹೊಂಗನೂರು ಗ್ರಾಮದಲ್ಲಿರುವ ದೊಂಬಕಾಳೇಶ್ವರ ದೇವಸ್ಥಾನವು ತಮಿಳುನಾಡು ಹಾಗೂ ಕರ್ನಾಟಕದಲ್ಲಿರುವ ಭಕ್ತರನ್ನು ಸಂಗಮವನ್ನಾಗಿಸಿ ಸಹೋದರತೆ, ಉತ್ತಮ ಬಾಂಧವ್ಯವನ್ನು ಬೆಸೆದು ಆಧ್ಯಾತ್ಮಿಕತೆಯನ್ನು ಹೆಚ್ಚು ಮಾಡಿದೆ ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹೊಂಗನೂರು ಗ್ರಾಮದಲ್ಲಿರುವ ದೊಂಬಕಾಳೇಶ್ವರ ದೇವಸ್ಥಾನವು ಮೂಲ ಸ್ಥಳವಾಗಿದ್ದು, ತಮಿಳುನಾಡು, ಮಂಡ್ಯ ಹಾಗೂ ಜಿಲ್ಲೆಯ ಭಕ್ತರು ಸೇರಿ ಹೊಂಗನೂರು ಗ್ರಾಮದಲ್ಲಿ ಭವ್ಯವಾದ ಮಂದಿರವನ್ನು ನಿರ್ಮಾಣ ಮಾಡಿದ್ದಾರೆ. ಇದೊಂದು ಭಾವೈಕ್ಯತೆಯ ಸಂಕೇತವಾಗಿದೆ. ತಮಿಳುನಾಡಿನ ಭಕ್ತರು ಕರ್ನಾಟಕದಲ್ಲಿ ದೇವಸ್ಥಾನ ನಿರ್ಮಾಣ ಮಾಡಿರುವುದು ಸಾಮರಸ್ಯದ ಸಂಕೇತವಾಗಿದೆ ಎಂದು ಶುಭ ಕೋರಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, 1994ಲ್ಲಿ ನೀರಾವರಿ ಸಚಿವರಾಗಿದ್ದ ಕೆ.ಎನ್. ನಾಗೇಗೌಡರಿಗೆ ಮನೆ ದೇವರಾಗಿದ್ದು, ಇಲ್ಲಿಗೆ ಬಂದಿದ್ದ ಅವರು, ಹೊಂಗನೂರು ಹಿರಿಕೆರೆಯನ್ನು ನೋಡಿ, ಏತ ನೀರಾವರಿ ಯೋಜನೆಯನ್ನು ಅನುಷ್ಠಾನ ಮಾಡಿದ್ದರೆಂದು ಹೇಳಿದರು.

ಪೂಜಾ ವಿಧಾನ ನೇರವೇರಿಸಿಕೊಟ್ಟ ಡಾ. ಸೆಲ್ವ ಪಿಳ್ಳೈ, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಹೊಂಗನೂರು ಚಂದ್ರು, ಟ್ರಸ್ಟ್ ಗೌರವ ಅಧ್ಯಕ್ಷ ಎಂ.ಎಸ್. ರಮೇಶ್, ಅಧ್ಯಕ್ಷ ಚಂದ್ರಶೇಖರ್, ಹೊಂಗನೂರು ಕುಲಮಕ್ಕಳಾದ ತಮಿಳುನಾಡು ಶಿವಕುಮಾರ್, ಎನ್. ಗುಣಶೇಖರ್, ಮಣಿ ಮಾಸ್ಟರ್, ಗ್ರಾ.ಪಂ. ಅಧ್ಯಕ್ಷ ರೂಪ, ಉಪಾಧ್ಯಕ್ಷ ನವೀನ್, ಮುಖಂಡ ಹೊಂಗನೂರು ಜಯರಾಜ್, ಮುಖಂಡರಾದ ಮಣಿ, ಕಾಮಗೆರೆ ರವಿ, ಹೊಂಗನೂರು ರವಿ, ಗುಣಶೇಖರ್, ಸೆಲ್ವರಾಜ್, ಸ್ವಾಮಿ ಮೊದಲಾದವರು ಇದ್ದರು.



ತಾಲೂಕಿನ ಹೊಂಗನೂರು ಗ್ರಾಮದಲ್ಲಿ ದೇವಸ್ಥಾನಗಳ ಉದ್ಘಾಟನೆ ಮತ್ತು ಧಾರ್ಮಿಕ ಕಾರ್ಯಕ್ರಮವನ್ನು ಸುತ್ತೂರು ಶ್ರೀಗಳು ಉದ್ಘಾಟಿಸಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ ಇತರರು ಇದ್ದಾರೆ.

ಪ್ರತ್ಯೇಕ ಅಪಘಾತ: ಮೂವರಿಗೆ ಗಂಭೀರ ಗಾಯ

ಚಾಮರಾಜನಗರ, ಜೂ. 8– ತಾಲೂಕಿನಲ್ಲಿ ಭಾನುವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಯುವಕರು ಗಂಭೀರ ಗಾಯಗೊಂಡಿರುವ ಘಟನೆ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಾಲೂಕಿನ ಚಿಕ್ಕಹೊಳೆ ಬಳಿ ಬೈಕ್ ಹಾಗೂ ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಬೈಕ್ ಸವಾರರು ಗಾಯಗೊಂಡರೆ, ಪಣ್ಯದಹುಂಡಿ ಬಳಿ ಬೈಕ್ ನಿಯಂತ್ರಣ ತಪ್ಪಿ ಬಿದ್ದು ಯುವಕನೊಬ್ಬ ಗಾಯ ಗೊಂಡಿದ್ದಾನೆ.

ಸತ್ಯಮಂಗಲದ ಕಡೆಯಿಂದ ಚಾಮರಾಜನಗರದ ಕಡೆಗೆ ಬರುತ್ತಿದ್ದ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಚಿಕ್ಕಹೊಳೆ ಗ್ರಾಮದ ಜಯಸೂರ್ಯ ಹಾಗೂ ಪ್ರಜ್ವಲ್ ಗಾಯಗೊಂಡಿದ್ದು, ಇವರನ್ನು ಸಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಪಣ್ಯದಹುಂಡಿ ಬಳಿ ನಿಯಂತ್ರಣ ತಪ್ಪಿ ಬಿದ್ದ ಬೈಕ್ ಸವಾರನನ್ನು ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಶರಣ್ ಎಂದು ಗುರುತಿಸಲಾಗಿದ್ದು, ಈತನನ್ನೂ ಸಿಮ್ಸ್ ಆಸ್ಪತ್ರೆಯಲ್ಲೇ ದಾಖಲಿಸಲಾಗಿದೆ.

ಸಂಚಾರ ಠಾಣೆಯ ಪೊಲೀಸರು ಅಪಘಾತಕ್ಕೀಡಾದ ವಾಹನಗಳನ್ನು ವಶಕ್ಕೆ ಪಡೆದುಕೊಂಡು ದೂರು ದಾಖಲು ಮಾಡಿಕೊಂಡಿದ್ದಾರೆ. ಗಾಯಗೊಂಡಿರುವ ಮೂವರು ಯುವಕರು ಮದ್ಯಪಾನ ಸೇವಿಸಿದ್ದರೆಂದು ಪೊಲೀಸರು ತಿಳಿಸಿದ್ದಾರೆ.

ಜಯಮ್ಮ ನಿಧನ



ಯಳಂದೂರು, ಜೂ.8– ತಾಲೂಕಿನ ಬಿಳಿಗಿರಿರಂಗನಬೆಟ್ಟದ ನಿವಾಸಿಯಾದ ಲೇ.ಹನುಮಂತನಾಯಕರ ಧರ್ಮಪತ್ನಿ ಜಯಮ್ಮ (83) ಶನಿವಾರ ತಮ್ಮ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ಪ್ರಸಿದ್ಧ ವಾಸ್ತುಶಾಸ್ತ್ರಜ್ಞ ಹಾಗೂ ಜ್ಯೋತಿಷ್ಯರಾದ ಡಾ.ಹೆಚ್.ಬಾಲಸುಬ್ರಹ್ಮಣ್ಯರವರು ಸೇರಿ ಇಬ್ಬರು ಗಂಡು ಹಾಗೂ ನಾಲ್ಕು ಹೆಣ್ಣು ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಬಿಳಿಗಿರಿರಂಗನಬೆಟ್ಟದ ಮಣಿಕಂಠ ನಿಲಯದ ತೋಟದ ಜಮೀನಿನಲ್ಲಿ ಮಧ್ಯಾಹ್ನ ನೆರವೇರಿಸಲಾಯಿತು.

ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆ


33 ಅಡಿ ಕಂಚಿನ ಕಾವೇರಿ ಮಾತೆ ಪ್ರತಿಮೆ ಸ್ಥಾಪನೆ ಸಂಬಂಧ ಟೆಂಡರ್ ಪ್ರಕ್ರಿಯೆಗೆ ಚಾಲನೆ

ಮೈಸೂರು,ಜೂ.8(ಪಿಎಂ)– ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣ ರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಯಲ್ಲಿ ಪ್ರಸ್ತಾಪಿತ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಯಡಿ ಸ್ಥಾಪಿಸಲು ಉದ್ದೇಶಿಸಿರುವ ಕಾವೇರಿ ಮಾತೆಯ ಕಂಚಿನ ಪ್ರತಿಮೆ ಸ್ಥಾಪನೆ ಸಂಬಂಧ ರಾಜ್ಯ ಸರ್ಕಾರ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ(ಪಿಪಿಪಿ) ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಯನ್ನು 198 ಎಕರೆ ಪ್ರದೇಶದಷ್ಟು ವಿಸ್ತೀರ್ಣದಲ್ಲಿ ರೂಪಿಸಲು ಉದ್ದೇಶಿಸಲಾಗಿದೆ. ಇದು ವಾಟರ್ ಪಾರ್ಕ್, ರೋಲರ್ ಕೋಸ್ಟರ್, ಕಾವೇರಿ ಮಾತೆಯ ಪ್ರತಿಮೆ ಮತ್ತು ಪೆಂಗ್ವಿನ್ ಪಾರ್ಕ್‌ನಂತಹ ವಿವಿಧ ಆಕರ್ಷಣೆಗಳನ್ನು ಒಳಗೊಂಡಿದೆ.

ಸರ್ಕಾರ ಕಾವೇರಿ ಆರತಿಗಾಗಿ 92 ಕೋಟಿ ರೂ. ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪನೆಗಾಗಿ 2,663 ಕೋಟಿ ರೂ. ನಿಗದಿಪಡಿಸಿದೆ. ಆದರೆ ಈ ಎರಡೂ ಯೋಜನೆಗೆ ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಕೆಆರ್‌ಎಸ್ ಅಣೆಕಟ್ಟೆಯ ಕೆಳಭಾಗದಲ್ಲಿ 33 ಅಡಿ ಎತ್ತರದ ಕಾವೇರಿ ದೇವಿಯ ಕಂಚಿನ ಪ್ರತಿಮೆ ಸ್ಥಾಪನೆ ಸಂಬಂಧ ಮಂಡ್ಯ ವಿಭಾಗದ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿಯಿಂದ ಟೆಂಡರ್ ಕರೆಯಲಾಗಿದೆ. ಅಲ್ಲದೆ, ಟೆಂಡರ್ ಪ್ರಕ್ರಿಯೆ ಸಂಬಂಧ ಸ್ಪೆಸಿಫಿಕೇಷನ್‌ಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಪ್ರತಿಮೆ ಸ್ಥಾಪನೆ ಸಂಬಂಧ ಅಧಿಕೃತ ವಿತರಕರು ಮತ್ತು ಪೂರೈಕೆದಾರರಿಂದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಕಂಪನಿಗಳು ಜೂ.12ರೊಳಗೆ ತಮ್ಮ ದರದ ಕೊಟೇಷನ್‌ಗಳನ್ನು ಸಲ್ಲಿಸಬೇಕಿದೆ.



ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟ ಕಾವೇರಿ ಮಾತೆಯ ಪ್ರತಿಮೆಯ ವಿನ್ಯಾಸ ಹಾಗೂ ಕಾವೇರಿ ಮಾತೆಯ ಪ್ರತಿಮೆ ಮುಂದೆ ಬರಲಿರುವ ಪ್ರಾರ್ಥನೆ ಸಲ್ಲಿಸುತ್ತಿರುವ 6 ಅಡಿ ಎತ್ತರದ ಮಾನವ ಆಕೃತಿ ಮತ್ತು 62 ಇಂಚಿನ ಕರ್ನಾಟಕ ರಾಜ್ಯದ ನಕ್ಷೆ ಮಾದರಿಯ ಲಾಂಛನವನ್ನು ಚಿತ್ರದಲ್ಲಿ ಕಾಣಬಹುದು.

ಶಾಸಕ ಕೆ.ಹರೀಶ್‌ಗೌಡರಿಂದ ಕಾಮಗಾರಿ ಪರಿಶೀಲನೆ...



ಮೈಸೂರಿನ ಹೆಬ್ಬಾಳು ಎರಡನೇ ಹಂತದ ಸಿಐಟಿಬಿ ಛತ್ರದ ಮುಂಭಾಗದಲ್ಲಿರುವ ಮಳೆ ನೀರು ಚರಂಡಿಗೆ ಹೊಸದಾಗಿ ನಿರ್ಮಿಸುತ್ತಿರುವ ಕಾಂಕ್ರೀಟ್ ತಡೆಗೋಡೆ ಕಾಮಗಾರಿಯನ್ನು ಶಾಸಕ ಕೆ.ಹರೀಶ್‌ಗೌಡ ಭಾನುವಾರ ಪರಿಶೀಲಿಸಿದರು. ನಗರ ಪಾಲಿಕೆ ಮಾಜಿ ಸದಸ್ಯೆ ಪ್ರೇಮಾಶಂಕರೇಗೌಡ, ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ಡಿ.ರಾಮಚಂದ್ರು, ಸಿ.ಮಂಜುನಾಥ್, ಮಂಚೇಗೌಡನಕೊಪ್ಪಲು ಯಜಮಾನರಾದ ದೊಡ್ಡೇಗೌಡ, ಕೆಂಪೇಗೌಡ ಮತ್ತಿತರರು ಇದ್ದರು.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಸಂಸ್ಥೆಯ ಸಿಇಓ ತೇಜಸ್ ಬಿ ಶಂಕರ್, ಪ್ರಾಚಾರ್ಯ ಎ.ಕುಮಾರ್ ಇತರರಿದ್ದರು.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಫಣೀಂದ್ರ



ರಂಜನಿ



ಶರತ್



ವೆಂಕಟೇಶ್

ಮೈಸೂರು, ಜೂ.8– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜೂನ್ 11ರಂದು ಬುಧವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–280ರ ಅಂಗವಾಗಿ ವಿದುಷಿ ಡಾ. ರಂಜನಿ ವಾಸುಕಿಯವರ ಗಾಯನ ಏರ್ಪಡಿಸಲಾಗಿದೆ.

ವಿದುಷಿ ಡಾ. ರಂಜನಿ ವಾಸುಕಿಯವರು ಡಾ. ನಾಗವಲ್ಲಿ ನಾಗರಾಜ್‌ರವರ ಸುಪುತ್ರಿ ಮತ್ತು ಶಿಷ್ಯೆ. ಇವರ ಮುತ್ತಾತನವರಾದ ಕೊಳತ್ತೂರು ರಾಮಕೃಷ್ಣ ಶಾಸ್ತ್ರಿಗಳು 72 ಮೇಳಕರ್ತ ರಾಗಗಳಲ್ಲಿಯೂ ಕೃತಿಗಳನ್ನು ರಚಿಸಿದ್ದ ವಾಗ್ಗೇಯಕಾರರು. ತಾತನವರಾದ ಕೆ.ಎಸ್. ಸತ್ಯನಾಥ್ ಅವರು ಸಂಗೀತ ಸಂಯೋಜಕರಾಗಿದ್ದರು. ಶ್ರೀಮತಿ ರಂಜನಿಯವರು ನಾಲ್ಕನೆಯ ವಯಸ್ಸಿನಿಂದಲೇ ಕಛೇರಿ ನೀಡಲು ಪ್ರಾರಂಭಿಸಿದರು.

ಶ್ರೀಮತಿ ರಂಜನಿಯವರು ಆಕಾಶವಾಣಿ, ದೂರದರ್ಶನ, ಉದಯ ಟಿವಿ, ಈ ಟಿವಿಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ನ್ಯೂಜೆರ್ಸಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ಹಲವಾರು ಮ್ಯೂಸಿಕ್ ಆಲ್ಬಮ್‌ಗಳನ್ನು ಹೊರತಂದಿದ್ದಾರೆ. 'ರಾಗವಲ್ಲಿ ಆರ್ಟ್ಸ್ ಫೌಂಡೇಶನ್ ಸಂಸ್ಥೆಯ ಸ್ಥಾಪಕ–ನಿರ್ದೇಶಕರಾಗಿದ್ದಾರೆ. ಇವರ ಕಲಾಪ್ರತಿಭೆಗಾಗಿ ಹಲವಾರು ಗೌರವ ಪ್ರಶಸ್ತಿಗಳು ಲಭಿಸಿವೆ.

ವಯೋಲಿನ್ ಸಹಕಾರ ನೀಡಲಿರುವ ವಿದ್ವಾನ್ ಜಿ.ವೆಂಕಟೇಶ ಜೋಸ್ಯರ್ ಮೈಸೂರಿನವರು. ತಂದೆ ಜಿ.ಎಸ್.ಜೋಸ್ಯರು, ತಾಯಿ ಸಂಗೀತ ವಿದುಷಿ ಶ್ರೀಮತಿ ಎಂ.ಕೆ. ಸರಸ್ವತಿ. ಚಿಕ್ಕ ವಯಸ್ಸಿನಿಂದಲೇ ತಾಯಿಯವರ ಬಳಿ ಸಂಗೀತ ಕಲಿತು ತರುವಾಯ ವಿದ್ವಾಂಸರಾದ ಎಚ್.ಎಸ್. ತಾಂಡವಮೂರ್ತಿ ಮತ್ತು ಎಚ್.ಕೆ. ನರಸಿಂಹಮೂರ್ತಿಯವರುಗಳಲ್ಲಿ ವಯೋಲಿನ್ ವಾದನದ ತರಬೇತಿ ಪಡೆದರು.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ಫಣೀಂದ್ರ ಭಾಸ್ಕರ್, ಲಯ ಕಲಾ ಪ್ರತಿಭಾಮಣಿ, ಗಾನಕಲಾಶ್ರೀ ವಿದ್ವಾನ್ ಎಚ್.ಎಸ್. ಸುಧೀಂದ್ರರವರ ಶಿಷ್ಯರು. ಕರ್ನಾಟಕ ರಾಜ್ಯ ಶಿಕ್ಷಣ ಮಂಡಳಿಯ ಮೃದಂಗ ಸೀನಿಯರ್ ಪರೀಕ್ಷೆಯಲ್ಲಿ ಎರಡನೇ ರ‍್ಯಾಂಕ್ ಪಡೆದಿರುವರು. ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಫೆಲೋಶಿಪ್ ಪಡೆದಿರುವರು. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರು.

ಘಟಂ ಸಹಕಾರ ನೀಡಲಿರುವ ವಿದ್ವಾನ್ ಶರತ್ ಕೌಶಿಕ್, ಕರ್ನಾಟಕದ ಉದಯೋನ್ಮುಖ ಪ್ರತಿಭಾವಂತ ಕಲಾವಿದರಲ್ಲೊಬ್ಬರು. ಇವರು ಮೃದಂಗ ಮತ್ತು ಘಟಂ ವಾದನದಲ್ಲಿ ಪ್ರಾವೀಣ್ಯತೆ ಗಳಿಸಿದ್ದಾರೆ. ವಿದ್ವಾನ್ ವಿ.ಎಸ್.ರಮೇಶ್‌ರವರ ಬಳಿ ಪ್ರಾರಂಭಿಕ ಶಿಕ್ಷಣ ಪಡೆದ ಇವರು ಪ್ರಸ್ತುತ ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಮೃದಂಗ ವಾದನದ ಸೂಕ್ಷ್ಮತೆಗಳನ್ನು ಕಲಿಯುತ್ತಿರುವರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಕಾಗ್ನಿಸೆಂಟ್ (ಸಿಬಿಎಸ್) ಸಾಫ್ಟ್‌ವೇರ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಎನ್.ಹರೀಶ್‌ಗೆ ಪಿಹೆಚ್.ಡಿ ಪದವಿ

ಮೈಸೂರು: ಡಾ. ಕೆ. ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಎನ್. ಹರೀಶ್ ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಕೆ. ಗೋವಿಂದರಾಜು ಅವರ ಬದುಕು–ಬರಹ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ

ಸೋಮವಾರ 9 ಜೂನ್ 2025

ಪ್ರತಿಯೊಬ್ಬರು ಗಿಡನೆಟ್ಟು ಬೆಳೆಸಲು ಮುಂದಾಗಿ: ಮಂಜುನಾಥ್



ವ್ಯಾಸರಾಜಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ಬನ್ನೂರು, ಜೂ.8– ಪ್ರತಿಯೊಬ್ಬರು ಒಂದೊಂದು ಗಿಡನೆಟ್ಟು ಬೆಳೆಸುವ ಮೂಲಕ ಪ್ರಕೃತಿಗೆ ಕೊಡುಗೆ ನೀಡಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಮೇಲ್ವಿಚಾರಕ ಮಂಜುನಾಥ್ ತಿಳಿಸಿದರು.

ಪಟ್ಟಣ ಸಮೀಪದ ವ್ಯಾಸರಾಜಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಮನುಷ್ಯನ ದುರಾಸೆಯಿಂದ ಮರ ಗಿಡಗಳು ನಾಶವಾಗುತ್ತಿದ್ದು, ವಾತಾವರಣ ಬದಲಾವಣೆಗೆ ಕಾರಣವಾಗುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಖಾಲಿ ಜಾಗದಲ್ಲಿ ಗಿಡ ನೆಟ್ಟು ಪೋಷಿಸುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ಕಲ್ಪಿಸಬೇಕಿದೆ ಎಂದು ಹೇಳಿದರು.

ಈ ವೇಳೆ ಮುಖ್ಯ ಶಿಕ್ಷಕ ಎಂ. ನಾಗೇಂದ್ರ, ಗ್ರಾಮ ಪಂಚಾಯಿತಿ ಸದಸ್ಯರಾದ ರಾಜಮ್ಮ, ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್, ಕುಮಾರಸ್ವಾಮಿ, ರಂಗಸ್ವಾಮಿ, ರೇವಣ್ಣ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಜುಲೈನಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ

ರೈತ, ಪ್ರಗತಿಪರ, ವಿವಿಧ ಸಮುದಾಯದ ಸಂಘಟನೆಗಳ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ತಿ.ನರಸೀಪುರ, ಜೂ.8– ಸಮಾಜದಲ್ಲಿ ಸಹಬಾಳ್ವೆ, ಭ್ರಾತೃತ್ವ ಹಾಗೂ ಸಮಾನತೆಯ ಸಂದೇಶ ಸಾರುವ ಉದ್ದೇಶದಿಂದ ಜುಲೈ ತಿಂಗಳಲ್ಲಿ ತಾಲೂಕು ಕೇಂದ್ರ ತಿ.ನರಸೀಪುರದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಯೋಜಿಸಲು ತಾಲೂಕಿನ ರೈತ ಮತ್ತು ಪ್ರಗತಿಪರ ಸಂಘಟನೆಗಳು ಹಾಗೂ ವಿವಿಧ ಸಮುದಾಯದ ಸಂಘಟನೆಗಳ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ದಲಿತ ಸಂಘ ಸಮಿತಿ ಬಣ ರಹಿತ ತಾಲೂಕು ಶಾಖೆ ನೇತೃತ್ವದಲ್ಲಿ ನಡೆದ ಪೂರ್ವಸಭೆಯಲ್ಲಿ ಜುಲೈ ತಿಂಗಳ ಮೊದಲ ಅಥವಾ 2ನೇ ವಾರದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ನಡೆಸಲಾಗುವುದು. ಆ ಮೂಲಕ ಒಂದೇ ವೇದಿಕೆಯಲ್ಲಿ ಆಯೋಜನೆಗೊಳ್ಳುವ ಮಹನೀಯರ ಜಯಂತಿಯಲ್ಲಿ ಅವರ ಚಿಂತನೆಗಳನ್ನು ಬೋಧಿಸಬೇಕು. ಕಾರ್ಯಕ್ರಮಕ್ಕೆ ಬೌದ್ಧ ಬಂತೇಜಿ



ತಿ.ನರಸೀಪುರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸೇರಿದಂತೆ ವಿಶೇಷವಾಗಿ ದಿವ್ಯ ಸಾನಿಧ್ಯ ವಹಿಸಲು ಸುತ್ತೂರು ಶ್ರೀಗಳನ್ನು ಆಹ್ವಾನಿಸಲು ತೀರ್ಮಾನಿಸಲಾಯಿತು.

ಉಳಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಪ್ರಿಯಾಂಕ್ ಖರ್ಗೆ, ಸಂಸದ ಸುನೀಲ್ ಬೋಸ್, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಬಿಜೆಪಿ ಮುಖಂಡ ಡಾ.ಎಂ.ರೇವಣ್ಣ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು. ಜೊತೆಗೆ ಸಂಘಟನೆಗಳ ಅಧ್ಯಕ್ಷರ ಉಪಸ್ಥಿತಿಯೊಳಗೆ ಬುದ್ಧ, ಬಸವ, ಅಂಬೇಡ್ಕರ್ ವಿಚಾರದಲ್ಲಿ ಚಿಂತನೆ ಮಾಡುವ ಒಬ್ಬ ಮುಖ್ಯ ಭಾಷಣಕಾರರನ್ನು ಆಹ್ವಾನಿಸುವುದು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಭಾಗಿತ್ವದಲ್ಲಿ ವಿವಿಧ ಕಲಾತಂಡಗಳೊಂದಿಗೆ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರದ ಆಕರ್ಷಕ ಮೆರವಣಿಗೆ ನಡೆಸಲು ತೀರ್ಮಾನ ಮಾಡಲಾಯಿತು.

ಸಭೆಯಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಉಮಾ ಮಹ ದೇವ, ಜಿಲ್ಲಾ ಸಂಘಟನಾ ಸಂಚಾಲಕ ಆಲತ್ತೂರು ಶಿವರಾಜು, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್, ರೈತ ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ವೀರಶೈವ ಮಹಾಸಭಾದ ಅಧ್ಯಕ್ಷ ಸಿ.ಎಂ.ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಶಿವಪ್ರಕಾಶ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಸಮಾಜ ಸೇವಕ ಅಯ್ಯಪ್ಪ ಸಿದ್ದಲಿಂಗಮೂರ್ತಿ, ರಾಜ್ಯ ದಲಿತ ಪ್ಯಾಂಥರ್ ಪ್ರಧಾನ ಕಾರ್ಯದರ್ಶಿ ಗಾಂಧಿನಗರ ಎಸ್.ಸುರೇಶ, ಮಡಿವಾಳರ ಸಂಘದ ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ಕಬ್ಬು ಬೆಳೆಗಾರರ ಸಂಘದ ಬಿ.ಪಿ.ಪರಶಿವಮೂರ್ತಿ, ಅನಾಥ ಶವಗಳ ಮುಕ್ತಿದಾತ ಮಾದೇಶ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಸಿಐಟಿಯು ಕಾರ್ಮಿಕರ ಸಂಘಟನೆ ಅಧ್ಯಕ್ಷ ನವೀನ್, ಸ್ಟುಡೆಂಟ್ ವರ್ಚುಯಲ್ ಬ್ರಿಗೇಡ್‌ನ ಅಧ್ಯಕ್ಷ ಲಿಂಗರಾಜು, ದಲಿತ ಕಲಾವಿದರ ಸಂಘದ ಉಪಾಧ್ಯಕ್ಷ ಶಿವಣ್ಣ, ತೊರೆಕಾಡನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ಮಹೇಶ್, ಮಲ್ಲಿಕಾರ್ಜುನ, ಗುರುಮಲ್ಲಪ್ಪ ಬೆನಕನಹಳ್ಳಿ, ಮಡಿವಾಳರ ಮುಖಂಡ ಬಸವರಾಜು, ಮಹೇಶ್, ಕಾರ್ಮಿಕ ಮುಖಂಡ ನಿಂಗರಾಜು ಇತರರಿದ್ದರು.

ಆಸ್ಪತ್ರೆಗೆ ಕುಟುಂಬ ಕಲ್ಯಾಣಾಧಿಕಾರಿ ಭೇಟಿ, ಪರಿಶೀಲನೆ



ಸರಗೂರು ಆಸ್ಪತ್ರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರಗೂರು, ಜೂ.8– ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಸ್ಪತ್ರೆಗೆ ಭೇಟಿ ನೀಡಿದ ಅವರು ಆಸ್ಪತ್ರೆ ಸ್ವಚ್ಛತೆ, ಪ್ರಯೋಗ ಶಾಲೆ, ಹೆರಿಗೆ ಕೊಠಡಿ, ಶಸ್ತ್ರ ಚಿಕಿತ್ಸೆ ವಿಭಾಗ, ಹೊರರೋಗಿಗಳ ತಪಾಸಣೆ ಕೊಠಡಿ ಪರಿಶೀಲಿಸಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಆಸ್ಪತ್ರೆ ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಬೇಕು. ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಹಾಕಬೇಕು. ಇನ್ನು ಮುಂದೆ ಆಸ್ಪತ್ರೆಯಲ್ಲಿ ಹೆಚ್ಚು ಹೆರಿಗೆಗಳು ಮಾಡಬೇಕು. ಹೆರಿಗೆ ಕೊಠಡಿಯಲ್ಲಿ ಇಡಿಡಿ ಲಿಸ್ಟ್ ಅನ್ನು ಹಾಕಬೇಕು. 24 ಗಂಟೆಯೂ ತುರ್ತು ವಾಹನ ಲಭ್ಯವಿರಬೇಕು. ಕಾಯಕಲ್ಪ ಅಸೆಸ್ಮೆಂಟಿಗೆ ಕ್ವಾಲಿಫೈ ಆಗಬೇಕು. ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯ ಇರಬೇಕು. ಅಲ್ಲದೇ ಲಭ್ಯವಿರುವ ಹಾಗೆ ನೋಡಿಕೊಳ್ಳಬೇಕು. ಆಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಜನರಿಂದ ಯಾವುದೇ ದೂರು ಬಾರದ ಹಾಗೆ 24 ಗಂಟೆಯೂ ಕರ್ತವ್ಯ ನಿರ್ವಹಿಸಬೇಕು. ಜನರಿಂದ ದೂರುಗಳು ಬಂದರೆ ತಮ್ಮ ಮೇಲೆ ಶಿಸ್ತು ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಬೃಂದಾ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಆಡಳಿತ ವೈದ್ಯಾಧಿಕಾರಿ ಡಾ.ಪಾರ್ಥ ಸಾರಥಿ, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಭಾಗ್ಯಲಕ್ಷ್ಮಿ, ಸಿಬ್ಬಂದಿ ವರ್ಗ ಹಾಜರಿದ್ದರು.

ಉಯಿಗೊಂಡನಹಳ್ಳಿ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಅಧ್ಯಕ್ಷೆ ಛಾಯಾದೇವಿ, ಉಪಾಧ್ಯಕ್ಷೆ ಲಲಿತಾ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಹುಣಸೂರು, ಜೂ.8– ತಾಲೂಕಿನ ಉಯಿಗೊಂಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮುಂದಿನ ಐದು ವರ್ಷದ ಆಡಳಿತ ಮಂಡಳಿ ಅಧ್ಯಕ್ಷೆಯಾಗಿ ಛಾಯಾದೇವಿ ಹಾಗೂ ಉಪಾಧ್ಯಕ್ಷೆಯಾಗಿ ಲಲಿತಾ ಅವಿರೋಧವಾಗಿ ಆಯ್ಕೆಯಾದರು.

ಆಡಳಿತ ಮಂಡಳಿಗೆ 12 ನಿರ್ದೇಶಕರು ಆಯ್ಕೆಯಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ಛಾಯದೇವಿ, ಉಪಾಧ್ಯಕ್ಷ ಸ್ಥಾನಕ್ಕೆ ಲಲಿತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹುಣಸೂರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ರಾಜಣ್ಣ ಘೋಷಿಸಿದರು. ಈ ವೇಳೆ ಕಾರ್ಯದರ್ಶಿ ನೀಲಜಾ ಇದ್ದರು.

ನೂತನ ಅಧ್ಯಕ್ಷೆ ಛಾಯದೇವಿ ಮಾತನಾಡಿ, ರೈತರ ಅನುಕೂಲಕ್ಕಾಗಿ ದೂರು ಪೆಟ್ಟಿಗೆ ಅಳವಡಿಸುತ್ತೇವೆ. ರೈತರಿಗೆ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸುತ್ತೇವೆ. ಸಂಸ್ಥೆ ಬೆಳಗಬೇಕು ಎನ್ನುವ ದೃಷ್ಟಿಕೋನದಿಂದ ನಾವೆಲ್ಲರೂ ಒಂದೇ ಮನಸ್ಸಿನಿಂದ ಕೆಲಸ ಮಾಡುತ್ತೇವೆ. ಸಂಘದ ಬೆಳವಣಿಗೆಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಅಧ್ಯಕ್ಷೆಯಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲರಿಗೂ ಇದೇ ವೇಳೆ ಧನ್ಯವಾದ ಸಲ್ಲಿಸಿದರು.

ಇದೇ ವೇಳೆ ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಗ್ರಾಮಸ್ಥರು ಅಭಿನಂದಿಸಿದರು. ಗ್ರಾಪಂ ಅಧ್ಯಕ್ಷ ಯು.ಡಿ. ದೇವರಾಜ್, ಸದಸ್ಯರಾದ ಸುಮತಿ, ರಾಮೇಗೌಡ, ನಿರ್ದೇಶಕರಾದ ಭಾಗ್ಯಮ್ಮ, ಪ್ರೀತಿ, ಆಶಾರಾಣಿ, ಜಯಲಕ್ಷ್ಮಿ, ವಸಂತಮ್ಮ, ಸುಮಿತ್ರ, ಕಾಳಮ್ಮ, ಮಹದೇವಮ್ಮ, ಲಕ್ಷ್ಮಮ್ಮ, ಮಮತಾ, ಯಜಮಾನರಾದ ಬಲರಾಮೇಗೌಡ, ರಾಮೇಗೌಡ, ಮುಖಂಡರಾದ ದಳವಾಯಿ, ಚಿಕ್ಕಕ ರಿಗೌಡ, ಸುರೇಶ್‌ಗೌಡ, ರಾಮಕೃಷ್ಣೇ ಗೌಡ, ಜವರೇಗೌಡ, ಮಂಜು, ಜಲೇಂದ್ರ, ಶಿವರಾಜು, ಸಂತೋಷ್, ಸೋಮು ಸೇರಿದಂತೆ ಗ್ರಾಮದ ಮುಖಂಡರು, ಮಹಿಳೆಯರು ಹಾಜರಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ಬಾಲಕ ಸಾವು



ಹೆಚ್.ಡಿ.ಕೋಟೆ, ಜೂ.8– ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಜಿಲ್ಲಾಮಟ್ಟದ ಬಸವ ಜಯಂತಿಗೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಾಲಕ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.

ತಾಲೂಕಿನ ಕಾರೇಹುಂಡಿ ಗ್ರಾಮದ ನಾಗೇಶ್ ಅವರ ಪುತ್ರ ತೇಜಸ್(13) ಸಾವನ್ನಪ್ಪಿದವರು. ಈತ ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಬಸವ ಜಯಂತಿಗೆ 11 ಮಂದಿ ಯುವಕರ ತಂಡದೊಂದಿಗೆ ಗೂಡ್ಸ್ ಆಟೋದಲ್ಲಿ ತೆರಳುತ್ತಿದ್ದ ವೇಳೆ ಮೈಸೂರು–ಮಾನಂದವಾಡಿ ಹೆದ್ದಾರಿಯ ತಾಲೂಕಿನ ಗಡಿ ಭಾಗ ಮಂಡಳ್ಳಿ ತಿರುವಿನ ಬಳಿ ಮೈಸೂರು ಕಡೆಯಿಂದ ಬಂದ ಕಾಂಕ್ರೀಟ್ ಮಿಕ್ಸಿಂಗ್ ಲಾರಿ ಡಿಕ್ಕಿ ಹೊಡೆದು ಆಟೋ ಪಲ್ಟಿಯಾಗಿದ್ದರಿಂದ 6 ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದರು. ತೇಜಸ್ ಸೇರಿದಂತೆ ಐವರು ತೀವ್ರ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಶನಿವಾರ ಚಿಕಿತ್ಸೆ ಫಲಕಾರಿಯಾಗದೇ ತೇಜಸ್ ಸಾವನ್ನಪ್ಪಿದ್ದಾನೆ.

ತಿ.ನರಸೀಪುರ ಪೋಲಿಸರಿಂದ ಕಳ್ಳನ ಬಂಧನ



ತಿ.ನರಸೀಪುರ, ಜೂ.8– ಮನೆ, ದೇವಸ್ಥಾನ ಹಾಗೂ ಅಂಗಡಿ ಸೇರಿದಂತೆ ವಿವಿದೆಡೆ ಕಳ್ಳತನ ಮಾಡುತ್ತಿದ್ದ ಖತರ್‌ನಾಕ್ ಕಳ್ಳನನ್ನು ತಿ.ನರಸೀಪುರ ಠಾಣೆ ಪೋಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಹಳೇ ಕೆಸರೆ ನಿವಾಸಿ ಸೈಯದ್ ಸಲ್ಮಾನ್ ಅಲಿಯಾಸ್ ಕಬೂತರ್(35) ಬಂಧಿತ ಆರೋಪಿ. ಈತ ತಿ.ನರಸೀಪುರದ ಮೆಡಿಕಲ್ ಸ್ಟೋರ್, ದೇವಸ್ಥಾನದಲ್ಲಿ ಕಳ್ಳತನ ಮಾಡಿದ್ದು, ಈತನ ಮೇಲೆ ತಲಕಾಡು, ಬನ್ನೂರಲ್ಲಿ ತಲಾ 2, ಹೆಚ್.ಡಿ.ಕೋಟೆ, ಮೈಸೂರು ದೇವರಾಜ ಠಾಣಾ ವ್ಯಾಪ್ತಿ, ನೆಲಮಂಗಲದಲ್ಲಿ ತಲಾ ಒಂದು, ಮಂಡ್ಯದಲ್ಲಿ 2, ಚಿಕ್ಕಮಗಳೂರಲ್ಲಿ 4 ಸೇರಿದಂತೆ ಒಟ್ಟು 18 ಪ್ರಕರಣಗಳು ದಾಖಲಾಗಿವೆ. ಆರೋಪಿಯಿಂದ ಹೊಸ ಅಪಾಚೆ ಬೈಕ್, 40 ಸಾವಿರ ರೂ., ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತ್ತೊಬ್ಬ ಆರೋಪಿ ನಯಾಜ್ ಪರಾರಿಯಾಗಿದ್ದು, ಆತನ ಬಂಧನಕ್ಕೆ ಬಲೆ ಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿ ವಿಷ್ಣುವರ್ಧನ್ ಹಾಗೂ ಎಎಸ್‌ಪಿ ನಾಗೇಶ್, ಡಿವೈಎಸ್‌ಪಿ ರಘು ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಪಟ್ಟಣ ಠಾಣೆ ಪೊಲೀಸರು ಆರೋಪಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಪಿಐ ಧನಂಜಯ್, ಎಸ್‌ಐ ಜಗದೀಶ್ ಧೂಳ್ ಶೆಟ್ಟಿ, ಅಪರಾಧ ವಿಭಾಗದ ಸತೀಶ್, ಲತೀಫ್, ಅಶೋಕ್, ಭಾಸ್ಕರ್ ಮತ್ತು ಶಿವಸ್ವಾಮಿ ಭಾಗವಹಿಸಿದ್ದರು.

ಹರಿಜನ್ ಗೋಪಾಲ್ ಯಮ್ನಪ್ಪ



ಮೈಸೂರು, ಜೂ.8– ಡಾ. ಡಿ.ಆರ್.ಜಯಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಹರಿಜನ್ ಗೋಪಾಲ್ ಯಮ್ನಪ್ಪ ಹಿಂದಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ತರಬೇತಿ ಮುಗಿಸಿ ಬಂದ ಅಗ್ನಿವೀರ್‌ಗೆ ಸ್ವಾಗತ



ಅಗ್ನಿವೀರ್‌ಗೆ ಆಯ್ಕೆಯಾದ ಇರ್ಫಾನ್ ಅಬ್ದುಲ್‌ಗೆ ಅದ್ದೂರಿ ಸ್ವಾಗತ ಕೋರಲಾಯಿತು.

ನಂಜನಗೂಡು, ಜೂ.8– ನಗರದ ಚಾಮಲಾಪುರ ಬಡಾವಣೆಯ ನಿವಾಸಿ ಇರ್ಫಾನ್ ಅಬ್ದುಲ್ ಕಳೆದ ವರ್ಷ ಭಾರತೀಯ ಸೇನೆಯ ಅಗ್ನಿವೀರ್‌ಗೆ ಆಯ್ಕೆಯಾಗಿದ್ದು, ಸೇನಾ ತರಬೇತಿ ಮುಗಿಸಿ ನಗರಕ್ಕೆ ಆಗಮಿಸಿದ ಅವರಿಗೆ ಗೆಳೆಯರು ಅದ್ದೂರಿ ಸ್ವಾಗತ ಕೋರಿದರು.

ನಗರದ ದೇವರಾಜ ಅರಸ್ ಸೇತುವೆ ಬಳಿ ಹಾರ, ತುರಾಯಿ ಹಾಕಿ ಸ್ವಾಗತಿಸಿದ ಯುವಕರ ತಂಡ ನಂತರ ತ್ರಿವರ್ಣ ಧ್ವಜ ಹಿಡಿದು ಭಾರತ್ ಮಾತಾಕೀ ಜೈ ಎಂದು ಘೋಷಣೆ ಕೂಗುತ್ತಾ ತೆರೆದ ಜೀಪ್‌ನಲ್ಲಿ ರಾಷ್ಟ್ರಪತಿ ರಸ್ತೆ ಮೂಲಕ ಮೆರವಣಿಗೆ ನಡೆಸಿ, ಶ್ರೀಕಂಠೇಶ್ವರ ದೇವಾಲಯಕ್ಕೆ ಕರೆದೊಯ್ದು ಸಂಭ್ರಮಿಸಿದರು.

ದೇವಾಲಯದ ಮುಂಭಾಗ ಮಾತನಾಡಿದ ಇರ್ಫಾನ್ ಅಬ್ದುಲ್ಲಾ, ಸೇನೆ ಸಮವಸ್ತ್ರ ಧರಿಸುವುದು ನನ್ನ ಕನಸಾಗಿತ್ತು. ತಂದೆ ತಾಯಿ ಹಾಗೂ ಗೆಳೆಯರ ಸಹಕಾರದಿಂದ ಕನಸು ಸಾಕಾರಗೊಂಡಿದೆ. ಮೊದಲಿಗೆ ಜಮ್ಮು ಕಾಶ್ಮೀರಕ್ಕೆ ಪೋಸ್ಟ್ ಆಗಿರುವುದು ಸಂತೋಷವಾಗಿದೆ ಎಂದು ಹೇಳಿದರು.

ನಗರದಲ್ಲಿ ಅಗ್ನಿವೀರ್‌ಗೆ ಸೇರಲು ತರಬೇತಿ ನೀಡುವ ಸೂರಿ ಮಾತನಾಡಿ, ಸೇನೆಗೆ ಸೇರುವ ಬಯಸುವ ಯುವಕರಿಗೆ ದೈಹಿಕ ಪರೀಕ್ಷೆಗೆ ಅನುಕೂಲವಾಗುವಂತೆ ಉಚಿತ ತರಬೇತಿ ನೀಡುತ್ತಿದ್ದೇನೆ. ಈಗ ನಮ್ಮ ತಂಡದ ಒಬ್ಬ ಯುವಕ ಸೇನೆಗೆ ಆಯ್ಕೆಯಾಗಿದ್ದಾನೆ. ಮುಂದಿನ ತಿಂಗಳು ಸೈನ್ಯಕ್ಕೆ ಸೇರುವ ನಡೆಯುವ ರ್‍ಯಾಲಿಯಲ್ಲಿ ನಂಜನಗೂಡಿನ ಮತ್ತಷ್ಟು ಯುವಕರು ಅಗ್ನಿವೀರರಾಗುವ ಭರವಸೆ ಇದೆ ಎಂದರು.

ಕೋಟೆಯಲ್ಲಿ ವಾಹನ ಚಾಲಕರಿಗೆ ಕಾನೂನು ಅರಿವು



ಪೊಲೀಸ್ ಇಲಾಖೆಯಿಂದ ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಜೂ.8– ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಅರಣ್ಯ ಇಲಾಖೆ ಆವರಣದಲ್ಲಿ ಪೊಲೀಸ್ ಇಲಾಖೆಯಿಂದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮಗಳ ಕುರಿತು ಪಟ್ಟಣ ಹಾಗೂ ಹ್ಯಾಂಡ್ ಪೋಸ್ಟ್‌ಗಳ ಖಾಸಗಿ ವಾಹನ ಚಾಲಕರು, ಮಾಲೀಕರಿಗೆ ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸರ್ಕಲ್ ಇನ್‌ಸ್ಪೆಕ್ಟರ್ ಗಂಗಾಧರ್ ಮಾತನಾಡಿ, ಚಾಲಕರು ತಮ್ಮ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸಬಾರದು. ಎಲ್ಲರೂ ಕಡ್ಡಾಯವಾಗಿ ವಾಹನಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮತ್ತು ಚಾಲನಾ ಪರವಾನಗಿ ಹೊಂದಿರಬೇಕು. ಚಾಲಕರು ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸಬೇಕು ಎಂದು ಸಲಹೆ ನೀಡಿದರು.

ಪ್ರಯಾಣಿಕರೊಂದಿಗೆ ವಾಹನ ಚಾಲಕರು ಸೌಜನ್ಯದಿಂದ ವರ್ತಿಸಬೇಕು. ಇದನ್ನು ಉಲ್ಲಂಘಿಸಿದಲ್ಲಿ ಕಡ್ಡಾಯವಾಗಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು. ಈ ವೇಳೆ ಎಸ್‌ಐಗಳಾದ ಚಿಕ್ಕನಾಯಕ, ಸುರೇಶ ನಾಯಕ, ಗೌರಿಶಂಕರ್, ಸಿಬ್ಬಂದಿ ಮಹದೇವ ಸ್ವಾಮಿ, ಯೋಗೇಶ್, ಖಾಸಗಿ ವಾಹನಗಳು, ಆಟೋ, ಗೂಡ್ಸ್ ವಾಹನಗಳು, ಜೀಪ್‌ಗಳು, ಕಾರುಗಳ ಸಂಘಗಳ ಮುಖಂಡರು ಹಾಜರಿದ್ದರು.

ನಾಗರಹೊಳೆಯಲ್ಲಿ ಆನೆಗಳ ಕಾದಾಟ: ಮಕನಾ ಆನೆಗೆ ಗಾಯ



ಹುಣಸೂರು, ಜೂ.8– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಾಗರಹೊಳೆ ವನ್ಯಜೀವಿ ವಲಯ ವ್ಯಾಪ್ತಿಯ ಹೊಸಕೆರೆ ಅರಣ್ಯ ವ್ಯಾಪ್ತಿಯಲ್ಲಿ ಮತ್ತೊಂದು ಗಂಡಾನೆ ಜೊತೆ ಕಾದಾಡಿ ಗಾಯಗೊಂಡಿದ್ದ ಮಕನಾ ಆನೆಗೆ ಭಾನುವಾರ ಚಿಕಿತ್ಸೆ ನೀಡಲಾಯಿತು.

ನಾಗರಹೊಳೆ ಪಶುವೈದ್ಯಾಧಿಕಾರಿಗಳಾದ ಡಾ.ರಮೇಶ್, ಡಾ.ಚೆಟ್ಟಿಯಪ್ಪ ಗಾಯಗೊಂಡಿದ್ದ ಆನೆಗೆ ಚಿಕಿತ್ಸೆ ನೀಡಿದರು. ದುಬಾರೆ ಡಿಆರ್‌ಎಫ್‌ಓ ರಂಜನ್ ಮಕನಾ ಆನೆಯನ್ನು ಸೆರೆಹಿಡಿಯಲು ನೆರವಾದರು. ನಾಗರಹೊಳೆ ಎಸಿಎಫ್ ಅನನ್ಯ ಕುಮಾರ್, ಆರ್‌ಎಫ್‌ಓ ಮಂಜುನಾಥ್, ಡಿಆರ್‌ಎಫ್‌ಒಗಳಾ ನವೀನ್ ರೌತ್, ಮಧುಸೂದನ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಮತ್ತಿಗೋಡು ಸಾಕಾನೆ ಶಿಬಿರದ ಸಾಕಾನೆಗಳಾದ ಭೀಮ ಹಾಗೂ ಮಹೇಂದ್ರ ಮಕನಾ ಆನೆಯನ್ನು ಸೆರೆ ಹಿಡಿಯುವಲ್ಲಿ ನೆರವಾದವು. ಚಿಕಿತ್ಸೆಯ ನಂತರ ಮಕನಾ ಆನೆಯನ್ನು ಕಾಡಿಗೆ ಬಿಡಲಾಯಿತು.

ವಿಜೃಂಭಣೆಯ ದೊಡ್ಡಮ್ಮ, ಚಿಕ್ಕಮ್ಮ ತಾಯಿ ಕೊಂಡೋತ್ಸವ



ಬೆಟ್ಟದಪುರ, ಜೂ.8– ಇಲ್ಲಿಗೆ ಸಮೀಪದ ಕೂರುಗಲ್ಲು ಗ್ರಾಮದಲ್ಲಿ ಗ್ರಾಮದೇವತೆ ದೊಡ್ಡಮ್ಮ ತಾಯಿ, ಚಿಕ್ಕಮ್ಮತಾಯಿ ಪೂಜಾ ಮಹೋತ್ಸವ ಹಾಗೂ ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪೂಜಾ ಮಹೋತ್ಸವ ಅಂಗವಾಗಿ ಗ್ರಾಮದ ಬೀದಿಗಳು, ದೇವಾಲಯವನ್ನು ಬಗೆ ಬಗೆಯ ಹೂ, ವಿದ್ಯುತ್ ದೀಪ ಹಾಗೂ ತಳಿರು ತೋರಣ ಮತ್ತು ಕೇಸರಿ ಬಾವುಟಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ಮುಂಜಾನೆಯೇ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. 15 ವರ್ಷಗಳ ಬಳಿಕ ನಡೆದ ಹಬ್ಬಕ್ಕೆ ವಿವಿಧೆಡೆಗಳಿಂದ ಹೆಚ್ಚಿನ ಮಂದಿ ಆಗಮಿಸಿದ್ದರು.

ಸುತ್ತೂರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಕ್ಕೆ

ಅಮೆರಿಕಾ ಮೂಲದ ಕೃಷಿ ವಿಜ್ಞಾನಿಗಳು ಭೇಟಿ



ಅಮೆರಿಕಾ ಮೂಲದ ಕೃಷಿ ವಿಜ್ಞಾನಿಗಳು ದೇವನೂರಲ್ಲಿ ನಡೆದ ವಿಕಸಿತ ಸಂಕಲ್ಪ ಕೃಷಿ ಅಭಿಯಾನದ ಸಂವಾದದಲ್ಲಿ ಭಾಗಿಯಾದರು.

ನಂಜನಗೂಡು, ಜೂ.8– ತಾಲೂಕಿನ ಸುತ್ತೂರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಕ್ಕೆ ಅಮೆರಿಕಾ ಮೂಲದ ಕೃಷಿ ವಿಜ್ಞಾನಿಗಳು ಭೇಟಿ ನೀಡಿ ವಿಕಸಿತ ಸಂಕಲ್ಪ ಕೃಷಿ ಅಭಿಯಾನದ ಬಗ್ಗೆ ಮಾಹಿತಿ ಪಡೆದು ದೇವನೂರು ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯ ರೈತರೊಂದಿಗೆ ಸಂವಾದದಲ್ಲಿ ಭಾಗಿಯಾದರು.

ಅಮೆರಿಕಾದ ಶೈಕ್ಷಣಿಕ ವ್ಯವಹಾರಗಳ ಉಪಾಧ್ಯಕ್ಷ ಮತ್ತು ಪ್ರಾಧ್ಯಾಪಕ ಡಾ.ಸ್ಕಾಟ್ ಹೆರಿಯಟ್ ಹಾಗೂ ಮಹರ್ಷಿ ಅಂತರರಾಷ್ಟ್ರೀಯ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಷಯ ಸಂಶೋಧಕ ಬರ್ನಾಡ್ ಮಾರ್ಕಸ್ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಜೆಎಸ್‌ಎಸ್ ಕೆವಿಕೆಯ ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಶ್‌ರಿಂದ ಕೆವಿಕೆಯ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ಪಡೆದರು. ಬಳಿಕ ಕೆವಿಕೆ ಆವರಣದಲ್ಲಿರುವ ಪ್ರಾತ್ಯಕ್ಷಿಕಾ ತಾಕುಗಳಿಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ನಂಜನಗೂಡು ತಾಲೂಕಿನ ದೇವನೂರು ಗ್ರಾಮದಲ್ಲಿ ನಡೆಯುತ್ತಿದ್ದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮದಲ್ಲಿ ಭಾಗಿಯಾಗಿ ರೈತರೊಂದಿಗೆ ಸಂವಾದ ನಡೆಸಿದರು.

ಕೆವಿಕೆಯ ಡಾ.ವಿನಯ್ ಮಾತನಾಡಿ, ಮುಂಗಾರು ಹಂಗಾಮಿಗೆ ರೈತರು ಭೂಮಿ ಸಿದ್ಧತೆ, ಮಾಗಿ ಉಳುಮೆ, ಹಸಿರೆಲೆ ಗೊಬ್ಬರಗಳಾದ ಸೆಣಬು, ಡೈಯಂಚ, ನಸುಗುನ್ನಿ ಕಾಯಿ ಹಾಗೂ ಇತರ ಹಸಿರೆಲೆ ಗೊಬ್ಬರಗಳನ್ನು ಭೂಮಿಗೆ ನೀಡಬೇಕು. ತಿಪ್ಪೆ ಗೊಬ್ಬರದ ಬಳಕೆ ಜೊತೆ ಟ್ರೈಕೊಡರ್ಮ, ಸೂಡೋಮೊನಾಸ್, ಮೆಟಹೈಜಿಯಂ ಬಳಕೆ, ಎರೆಹುಳು ಗೊಬ್ಬರಗಳ ಬಳಕೆ ಮಾಡಬೇಕು. ಜೊತೆಗೆ ಸುಧಾರಿತ ತಳಿಗಳ ಆಯ್ಕೆ ಕುರಿತು ಮಾಹಿತಿ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ಡಾ.ಪ್ರಸಾದ್ ಬಾಳೆಯಲ್ಲಿ ಬರುವ ಪನಾಮಾ ರೋಗ, ಎಲೆ ಚುಕ್ಕೆ ರೋಗಗಳ ಸಮಗ್ರ ಜೈವಿಕ ನಿರ್ವಹಣೆ, ನೇಂದ್ರ ಬಾಳೆಯಲ್ಲಿ ಬರುವ ಕಾಂಡ ಕೊರೆಯುವ ಹುಳದ ಸಮಗ್ರ ನಿರ್ವಹಣೆ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿಗಳಾದ ಡಾ.ಸುಜಾತ ನಾಯರ್, ಅನುರಾಧ ಸಾನೆ, ಕೃಷಿ ಇಲಾಖೆಯ ಆತ್ಮ ಯೋಜನೆಯ ತಾಲೂಕು ತಾಂತ್ರಿಕ ವ್ಯವಸ್ಥಾಪಕ ಶಿವಣ್ಣ, ಕೆವಿಕೆಯ ಬೇಸಾಯಶಾಸ್ತ್ರದ ವಿಷಯ ತಜ್ಞ ಶಾಮರಾಜ್ ಇತರರಿದ್ದರು.

ನಾಳೆ ಸೌರನರಸಿಂಹ ಜಯಂತೋತ್ಸವ

ತಿ.ನರಸೀಪುರ, ಜೂ.8– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಜೂ.10ರಂದು ಸ್ವಾಮಿಯವರ ಸೌರನರಸಿಂಹ ಜಯಂತೋತ್ಸವ ನಡೆಯಲಿದೆ. ಸೌರಮಾನ ನರಸಿಂಹ ಜಯಂತಿ ಪ್ರಯುಕ್ತ ಬೆಳಗ್ಗೆ 10 ಗಂಟೆಗೆ ಗೋಪೂಜೆ, ಅಭಿಷೇಕ, ಮಧ್ಯಾಹ್ನ 12 ಗಂಟೆಗೆ ಅಲಂಕಾರ, ಮಹಾ ಮಂಗಳಾರತಿ, ಶಾತ್ತುಮುರೈ ಹಾಗೂ ಸಂಜೆ 4.30ಕ್ಕೆ ತಿರುವೀದಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 10 ಗಂಟೆ ನಂತರ ಗೋ ಪೂಜೆ ನಡೆಸಿ, ಗೋವುಗಳಿಗೆ ಉಚಿತ ಮೇವು ನೀಡಲಾಗುತ್ತದೆ ಎಂದು ಜಯಂತೋತ್ಸವ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣಿ ನಿಧನ



ಹೆಚ್.ಡಿ.ಕೋಟೆ, ಜೂ.8– ತಾಲೂಕಿನ ದೇವಲಾಪುರ ಗ್ರಾಮದ ನಿವಾಸಿ, ಛಾಯಾಗ್ರಾಹಕ ಮಣಿ (40) ಭಾನುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಂತ್ಯಕ್ರಿಯೆಯಲ್ಲಿ ಹೆಚ್.ಡಿ. ಕೋಟೆ, ಸರಗೂರು, ಛಾಯಾಗ್ರಾಹಕರ ಸಂಘದ ಸದಸ್ಯರು ಭಾಗವಹಿಸಿದ್ದರು.

ಬಸವ ಆರಾಧ್ಯ



ಹೆಚ್.ಡಿ.ಕೋಟೆ, ಜೂ.8– ತಾಲೂಕಿನ ಹೊಸಬಿದರಹಳ್ಳಿ ಗ್ರಾಮದ ನಿವಾಸಿ ಬಸವ ಆರಾಧ್ಯ(82) ಭಾನುವಾರ ಮೈಸೂರಿನ ಗೆಜ್ಜಗಳ್ಳಿಯಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಗೆಜ್ಜಗಳ್ಳಿಯಲ್ಲಿ ನೆರವೇರಿಸಲಾಗುವುದು.

ಮೈಸೂರು ವಿಭಾಗದ ರೈಲ್ವೆ ಕಾಮಗಾರಿಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿ, ಹೊಂದಾಣಿಕೆ ಬೇಡ

ಮೈಸೂರು ವಿಭಾಗೀಯ ಮಟ್ಟದ ಕಾಮಗಾರಿಗಳ ಮಾಹಿತಿ ಪಡೆದ ಬಳಿಕ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸಲಹೆ

ಮೈಸೂರು, ಜೂ.8(ಜಿಎ)–ಮೈಸೂರಿನ ವಿಭಾಗದಲ್ಲಿ ನಡೆಯುತ್ತಿರುವ ರೈಲ್ವೆ ಕಾಮಗಾರಿಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿ. ಎಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳಬೇಡಿ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಸಲಹೆ ನೀಡಿದ್ದಾರೆ.

ಮೈಸೂರಿನ ರೈಲ್ವೆ ಡಿಆರ್‌ಎಂ ಕಚೇರಿಯಲ್ಲಿ ಮೈಸೂರು ವಿಭಾಗೀಯ ರೈಲ್ವೆ ಪ್ರಬಂಧಕರು ಹಾಗೂ ಇತರ ಅಧಿಕಾರಿಗಳೊಂದಿಗೆ ವಿಮರ್ಶಾ ಸಭೆ ನಡೆಸಿ ಮೈಸೂರಿನ ವಿಭಾಗೀಯ ಮಟ್ಟದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅವರು ಮಾತನಾಡಿದರು.

ಡಿಆರ್‌ಎಂ ಮುದಿತ್ ಮಿಥಲ್ ಕಾಮಗಾರಿಗಳ ಬಗ್ಗೆ ವಿವರಿಸಿ, ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ 439.3 ಕೋಟಿ ರೂ. ವೆಚ್ಚದಲ್ಲಿ ಹೆಚ್ಚುವರಿಯಾಗಿ ಐದು ಪ್ಲಾಟ್‌ಫಾರಂಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕಾಗಿ ಸಬ್ ವೇ, ಸ್ಕೈವಾಕ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಮಾಡಿಕೊಡಲಾಗುತ್ತಿದೆ. ಸಿಬ್ಬಂದಿಗಳ ಕ್ವಾರ್ಟರ್ಸ್ ನಿರ್ಮಾಣ ಸಹ ಮಾಡಲಾಗುತ್ತಿದೆ. ಅದರ ಕಾಮಗಾರಿ ಪ್ರಗತಿಯಲ್ಲಿದೆ ಎಂದು ವಿವರಿಸಿದರು.

ಮತ್ತೊಂದೆಡೆ ನಾಗನಹಳ್ಳಿ ಯಾರ್ಡ್‌ಗಾಗಿ 8 ಎಕರೆ 29 ಕುಂಟೆ ಜಾಗವನ್ನು ಪತ್ತೆ ಮಾಡಲಾಗಿದೆ. ಆದರೆ ಅದಕ್ಕೆ ಭೂ ಸ್ವಾಧೀನದ ತೊಡಕು ಉಂಟಾಗಿದ್ದು, ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಇಂಗ್ಲಿಷ್‌ನಲ್ಲಿ ವಿವರಿಸಿದರು.

ಮಾಹಿತಿಗಳನ್ನು ಆಲಿಸಿದ ನಂತರ ಮಾತನಾಡಿದ ವಿ.ಸೋಮಣ್ಣ, ದೇಶದ ವಿವಿಧ ರಾಜ್ಯಗಳಿಂದ ಕರ್ನಾಟಕಕ್ಕೆ ಕಾರ್ಯನಿರ್ವಹಿಸಲು ಬಂದು ಹಲವಾರು ವರ್ಷವಾಗಿದ್ದರೂ ಏಕೆ ಕನ್ನಡ ಕಲಿತಿಲ್ಲ. ಆದಷ್ಟೂ ಬೇಗ ಕನ್ನಡ ಕಲಿತುಕೊಳ್ಳಿ. ನಾನು ಮೂರು ತಿಂಗಳಿನಲ್ಲಿ ಹಿಂದಿ ಕಲಿತು ಎಲ್ಲಾ ಕಡೆ ಹಿಂದಿಯಲ್ಲಿ ಮಾತನಾಡುತ್ತಿದ್ದೇನೆ. ಕನ್ನಡ ಕಲಿತುಕೊಂಡರೆ ಒಳಿತು ಎಂದು ತಮ್ಮ ಕನ್ನಡದ ಪ್ರೀತಿ ತೋರಿದರು.

ಜೂ.6ರಂದು ವಿಶ್ವದ ಭೂಪಟದಲ್ಲಿ ಭಾರತದ ಅಭಿವೃದ್ಧಿಯ ಸಂಕೇತವಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ರೈಲನ್ನು ಚಾಲನೆ ಮಾಡುವ ಕನಸನ್ನು ಪ್ರಧಾನ ಮಂತ್ರಿಗಳು ಮತ್ತು ರೈಲ್ವೆ ಮಂತ್ರಿಗಳು ಲೋಕಾರ್ಪಣೆ ಮಾಡಿ ನನಸಾಗಿಸಿದ್ದಾರೆ. ಇದು ದೇಶದಲ್ಲಿಯೇ ಒಂದು ಐತಿಹಾಸಿಕ ದಿನವಾಗಿದೆ ಈ ಬ್ರಿಡ್ಜ್ ಚೈನ ಬ್ರಿಡ್ಜ್‌ಗೂ ಕಮ್ಮಿ ಇಲ್ಲ. ಒಮ್ಮೆ ಭೇಟಿ ಕೊಟ್ಟು ನೋಡಿ ಎಂದರು.

ರೈಲ್ವೆ ಇಲಾಖೆಯಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳು ತ್ವರಿತವಾಗಿ ನಡೆಯಬೇಕು. ಅದಕ್ಕೆ ಯಾವುದೇ ಸಹಕಾರ ಬೇಕಿದ್ದರೂ ಕೇಳಿ ನೀಡುತ್ತೇನೆ. ಕ್ವಾರ್ಟರ್ಸ್‌ಗೆ ಪ್ರಧಾನಮಂತ್ರಿಗಳು ಚಾಲನೆ ನೀಡಿದ್ದು ಇನ್ನೂ ಏಕೆ ತಡವಾಗಿದೆ ಶೀಘ್ರವಾಗಿ ಕಾಮಗಾರಿ ಮುಗಿಸಿ, ಭೂ ಸ್ವಾಧೀನದ ವಿಚಾರವಾಗಿ ನಾನು ಕರ್ನಾಟಕ ಸರ್ಕಾರದೊಂದಿಗೆ ಮಾತನಾಡುತ್ತೇನೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಕೆಲಸಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಜೋಡಿಸಿ ಸಹಕಾರ ನೀಡುತ್ತಿದ್ದಾರೆ. ಹಾಗೆ ಪ್ರಧಾನಮಂತ್ರಿ ಮೋದಿ ಅವರಿಗೆ ರೈಲ್ವೆ ಇಲಾಖೆ ಬಗ್ಗೆ ಸಾಕಷ್ಟು ದೂರದೃಷ್ಟಿ ಇದ್ದು, ಇಲಾಖೆ ವತಿಯಿಂದ 39 ಸಾವಿರ ಕೋಟಿ ರೂ. ವೆಚ್ಚದ 13 ಯೋಜನೆ ನಡೆಯುತ್ತಿದೆ. ಪ್ರಮುಖವಾಗಿ ರಾಯದುರ್ಗ ಮತ್ತು ತುಮಕೂರು, ತುಮಕೂರು ಮತ್ತು ದಾವಣಗೆರೆ, ಕುಡುಚಿ ಮತ್ತು ಗದಗ ಸೇರಿದಂತೆ ಅನೇಕ ಯೋಜನೆಗಳು ನಡೆಯುತ್ತಿವೆ. 25 ವರ್ಷಗಳಿಂದ ಹಿಂದೆ ಉಳಿದಿರುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ತುಮಕೂರಿನಲ್ಲಿ ವಿಕಸಿತ ಭಾರತದಡಿ ಗ್ರೀನ್ ಕಾರಿಡಾರ್ ಮಾಡುತ್ತಿದ್ದೇವೆ. ಎಲ್ಲಿ ಕಾರ್ಖಾನೆಗಳಿವೆ ಅಲ್ಲಿ ರೈಲ್ವೆ ಹಳಿಗಳನ್ನು ಅಳವಡಿಸಿ ಗೂಡ್ಸ್ ಟ್ರಾನ್ಸ್‌ಪೋರ್ಟೇಷನ್‌ಗೆ ಒತ್ತು ನೀಡಲಾಗುತ್ತಿದೆ. ಇದರಿಂದ ಟ್ರಾನ್ಸ್‌ಪೋರ್ಟೇಷನ್ ವೆಚ್ಚವೂ ಕಡಿಮೆ ಆಗಲಿದೆ. 40 ವರ್ಷ ಇಲ್ಲಿ ಏನು ಸೇವೆ ಮಾಡಿದ್ದೆ ಅದನ್ನು ಕೇವಲ 1.5 ವರ್ಷದಲ್ಲಿ ಮಾಡಿದ್ದೇನೆ. ದೇಶದ ಅಭಿವೃದ್ಧಿಯ ಸಂಕೇತ ರೈಲ್ವೆ ಎಂಬುದನ್ನು ತೋರಿಸಿಕೊಡಲಾಗುತ್ತಿದೆ.

ಎಲ್ಲಾ ಕಡೆಯೂ ಉತ್ತಮವಾಗಿ ಕೆಲಸಗಳು ನಡೆಯುತ್ತಿವೆ. ಯಾದಗಿರಿಯಲ್ಲಿ ಖರ್ಗೆ ಅವರು ಬೋಗಿ ಕಾರ್ಖಾನೆ ಮಾಡಿದ್ದರೂ ಅಲ್ಲಿ 50 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಈಗ ಅಲ್ಲಿ 200 ಕೋಟಿ ಅನುದಾನ ನೀಡಿ ದೊಡ್ಡ ಮಟ್ಟದಲ್ಲಿ ಮಾಡುವಂತೆ ಕಾರ್ಯ ಆರಂಭಿಸಲಾಗಿದೆ. ಕರ್ನಾಟಕದಲ್ಲಿ ಅರ್ಧದಲ್ಲಿ ನಿಂತಿರುವ ಕೆಳ ಸೇತುವೆಗಳ ಕಾಮಗಾರಿಯನ್ನು ಪಕ್ಷಾತೀತ, ಜಾತ್ಯಾತೀತವಾಗಿ ಮಾಡಲಾಗುತ್ತದೆ.



ಮೈಸೂರಿನ ರೈಲ್ವೆ ಡಿಆರ್‌ಎಂ ಕಚೇರಿಯಲ್ಲಿ ಮೈಸೂರು ವಿಭಾಗೀಯ ರೈಲ್ವೆ ಪ್ರಬಂಧಕರು ಹಾಗೂ ಇತರ ಅಧಿಕಾರಿಗಳೊಂದಿಗೆ ವಿಮರ್ಶಾ ಸಭೆ ನಡೆಸಿ ಮೈಸೂರಿನ ವಿಭಾಗೀಯ ಮಟ್ಟದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳ ಬಗ್ಗೆ ರಾಜ್ಯ ಸಚಿವ ವಿ.ಸೋಮಣ್ಣ ಮಾಹಿತಿ ಪಡೆದುಕೊಂಡರು.

ಚಾಮರಾಜನಗರ–ಹೆಜ್ಜಾಲ, ಮೈಸೂರು–ಕುಶಾಲನಗರದ ರೈಲ್ವೆ ಮಾರ್ಗ ಮಾಡಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿತ್ತು. ಆದರೆ, ನಾನು ಪತ್ರ ಬರೆದು ಒತ್ತಡ ಹಾಕಿದ್ದೇನೆ. ಚಾಮರಾಜನಗರದ ಸಂಸದ ಸುನೀಲ್ ಬೋಸ್ ಹಾಗೂ ಅವರ ತಂದೆ ಡಾ.ಹೆಚ್.ಸಿ. ಮಹದೇವಪ್ಪರಿಗೂ ಹೇಳಿದ್ದೇನೆ. ಆದರೂ ಏನೂ ಪ್ರಯೋಜನವಾಗಿಲ್ಲ. 15 ದಿನದೊಳಗೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತೇನೆ. ಹಾಗೇ ಮೈಸೂರು–ಚಾಮರಾಜನಗರದ ಎಲೆಕ್ಟ್ರಿಕಲ್ ಮಾರ್ಗದಲ್ಲಿ ರೈಲು ಚಾಲನೆಗೆ ಇರುವ ಸಮಸ್ಯೆ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರವಾಗಿ ಬಗೆಹರಿಸುತ್ತೇನೆ.

-ವಿ.ಸೋಮಣ್ಣ, ಕೇಂದ್ರ ಸಚಿವ

ಹುಬ್ಬಳ್ಳಿ ಅಲ್ಲ, ಕಾಶ್ಮೀರಕ್ಕೆ ಕಳುಹಿಸುತ್ತೇನೆ

ರೈಲ್ವೆ ಇಲಾಖೆಯಲ್ಲಿರುವ ಅಧಿಕಾರಿಯೊಬ್ಬರು ಇತ್ತೀಚೆಗೆ ಮಹಿಳೆಯೊಟ್ಟಿಗೆ ಮಾತನಾಡುವ ಸಂದರ್ಭದಲ್ಲಿ ಗೌರವ ನೀಡದೇ ಮಾತನಾಡಿರುವುದು ಸೋಮಣ್ಣ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಗೆ ಯಾರೂ ಅನಿವಾರ್ಯವಲ್ಲ. ಆದರೆ ರೈಲ್ವೇ ಇಲಾಖೆ ಎಲ್ಲರಿಗೂ ಅನಿವಾರ್ಯ. ಮಹಿಳಾ ಅಧಿಕಾರಿಗಳೊಟ್ಟಿಗೆ ಯಾರೇ ಮಾತನಾಡಿದರು ಸೌಜನ್ಯದಿಂದ ವರ್ತಿಸಿ, ಗೌರವಕೊಟ್ಟು ಮಾತನಾಡಿ ಎಂದು ಸಲಹೆ ನೀಡಿ ಅವರನ್ನು ತರಾಟೆ ತೆಗೆದುಕೊಂಡರು. ನೀವು ತಪ್ಪು ಮಾಡಿದರೆ, ಹುಬ್ಬಳಿ ಅಲ್ಲ ಕಾಶ್ಮೀರಕ್ಕೆ ಕಳುಹಿಸುತ್ತೇನೆ ಎಂದು ಎಚ್ಚರಿಸಿದರು.

ಸಿದ್ದರಾಮಯ್ಯ ಪಟಾಲಂ ಪಾಪಕ್ಕೆ ಪೊಲೀಸರ ಅಮಾನತು ಸರಿಯಲ್ಲ

ಕೇಂದ್ರ ರೈಲ್ವೆ ಸಚಿವ ಸೋಮಣ್ಣ ವಾಗ್ದಾಳಿ

ಮೈಸೂರು, ಜೂ.8(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಪಟಾಲಂ ಮಾಡಿದ ಪಾಪದ ಕೆಲಸಕ್ಕೆ ಪೊಲೀಸರನ್ನು ಅಮಾನತು ಮಾಡಿದ್ದು ಸರಿಯಲ್ಲ ಎಂದು ರಾಜ್ಯ ಸರ್ಕಾರದ ನಡೆಯನ್ನು ಕೇಂದ್ರ ಸಚಿವ ವಿ. ಸೋಮಣ್ಣ ವಿರೋಧಿಸಿದ್ದಾರೆ.

ಮೈಸೂರಿನ ರೈಲ್ವೆ ಕಚೇರಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಪೊಲೀಸರು ನೈತಿಕತೆಯ ಭಾಗವಾಗಿ ಕೆಲಸ ಮಾಡುತ್ತಿದ್ದಾರೆ. ದಯಾನಂದ್ ದಕ್ಷ ಅಧಿಕಾರಿ. ಅಂತಹವರ ಅಮಾನತು ಸರಿಯಲ್ಲ. ನಿಮ್ಮ ಪಟಾಲಂ ಪಾಪಕ್ಕೆ ಅವರನ್ನು ಗುರಿ ಮಾಡಿರುವುದು ಮಹಾ ಅಪರಾಧ. ಇದಕ್ಕೆ ಬೆಲೆ ತೆತ್ತದಿದ್ದರೆ ಜನರೇ ಪಾಠ ಕಲಿಸುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಎಚ್ಚರಿಸಿದರು.

18 ವರ್ಷದ ನಂತರ ಆರ್‌ಸಿಬಿ ಗೆದ್ದ ಗೆಲುವಿನ ಗಾಂಭೀರ್ಯತೆ ಅರ್ಥಮಾಡಿಕೊಳ್ಳದೇ ಕರ್ನಾಟಕದ ಮರ್ಯಾದೆ ಹಾಳು ಮಾಡಿದ್ದೀರಿ. ಜನರಲ್ಲಿ ನೋವು ತಂದಿದ್ದೀರಿ. ದೇಶದಲ್ಲಿ ಸಾವಿರಾರು ವರ್ಷಗಳ ಇತಿಹಾಸ ಮರುಕಳಿಸುವಂತೆ ಪ್ರಧಾನ ಮಂತ್ರಿಗಳು ಕಾರ್ಯ ಮಾಡುತ್ತಿದ್ದಾರೆ. ಆದರೆ, ನೀವು ಅಸಹ್ಯ ಘಟನೆಗಳನ್ನು ಮಾಡುತ್ತಿದ್ದೀರಿ. ರಾಜ್ಯದ ಜನರಿಗೆ ಯಾವ ರೀತಿ ಸಹಾಯ ಮಾಡುತ್ತೀರಾ ಮಾಡಿ. ನೀವು ಮಾಡಿರುವ ಪಾಪಗಳಿಗೆ ಯಾವ ರೀತಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೀರಾ. ಇನ್ನಾದರೂ ನಿಮ್ಮ ನಡವಳಿಕೆ ಬದಲಿಸಿಕೊಳ್ಳಿ ಎಂದರು.

ರಾಜ್ಯದಲ್ಲಿರುವುದು ಹಳಿ ತಪ್ಪಿದ ಸರ್ಕಾರ. ಟ್ರ್ಯಾಕ್ ಇಲ್ಲದೆಯೇ ಓಡುತ್ತಿದೆ. ಅವರ ಒಳ ಒಪ್ಪಂದ ಹೇಗಿದೆಯೋ ಗೊತ್ತಿಲ್ಲ. ಕಾಂಗ್ರೆಸ್ ಸಿದ್ದರಾಮಯ್ಯರಿಗೆ ಕೊಟ್ಟಷ್ಟು ಫ್ರೀ ಹ್ಯಾಂಡ್ ಇನ್ನೊಬ್ಬರಿಗೆ ಕೊಟ್ಟಿಲ್ಲ. ಅವರ ವಿವೇಕಕ್ಕೆ ಏನಾಗಿದೆಯೋ ಗೊತ್ತಿಲ್ಲ. ಅಧಿಕಾರಕ್ಕೆ ಜೋತು ಬೀಳದೇ ನೈತಿಕತೆಯಿಂದ ಹೊಣೆ ಹೊರಬೇಕು ಎಂದು ಆಗ್ರಹಿಸಿದರು.

ತಪ್ಪು ಮಾಡಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಪೊಲೀಸ್ ಇಲಾಖೆಯ ನೈತಿಕತೆ ಕುಗ್ಗಿಸಿದೆ. ಗುಪ್ತಚರ ಇಲಾಖೆ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದ ದಕ್ಷ ಅಧಿಕಾರಿಗಳನ್ನು ಅಮಾನತು ಮಾಡಿದ್ದೀರಾ. ರಾಜ್ಯ ಸರ್ಕಾರ ಇದರಿಂದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡಲು ಮುಂದಾಗಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರದ ಪರಿಹಾರ ಕುರಿತು ಮಾತನಾಡಿ, ಸರ್ಕಾರ ಪರಿಹಾರದ ಮೊತ್ತ ಎಷ್ಟು ಕೊಟ್ಟರು ಸಾಲದು, ಸರ್ಕಾರದ ಬಜೆಟ್ ಕೊಟ್ಟರೂ ಪರಿಹಾರ ಕಡಿಮೆ. ಮಕ್ಕಳ ಭವಿಷ್ಯ ಕಂಡು ಇವರು ತೀರ್ಮಾನ ಮಾಡಬೇಕು ಎಂದು ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ಶ್ರೀರಾಂಪುರದಲ್ಲಿರುವ ಜೈನ್ ಸಂಸ್ಥೆಯ ಮಹಾವೀರ್ ವಿದ್ಯಾಮಂದಿರದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಮುಖ್ಯ ಅತಿಥಿಗಳಾಗಿ ಸ್ನೇಕ್ ಶ್ಯಾಮ್ ಭಾಗವಹಿಸಿ ಗಿಡ ನೆಡುವ ಮೂಲಕ ಮಕ್ಕಳನ್ನು ಕುರಿತು ಪರಿಸರ ಸಂರಕ್ಷಣೆ ಬಗ್ಗೆ ಕೆಲವು ಮಾಹಿತಿ ನೀಡಿದರು. ಸಂಸ್ಥೆಯ ಉಪಾಧ್ಯಕ್ಷ ಸುರೇಶ್ ಎಚ್, ಪ್ರಾಂಶುಪಾಲರಾದ ಅನಿತಾ ಡಿ, ಉಪ ಪ್ರಾಂಶುಪಾಲರಾದ ಆಶಾ.ಎಸ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಉಪ್ಪಾರ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿನಿ ಯಶಸ್ವಿನಿಗೆ ಅಭಿನಂದನೆ

ಮೈಸೂರಿನ ಶ್ರೀ ಭಗೀರಥ ಉಪ್ಪಾರ ಸೇವಾ ಸಂಘದ ವತಿಯಿಂದ ನಾಯ್ಡುನಗರದ ನಿವಾಸಿ ಆಟೋರಿಕ್ಷಾ ಚಾಲಕ ಶ್ರೀಕಂಠ ಅವರ ಪುತ್ರಿ ಪ್ರತಿಭಾನ್ವಿತ ವಿದ್ಯಾರ್ಥಿನಿ ಎಸ್.ಯಶಸ್ವಿನಿ ಅವರನ್ನು ಸನ್ಮಾನಿಸಿ, ಆರ್ಥಿಕ ನೆರವಿನ ಚೆಕ್ ಹಾಗೂ ಪ್ರಶಂಸನಾ ಪತ್ರ ವಿತರಿಸಲಾಯಿತು.



ಮೈಸೂರು, ಜೂ.8(ಎಂಟಿವೈ)–ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 601 ಅಂಕ ಪಡೆದಿದ್ದ ಉಪ್ಪಾರ ಸಮುದಾಯದ ವಿದ್ಯಾರ್ಥಿನಿ ಎಸ್.ಯಶಸ್ವಿನಿ ಅವರಿಗೆ ಉನ್ನತ ಶಿಕ್ಷಣಕ್ಕಾಗಿ ಶ್ರೀ ಭಗೀರಥ ಉಪ್ಪಾರ ಸೇವಾ ಸಂಘ 50 ಸಾವಿರ ರೂ. ಆರ್ಥಿಕ ನೆರವು ನೀಡಿದೆ.

ಮೈಸೂರಿನ ಶಾರದಾದೇವಿನಗರದಲ್ಲಿರುವ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿರುವ ಶ್ರೀ ಭಗೀರಥ ಉಪ್ಪಾರ ಸೇವಾ ಸಂಘದ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ನಾಯ್ಡುನಗರದ ನಿವಾಸಿ ಆಟೋರಿಕ್ಷಾ ಚಾಲಕ ಶ್ರೀಕಂಠ ಹಾಗೂ ವರಲಕ್ಷ್ಮೀ ದಂಪತಿ ಪುತ್ರಿಯೂ ಆದ ಪ್ರತಿಭಾನ್ವಿತ ವಿದ್ಯಾರ್ಥಿನಿ ಎಸ್.ಯಶಸ್ವಿನಿ ಅವರನ್ನು ಸನ್ಮಾನಿಸಿ, ಆರ್ಥಿಕ ನೆರವಿನ ಚೆಕ್ ಹಾಗೂ ಪ್ರಶಂಸನಾ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಭಗೀರಥ ಉಪ್ಪಾರ ಸೇವಾ ಸಂಘದ ಅಧ್ಯಕ್ಷ ಡಾ. ಎ.ನಾಗರಾಜು, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ಖಜಾಂಚಿ ಸಿದ್ದಶೆಟ್ಟಿ, ಉಪಾಧ್ಯಕ್ಷ ಡಾ.ಗೋವಿಂದರಾಜು, ಶಿಕ್ಷಕರಾದ ಬಸವರಾಜು, ಸಿದ್ದಶೆಟ್ಟಿ, ಉಪನ್ಯಾಸಕ ಪಿ.ನಟರಾಜು, ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಪುರ ನಾಗರಾಜು, ಉಪಾಧ್ಯಕ್ಷ ಕನಕಗಿರಿ ಮಹದೇವ, ಕರಳಪುರ ರಾಜು, ಸಿಂಹವಾಹಿನಿ ಟ್ರಸ್ಟ್‌ನ ಮಲ್ಲೇಶ್, ಲಿಂಗರಾಜು, ಮರಿಸ್ವಾಮಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜನರೇ ಸ್ವಯಂ ಪ್ರೇರಣೆಯಿಂದ ಅಪಾಯಕಾರಿ ವಸ್ತು ಬಳಕೆ ನಿಲ್ಲಿಸಿದರೆ ಪರಿಸರ ಸಂರಕ್ಷಣೆ ಸಾಧ್ಯ

● ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಮತ ● ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಕೆ.ಎಂ.ಚಂದ್ರೇಗೌಡರಿಗೆ 'ಪರಿಸರ ಪ್ರಜ್ಞಾ ಪ್ರಶಸ್ತಿ' ಪ್ರದಾನ

ಮೈಸೂರು, ಜೂ.8(ಎಂಟಿವೈ)– ಪ್ಲಾಸ್ಟಿಕ್ ಸೇರಿದಂತೆ ಪರಿಸರಕ್ಕೆ ಹಾನಿಯುಂಟು ಮಾಡುವ ಅಪಾಯಕಾರಿ ವಸ್ತುಗಳ ಬಳಕೆಯನ್ನು ಜನ ಸ್ವಯಂ ಪ್ರೇರಣೆಯಿಂದ ಕೈಬಿಟ್ಟರೆ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯ ಎಂದು ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆ.ಪಿ. ನಗರದಲ್ಲಿರುವ ಒಡನಾಡಿ ಗಂಡು ಮಕ್ಕಳ ಪುನರ್ವಸತಿ ಕೇಂದ್ರದ ರಾಜಶೇಖರ ಕೋಟಿ ಸಭಾಂಗಣದಲ್ಲಿ ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ಹಾಗೂ ಒಡನಾಡಿ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ, ಪರಿಸರ ಪ್ರಜ್ಞಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಿತಿ ಮೀರಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಅಭಿವೃದ್ಧಿ ಹೊಂದಿದ ಅಮೇರಿಕದಂತಹ ದೇಶಗಳು ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಪರಿಸರ ನಾಶಕ್ಕೆ ಕಾರಣವಾಗಿವೆ. ಈ ಹಿಂದೆ ಭಾರತದಲ್ಲಿ ವಸ್ತುಗಳನ್ನು ಮರು ಬಳಕೆ ಮಾಡಲಾಗುತ್ತಿತ್ತು. ಈಗ ಭಾರತಕ್ಕೂ ಒಮ್ಮೆ ಬಳಸಿ ಬಿಸಾಡುವ ಮುಂದುವರೆದ ದೇಶಗಳ ರೋಗ ಅಂಟಿದೆ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ವಿಷಾದಿಸಿದರು.



ಮೈಸೂರಿನ ಜೆ.ಪಿ. ನಗರದಲ್ಲಿರುವ ಒಡನಾಡಿ ಗಂಡು ಮಕ್ಕಳ ಪುನರ್ವಸತಿ ಕೇಂದ್ರದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ವತಿಯಿಂದ ಕರ್ನಾಟಕ ಮಾಹಿತಿ ಹಕ್ಕು ಆಯೋಗದ ನಿವೃತ್ತ ಮುಖ್ಯ ಆಯುಕ್ತ ಕೆ.ಎಂ. ಚಂದ್ರೇಗೌಡ ಅವರಿಗೆ 'ಪರಿಸರ ಪ್ರಜ್ಞಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಶ್ರೀಮಂತರು, ನಗರವಾಸಿಗಳು ತಮ್ಮ ಕಾರು ಶುಚಿ ಮಾಡಲು, ಶ್ವಾನ ತೊಳೆಯಲು ಎಷ್ಟು ನೀರು ಬಳಸುತ್ತಾರೆ. ಲಾನ್‌ನಲ್ಲಿ ಹೂ ಗಿಡ ಫಳಫಳ ಹೊಳೆಯಲು ಎಷ್ಟು ರಾಸಾಯನಿಕ ಹಾಕುತ್ತಿದ್ದಾರೆ. ವಿವಾಹ ಸಮಾರಂಭಗಳಲ್ಲಿ ಶೇ.60 ಊಟವನ್ನು ಎಸೆಯಲಾಗುತ್ತದೆ. ಎಲ್ಲೆಡೆ ಪ್ಲಾಸ್ಟಿಕ್ ಬಾಟಲ್ ಬಳಕೆ ಕಾಣುತ್ತಿದ್ದೇವೆ. ಭೂಮಿ ಲೂಟಿ ಮಾಡುವುದನ್ನು ಮತ್ತು ದೌರ್ಜನ್ಯ ನಿಲ್ಲಿಸದಿದ್ದರೆ ಅಪಾಯ ಕಾದಿದೆ ಎಂದು ಎಚ್ಚರಿಸಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಪರಿಸರ ಪ್ರಜ್ಞೆ ಮರೆತಿದ್ದರಿಂದ ಜಾಗತಿಕ ತಾಪಮಾನ ಏರುತ್ತಿದೆ. ಅಂತರ್ಜಲ ಕುಸಿಯುತ್ತಿದೆ. ಇದರಿಂದ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದು ಹೇಳಿದರು.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮಾತನಾಡಿ, ಮನುಷ್ಯರು ಏನೂ ಮಾಡದೇ ಸುಮ್ಮನಿದ್ದರೆ ಪರಿಸರ ಚೆನ್ನಾಗಿರುತ್ತದೆ. ಪರಿಸರ ರಕ್ಷಣೆಯ ಹೆಸರಿನಲ್ಲಿ ಈಗ ಮಾಡುತ್ತಿರುವುದೆಲ್ಲಾ ವ್ಯರ್ಥ. ಪಶ್ಚಾತ್ತಾಪದಿಂದ ಪರಿಸರ ರಕ್ಷಣಾ ಕಾರ್ಯ ಮಾಡುತ್ತಿದ್ದೇವೆ. ಮರ–ಗಿಡ ಕಾಪಾಡಿದರೆ ಮನುಷ್ಯ ಉಳಿಯುತ್ತಾನೆ ಎಂದು ತಿಳಿಸಿದರು.

ಒಡನಾಡಿಯ ಪರಶುರಾಮ್ ಮಾತನಾಡಿ, ಪರಿಸರ ರಕ್ಷಣೆ ಮತ್ತು ಸ್ವಚ್ಛತೆಯನ್ನು ಪ್ರಾಣಿಗಳಿಂದ ಕಲಿಯಬೇಕು. ಲಾಭವೇ ಅಂತಿಮ ಗುರಿಯಾಗಿರುವಾಗ ಸಾಮಾಜಿಕ ಬದ್ಧತೆಯಿಂದ ಪರಿಸರ ಸಂರಕ್ಷಣೆಗೆ ಮುಂದಾದ ಬಿಲ್ಡ್ ಎಕ್ಸ್ ಕಾರ್ಯವನ್ನು ಶ್ಲಾಘಿಸಿದರು.

ಇದೇ ವೇಳೆ ಕರ್ನಾಟಕ ಮಾಹಿತಿ ಹಕ್ಕು ಆಯೋಗದ ನಿವೃತ್ತ ಮುಖ್ಯ ಆಯುಕ್ತ ಕೆ.ಎಂ.ಚಂದ್ರೇಗೌಡ ಅವರಿಗೆ 'ಪರಿಸರ ಪ್ರಜ್ಞಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ಕೃಷಿ ಆಂದೋಲನದ ಸಂಚಾಲಕ ಡಾ.ಸ್ವಾಮಿ ಆನಂದ್, ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ಅಧ್ಯಕ್ಷ ಎಂ.ಎಸ್.ಚಂದ್ರ, ಬಿಲ್ಡ್ ಎಕ್ಸ್ ಕಂಪನಿಯ ನಿರ್ದೇಶಕ ಪ್ರಕಾಶ್ ಡಿ, ಬ್ರಿಜೇಶ್ ಎ.ಸಿ ಇನ್ನಿತರರು ಪಾಲ್ಗೊಂಡಿದ್ದರು. ಇದಕ್ಕೂ ಮುನ್ನ ವರುಣ ಕೆರೆ ಬಳಿ 250 ಸಸಿಗಳನ್ನು ನೆಡುವ ಕಾರ್ಯಕ್ಕೆ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಚಾಲನೆ ನೀಡಿದರು.

ಪ್ರೇಕ್ಷಕರ ರಂಜಿಸಿದ ಕ್ರೇಜಿಸ್ಟಾರ್ ರವಿಚಂದ್ರನ್ ಗಾಯನೋತ್ಸವ



ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಗಾಯನೋತ್ಸವದಲ್ಲಿ ವಿವಿಧ ಕ್ಷೇತ್ರ ಗಣ್ಯರನ್ನು ಸನ್ಮಾನಿಸಲಾಯಿತು

ಮೈಸೂರು, ಜೂ.8(ಎಸ್‌ಪಿಎನ್)–ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಗಾನನಂದನ ಹಾಗೂ ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ವತಿಯಿಂದ ಏರ್ಪಡಿಸಿದ್ದ ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಗಾಯನೋತ್ಸವ ಶನಿವಾರ ನಡೆಯಿತು.

ಗಾಯಕರಾದ ಇಂದ್ರಾಣಿ ಅನಂತರಾಮ್, ಡಾ.ವೈ.ಡಿ. ರಾಜಣ್ಣ, ಡಾ.ಎ.ಎಸ್. ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ.ಎಸ್.ವಾಣಿ, ಗೀತಾಲಕ್ಷ್ಮೀ ಕಿಣಿ, ಸುಜಾತಾ ಜಯಕುಮಾರ್ ಅವರು ಹಿರಿಯ ನಟ ವಿ. ರವಿಚಂದ್ರನ್ ನಟಿಸಿರುವ ಚಿತ್ರಗೀತೆಗಳನ್ನು ಹಾಡಿ, ರಂಜಿಸಿದರಲ್ಲದೆ, ಪ್ರೇಮಲೋಕ ಮತ್ತಿತರ ಚಿತ್ರಗೀತೆಗಳಿಗೆ ಪ್ರೇಕ್ಷಕರಿಂದ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

ಇದಕ್ಕೂ ಮುನ್ನ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಅವರ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮವನ್ನು ಅಲೆಯನ್ಸ್ ಕ್ಲಬ್ ಜಿಲ್ಲಾ ರಾಜ್ಯಪಾಲ ಎಸ್. ವೆಂಕಟೇಶ್ ಉದ್ಘಾಟಿಸಿ ಮಾತನಾಡಿ, ಅಲೆಯನ್ಸ್ ಕ್ಲಬ್ ಗಾಯನೋತ್ಸವದ ಜೊತೆಗೆ ವೃದ್ಧಾಶ್ರಮ, ಅನಾಥಾಶ್ರಮಗಳಲ್ಲಿ ಸೇವಾ ಕಾರ್ಯಗಳನ್ನು ನಡೆಸಲಿದೆ. ಈ ಸೇವೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ವಿಪ್ರ ಮುಖಂಡ ಕೆ. ರಘುರಾಂ ವಾಜಪೇಯಿ. ಅಲೆಯನ್ಸ್ ಕ್ಲಬ್ ಪ್ರಾಂತೀಯ ಅಧ್ಯಕ್ಷ ಡಾ.ಬಿ.ಎನ್. ರವೀಶ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ತರಬೇತಿ ಕೇಂದ್ರದ ಉಪ ನಿರ್ದೇಶಕ ಡಾ.ಎಲ್.ರವಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಇಂದಿರಾ ವೆಂಕಟೇಶ್, ಸುನೀತಾ ಬೆಟ್ಟೇಗೌಡ. ಸೌಮ್ಯಾ ಇದ್ದರು. ಗಾನನಂದನ ತಂಡದ ಅಧ್ಯಕ್ಷ ಎನ್. ಬೆಟ್ಟೇಗೌಡ ಸ್ವಾಗತಿಸಿದರು.

ಬಿ.ಎಸ್. ಹೇಮಲತಾಗೆ ಪಿಹೆಚ್.ಡಿ



ಮೈಸೂರು: ಡಾ. ಜಿ.ಹೆಚ್. ನಾಗರಾಜ ಅವರ ಮಾರ್ಗದರ್ಶನದಲ್ಲಿ ಬಿ.ಎಸ್. ಹೇಮಲತಾ ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ

ಸಾಂಪ್ರದಾಯಿಕ ಶೈಲಿಯ ಬಿದಿರಿನ ಉತ್ಪನ್ನಗಳಿಗೆ ಆಧುನಿಕತೆಯ ಟಚ್



- ಕಾಲಕ್ಕೆ ತಕ್ಕಂತೆ ಬದಲಾದ ವಿನ್ಯಾಸ
- ಕೃಷಿಕರ ಲಾಭದಾಯಕ ಬೆಳೆ ಬಿದಿರು
- ಬಾಗಿನ ಕೊಡಲು ಮೊರವೇ ಬೇಕು

■ ಬಾಪುಲಿಂಗರಾಜ್ ಅರಸ್

ಮೈಸೂರು, ಜೂ.8– ಪ್ಲಾಸ್ಟಿಕ್, ಪಿಂಗಾಣಿ, ಫೈಬರ್, ಸ್ಟೀಲ್, ಅಲ್ಯೂಮಿನಿಯಂ ಸೇರಿದಂತೆ ಆಧುನಿಕತೆಯ ಅತ್ಯಾಕರ್ಷಕ ವಸ್ತುಗಳಿಗೆ ಪೈಪೋಟಿ ನೀಡದೆ ಬಿದಿರಿನ ವಸ್ತುಗಳು ಮಂಕಾಗಿ ನಶಿಸುವ ಕಾಲ ಬಂದಿದೆ ಎಂದು ಭವಿಷ್ಯ ನುಡಿಯಲಾಗಿತ್ತು. ಆದರೆ ಸಾಂಪ್ರದಾಯಿಕ ಶೈಲಿಯ ಬಿದಿರು ಉತ್ಪನ್ನಗಳಿಗೆ ಆಧುನಿಕತೆಯ ಟಚ್‌ನಿಂದಾಗಿ ಸುಧಾರಿಸಿಕೊಂಡು ಪರಿಣಾಮಕಾರಿ ಪೈಪೋಟಿಗಿಳಿದಿದೆ. ಪರಿಸರ ಸ್ನೇಹಿಯಾದ ಬಿದಿರಿನ ವಸ್ತುಗಳಿಗೆ ಈಗ ಭಾರಿ ಬೇಡಿಕೆ ಇದೆ.

ಸಾಂಪ್ರದಾಯಿಕ ಶೈಲಿಯಾದರೂ ಆಧುನಿಕತೆಗೆ ತಕ್ಕಂತೆ ಬದಲಾದ ಬಿದಿರಿನ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇದೆ. ಬೆಲೆ ದುಬಾರಿಯಾದರೂ ಜನರು ಖರೀದಿ ಮಾಡುತ್ತಿದ್ದಾರೆ.

ಬಿದಿರಿನಿಂದ ತಯಾರಾದ ಮನೆ ಬಳಕೆಯ ಬಾಗಿನ ಮೊರ, ಕುಕ್ಕೆ, ಇಡ್ಲಿ ಚಿಬ್ಲು, ಹೂವಿನ ಬುಟ್ಟಿ, ಪೆಟ್ಟಿಗೆಗಳು, ಜರಡಿಗಳು, ಬಿದಿರಿನ ಮನೆ, ಕರಕುಶಲ ವಸ್ತುಗಳು, ಬೀಸಣಿಗೆ, ಬೆತ್ತದ ಕೋಲು, ರಾಗಿ ಮುದ್ದೆ ಮಾಡುವ ಕೋಲು, ಮಣ್ಣು ಮತ್ತು ಗೊಬ್ಬರ ಎತ್ತಲು ಬಳಸುವ ಮಕರಿ, ಪುಸ್ತಕದ ಕಪಾಟು, ಮೇಜು, ಖುರ್ಚಿ, ಮಂಚ ಸೇರಿದಂತೆ ಹಲವು ರೀತಿಯ ಬೀರಿನ ಪೀಠೋಪಕರಣಗಳು ಮನೆಯ ನಿತ್ಯ ಬಳಕೆಯಲ್ಲಿತ್ತು.

ಗೌರಿ ಹಬ್ಬದಲ್ಲಂತೂ ಬಾಗಿನ ನೀಡುವ ಮೊರಗಳಿಗೆ ಭಾರಿ ಬೇಡಿಕೆ ಇದೆ. ಗೌರಿ ಹಬ್ಬದಲ್ಲಿ ಬಾಗಿನ ನೀಡಲು ಬಿದಿರಿನ ಮೊರವನ್ನೆ ಬಳಸುತ್ತಾರೆ. ಬಿದಿರಿಗೆ ಪರ್ಯಾಯವಾಗಿ ಪ್ಲಾಸ್ಟಿಕ್, ಫೈಬರ್ ಸೇರಿದಂತೆ ಹಲವು ರೀತಿಯ ಆಧುನಿಕ ವಸ್ತುಗಳು ಬಂದಿರಬಹುದು. ಆದರೆ ನಮ್ಮ ಮಹಿಳೆಯರು ಸಾಂಪ್ರದಾಯಿಕ ಬಾಗಿನ ನೀಡಲು ಬಿದಿರಿನ ಮೊರಗಳನ್ನೇ ಬಳಸುತ್ತಾರೆ.

ಆದರೆ ಇತ್ತೀಚಿಗೆ ಪ್ಲಾಸ್ಟಿಕ್, ಪಿಂಗಾಣಿ, ಫೈಬರ್, ಸ್ಟೀಲ್, ಅಲ್ಯೂಮಿನಿಯಂನಿಂದ ಮಾಡಿದ ಅತ್ಯಾಕರ್ಷಕ ವಸ್ತುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ನಗರ ಪ್ರದೇಶದ ಜನರು ಸೇರಿದಂತೆ ಗ್ರಾಮೀಣ ಪ್ರದೇಶದ ಜನರು ಇವುಗಳನ್ನು ಖರೀದಿ ಮಾಡಲು ಆರಂಭಿಸಿದರು. ಬಿದಿರಿನ ವಸ್ತುಗಳ ಜಾಗದಲ್ಲಿ ಆಧುನಿಕತೆಯ ವಸ್ತುಗಳು ಸ್ಥಾನ ಪಡೆದವು. ಇದರಿಂದ ಬಿದಿರಿನ ವಸ್ತುಗಳು ಮಂಕಾಯಿತು, ಬಿದಿರು ನಶಿಸುವ ಕಾಲ ಬಂದಾಯಿತು ಎಂದು ಹೇಳಲಾಗಿತ್ತು.

ಈ ಮೊದಲು ಕಾಡಿನಲ್ಲಿ ಬೆಳೆದ ಬಿದಿರು ತಂದು ಹಲವು ವಸ್ತುಗಳನ್ನು ತಯಾರಿಸಲಾಗುತ್ತಿತ್ತು. ಆದರೆ ಅರಣ್ಯಕ್ಕೆ ಕಾಲಿಡದಂತೆ ಕಟ್ಟುನಿಟ್ಟಿನ ಕಾನೂನು ಜಾರಿ ಮಾಡಿರುವುದು ಈ ವಾದವನ್ನು ಮತ್ತಷ್ಟು ಪುಷ್ಟೀಕರಿಸಿತ್ತು. ಆದರೆ ಆಧುನಿಕತೆಯ ಅತ್ಯಾಕರ್ಷಕ ವಸ್ತುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟರೂ ಬಿದಿರು ಮರೆಯಾಗಿಲ್ಲ. ಬಿದಿರು ಮೊದಲಿನಷ್ಟು ಬಳಕೆ ಇಲ್ಲದಿರಬಹುದು. ಆದರೆ ಬಿದಿರಿನ ವಸ್ತುಗಳಿಗೆ ಇರುವ ಮಹತ್ವ ಈಗಲೂ ಇದ್ದೇ ಇದೆ.

ಆನೆಗಳಿಗೆ ಬಿದಿರು ಅಚ್ಚುಮೆಚ್ಚಿನ ಆಹಾರ. ಈ ಹಿನ್ನೆಲೆ ಕಾಡಿನಲ್ಲಿ ಬಿದಿರು ಕಡಿಯದಿರಲು ಕಟ್ಟುನಿಟ್ಟಿನ ಕಾನೂನು ಜಾರಿ ಮಾಡಲಾಯಿತು. ಈ ಹಿನ್ನೆಲೆ ಬಿದಿರಿಗೆ ಭಾರಿ ಬೇಡಿಕೆ ಬಂದಿತು. ಇದರಿಂದ ಬಹಳಷ್ಟು ಕೃಷಿಕರು ಬಿದಿರು ಬೆಳೆಯಲಾರಂಭಿಸಿದರು. ಈಗ ಹಲವು ರೀತಿಯ ಲಾಭದಾಯಿಕ ವಾಣಿಜ್ಯ ಬೆಳೆಗಳಲ್ಲಿ ಬಿದಿರು ಕೂಡ ಒಂದಾಗಿದೆ.

ಮೈಸೂರಿನಲ್ಲಿ ಬಂಬೂ ಬಜಾರ್‌ನ ಮೇದರ್ ಬ್ಲಾಕ್‌ನಲ್ಲಿ ಹಲವು ರೀತಿಯ ಬಿದಿರಿನ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಈ ಮೂಲಕ ಬಿದಿರಿನ ಗುಡಿ ಕೈಗಾರಿಕೆ ಇನ್ನೂ ಜೀವಂತವಾಗಿದೆ. ಕೃಷಿಕರು ಬಿದಿರು ಬೆಳೆದು ಇವರಿಗೆ ಮಾರಾಟ ಮಾಡುತ್ತಾರೆ. ಬಿದಿರಿನ ವಸ್ತುಗಳ ತಯಾರಿಕೆ ಮತ್ತು ಮಾರಾಟ ಇವರ ಮೂಲ ವೃತ್ತಿಯಾಗಿದೆ.

ಆಧುನಿಕತೆಯ ಹಲವು ರೀತಿಯ ವಸ್ತುಗಳ ಮಾದರಿಯಂತೆ ಬಿದಿರಿನ ಹಲವು ವಸ್ತುಗಳನ್ನು ತಯಾರಿಸಲಾಗುತ್ತಿದೆ. ಬಿದಿರಿನಿಂದ ತಯಾರಿಸಿದ ಬಿಸಿಲ ಮ್ಯಾಟ್, ಮದುವೆ, ಹಬ್ಬಕ್ಕೆ ಬೇಕಾದ ಮೊರ, ಬೀಸಣಿಗೆ, ಕುಕ್ಕೆಗಳು, ಬೀಸಣಿಗೆ, ಟ್ರೀ ಗಾರ್ಡ್, ಟ್ರೇ, ಹೂವಿನ ಚಿಬ್ಲು, ಇಡ್ಲಿ ಚಿಬ್ಲು, ಬಲ್ಬ್‌ಗೆ ಹಾಕುವ ಬುಟ್ಟಿಗಳು, ಹೂವಿನ ಬೊಕ್ಕೆ, ಕಸ ಹಾಕುವ ಡಸ್ಟ್‌ಬಿನ್ ತಯಾರಿಸಿ ಮಾರಾಟ ಮಾಡಲಾಗುತ್ತಿದೆ.

ಗಿಡ ಹಾಗೂ ಬಳ್ಳಿಗಳನ್ನು ಹಬ್ಬಿಸಲು ಕೃಷಿಕರು ಈಗಲೂ ಬಿದಿರಿನ ಕಡ್ಡಿಗಳನ್ನು ಬಳಸುತ್ತಾರೆ. ಮನೆಯ ಬಾಗಿಲಿಗೆ ಬಿಸಿಲು ಬೀಳದಂತೆ ಬಿದಿರಿನ ಚಾಪೆ ಹಾಕಲಾಗುತ್ತದೆ. ಮೃತರ ಅಂತ್ಯಸಂಸ್ಕಾರಕ್ಕೆ ಈಗಲೂ ಬಿದಿರಿನಿಂದ ಮಾಡಿದ ಚಟ್ಟದ ಬಳಕೆ ಇದೆ. ಒಟ್ಟಾರೆ ಆಧುನಿಕ ಶೈಲಿಯಲ್ಲಿ ಬಿದಿರಿನ ಹಲವು ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ಬಿದಿರಿನ ಗುಡಿ ಕೈಗಾರಿಕೆ ಇನ್ನು ಜೀವಂತವಾಗಿದೆ. ಆಧುನಿಕತೆಯ ವಸ್ತುಗಳಿಗಿಂತ ಬಿದಿರಿನ ವಸ್ತುಗಳ ಬೆಲೆ ದುಬಾರಿಯಾದರೂ ಜನರು ಖರೀದಿ ಮಾಡುತ್ತಿದ್ದಾರೆ.

ನಮ್ಮ ಕಾಲಕ್ಕೆ ವೃತ್ತಿ ಕೊನೆಯಾಗಲಿ

“ಬಿದಿರಿನ ಉತ್ಪನ್ನಗಳ ತಯಾರು ಮಾಡಲು ನಮ್ಮ ಮಕ್ಕಳು ಆಸಕ್ತಿ ತೋರುತ್ತಿಲ್ಲ. ದೈಹಿಕವಾಗಿ ತುಂಬಾ ಶ್ರಮವಿರುವ ಕಾರಣ ನಮ್ಮ ಕಾಲಕ್ಕೇ ಈ ವೃತ್ತಿ ಕೊನೆಯಾಗಲಿ. ನಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಬೇರೆ ವೃತ್ತಿಗೆ ಹೋಗಲಿ ಎಂಬುದು ನಮ್ಮ ಬಯಕೆ.

ನಮ್ಮ ತಂದೆ, ತಾತ, ಮುತ್ತಾತನ ಕಾಲದಿಂದಲೂ ನಮ್ಮ ಕುಟುಂಬಕ್ಕೆ ಬಿದಿರಿನ ನಾನಾ ಉತ್ಪನ್ನ ತಯಾರಿಕೆಯೇ ಮೂಲ ವೃತ್ತಿಯಾಗಿದೆ. ಚಿಕ್ಕ ವಯಸ್ಸಿಂದ ಈ ವೃತ್ತಿ ನಮಗೆ ಒಲಿದು ಬಂದಿದೆ. ಆದರೆ ನಮ್ಮ ಮಕ್ಕಳ ಕಾಲಕ್ಕೆ ಈ ವೃತ್ತಿ ಬೇಡ.

ನಮಗೆ ಅಗತ್ಯವಾದಷ್ಟು ಬಿದಿರು ಸಿಗುತ್ತಿದೆ. ಕೊಡಗು, ಶಿವಮೊಗ್ಗದಿಂದ ಬಿದಿರು ತಂದು ಇಲ್ಲೇ ಮಾರಾಟ ಮಾಡಲಾಗುತ್ತಿದೆ. ಇದರಿಂದ ಬಿದಿರಿನ ಕೊರತೆ ಇಲ್ಲ. ಆಧುನಿಕ ಶೈಲಿಗೆ ತಕ್ಕಂತೆ ಬಿದಿರಿನ ವಸ್ತುಗಳನ್ನು ತಯಾರು ಮಾಡುತ್ತಿರುವ ಕಾರಣ ಜನರು ಖರೀದಿ ಮಾಡುತ್ತಿದ್ದಾರೆ. ಆಧುನಿಕತೆಯ ಯಾವುದೇ ವಸ್ತುಗಳು ಮಾರುಕಟ್ಟೆಗೆ ಬಂದಿದ್ದರೂ ನಮಗೆ ಆಗುವ ವ್ಯಾಪಾರಕ್ಕೆ ಧಕ್ಕೆಯಾಗಿಲ್ಲ.

ನಾವು ಕೈಯಿಂದಲೇ ಬಿದಿರಿನ ವಸ್ತುಗಳನ್ನು ತಯಾರಿಸುತ್ತೇವೆ. ಆದರೆ ಅಸ್ಸಾಂ, ಮೇಘಾಲಯ, ಮಣಿಪುರ ಸೇರಿದಂತೆ ಇತರೆಡೆ ಬಿದಿರಿನ ವಸ್ತುಗಳನ್ನು ಯಂತ್ರಗಳಿಂದ ತಯಾರಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿದಿರಿನ ವಸ್ತುಗಳಿಗೆ ತುಂಬಾ ಬೇಡಿಕೆ ಇದೆ. ಆದರೆ ನಮ್ಮ ಮಕ್ಕಳು ಈ ವೃತ್ತಿಯಲ್ಲಿ ಸಾಗಲು ಆಸಕ್ತಿ ತೋರದ ಕಾರಣ ಭವಿಷ್ಯದಲ್ಲಿ ಬಿದಿರಿನ ಮಹತ್ವ ಎಷ್ಟಿರುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ.

–ಕಮಲ, ಬಿದಿರಿನ ವಸ್ತುಗಳನ್ನು ತಯಾರಿಸುವವರು

ಪರಿಸರ ಸಂರಕ್ಷಣೆ ಕುರಿತು ಜಾಗೃತಿ



ಮೈಸೂರು, ಜೂ.8– ಪರಿವರ್ತನ ಬಿಸಿನೆಸ್ ಸ್ಕೂಲ್ ವತಿಯಿಂದ, ರಂಗನತಿಟ್ಟು ಪಕ್ಷಿಧಾಮದ ಸಹಯೋಗದಲ್ಲಿ ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ರಮಣೀಯವಾದ ರಂಗನತಿಟ್ಟು ಪಕ್ಷಿಧಾಮದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗಿಡ ನೆಡುವ ಕಾರ್ಯಕ್ರಮ, ಅರಣ್ಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪ್ರಕೃತಿ ನಡಿಗೆ, ಜೀವವೈವಿಧ್ಯ ಮತ್ತು ಸುಸ್ಥಿರ ಅಭ್ಯಾಸಗಳ ಕುರಿತು ಸಂವಾದಾತ್ಮಕ ವಿಚಾರ ಸಂಕಿರಣ ನಡೆಯಿತು. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿ, ಪರಿಸರ ಉಸ್ತುವಾರಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು.

ರಂಗನತಿಟ್ಟುವಿನ ಅರಣ್ಯ ಅಧಿಕಾರಿಗಳು ಸಭೆಯನ್ನುದ್ದೇಶಿಸಿ ಮಾತನಾಡಿ, ಪರಿಸರ ಸಮತೋಲನವನ್ನು ಕಾಪಾಡುವಲ್ಲಿ ಜೌಗು ಪ್ರದೇಶಗಳು ಮತ್ತು ಪಕ್ಷಿಧಾಮಗಳ ನಿರ್ಣಾಯಕ ಪಾತ್ರವನ್ನು ಒತ್ತಿ ಹೇಳಿದರು. ಭಾಗವಹಿಸುವವರು ತಮ್ಮ ದೈನಂದಿನ ಜೀವನದಲ್ಲಿ ಹಸಿರು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಪ್ರತಿಜ್ಞೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

2025ರ ವಿಶ್ವ ಪರಿಸರ ದಿನವು ಪ್ಲಾಸ್ಟಿಕ್ ಮಾಲಿನ್ಯವನ್ನು ಎದುರಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಇತ್ತೀಚಿನ ಸಂಶೋಧನೆಗಳು ಮಾನವನ ದೇಹ ಸೇರಿದಂತೆ ಭೂಮಿಯ ಮೇಲಿನ ಬಹುತೇಕ ಎಲ್ಲದರಲ್ಲೂ ಸೂಕ್ಷ್ಮ ಪ್ಲಾಸ್ಟಿಕ್ ಅಂಶ ಇದೆ ಎಂದು ಸೂಚಿಸಿವೆ. 2025ರ ವಿಶ್ವ ಪರಿಸರ ದಿನವು ಪ್ಲಾಸ್ಟಿಕ್ ಅನ್ನು ನಿಭಾಯಿಸಲು ಕ್ರಮ ಕೈಗೊಳ್ಳಲು ಕರೆ ನೀಡಲಾಗಿದೆ.

ರಂಗೋಲಿಯಲ್ಲಿ ಮೂಡಿದ ನಾಲ್ವಡಿ

ಮೈಸೂರು, ಜೂ.8(ಎಸ್‌ಪಿಎನ್)– ಮೈಸೂರು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಕಲಾವಿದ ಪುನೀತ್ ಮತ್ತು ತಂಡ ಸತತ 12 ಗಂಟೆ ಶ್ರಮಿಸಿ 8 ಸಾವಿರ ಚದರಡಿಯಲ್ಲಿ ನಾಲ್ವಡಿ ಅವರ ಬೃಹತ್ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಲಾಯಿತು.

ಕಲಾವಿದರಾದ ಪುನೀತ್, ಸಿ. ಲಕ್ಷ್ಮೀ, ಪಿ. ಆದಿತ್ಯ, ಸಿ. ಸಂಪ್ರೀತ್, ಸಂಜಯ್ ಅವರು ಸತತ ಶ್ರಮದಿಂದ ನಾಲ್ವಡಿ ಅವರ ಚಿತ್ರ ಬಿಡಿಸಿ ಎಲ್ಲರ ಗಮನ ಸೆಳೆದರು.

ಈ ವೇಳೆ ಶಾಂತಲಾ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂ.ಎಸ್.ಸಂತೋಷ್ ಕುಮಾರ್ ಮಾತನಾಡಿ, ನಾಡಿನ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಂಗೋಲಿಯಲ್ಲಿ ಬಿಡಿಸಿ ಸ್ಮರಿಸಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ರಾಷ್ಟ್ರೀಯ ಆರಕ್ಷಕ್ ಮಂಚ್ ಅಧ್ಯಕ್ಷ ಗೋಪಾಲ್ ಕೃಷ್ಣ, ಉದ್ಯಮಿ ಚೆಲುವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬೃಹತ್ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿದ ಕಲಾವಿದರು.

ಮೈಸೂರು ಪೊಲೀಸರ 12 ಗರುಡ ಗಸ್ತು ವಾಹನಗಳು ಗುಜರಿಗೆ!

- 6 ವಾಹನಗಳು ಮಾತ್ರ ಕಾರ್ಯನಿರ್ವಹಣೆ
- 15 ವರ್ಷ ಮೇಲ್ಪಟ್ಟ ವಾಹನಗಳ ಬಳಕೆ ನಿರ್ಬಂಧ
- ಆರ್‌ಟಿಓದಲ್ಲಿ ಈ ವಾಹನಗಳಿಗೆ ಎಫ್‌ಸಿ ಕೂಡ ನೀಡಲ್ಲ
- ಕ್ಷಿಪ್ರ ಕಾರ್ಯ ನಿರ್ವಹಣೆಗೆ ಹೆಸರಾಗಿದ್ದ 'ಗರುಡ' ಇನ್ನು ನೆನಪು

ಮೈಸೂರು, ಜೂ.8(ಬಿಎಲ್‌ಯು, ಆರ್‌ಕೆ)– ಏನಾದರೂ ಸಮಸ್ಯೆಯಾದಾಗ ಸ್ಥಳಕ್ಕೆ ತಕ್ಷಣ 'ಗರುಡ' ವಾಹನದಲ್ಲಿ ಪೊಲೀಸರು ಧಾವಿಸುತ್ತಿದ್ದರು. ರಸ್ತೆಗಳಲ್ಲಿ ಗಲಾಟೆ ಮಾಡುತ್ತಿದ್ದವರು 'ಗರುಡ' ಕಾಣುತ್ತಿದ್ದಂತೆ ಗಪ್‌ಚುಪ್ ಆಗುತ್ತಿದ್ದರು. ತೊಂದರೆಯಾದಾಗ ಗರುಡಾಗೆ ಕರೆ ಮಾಡಿ ಎನ್ನುತ್ತಿದ್ದರು. ಹೀಗೆ ಮೈಸೂರಿನ ಜನಮಾನಸದಲ್ಲಿ ಅಚ್ಚೊತ್ತಿದ್ದ 'ಗರುಡ' ವಾಹನಗಳು ತಮ್ಮ ಸೇವೆ ಮುಗಿಸಿ, ಇತಿಹಾಸ ಪುಟ ಸೇರುತ್ತಿವೆ.

ಹೌದು, ನಗರದಲ್ಲಿ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸುವುದರ ಜೊತೆಗೆ ಕಾನೂನು ಸುವ್ಯವಸ್ಥೆ ನಿರ್ವಹಣೆ ನಿಟ್ಟಿನಲ್ಲಿ ಕ್ಷಿಪ್ರಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪೊಲೀಸ್ ಗರುಡ ವಾಹನಗಳ ಸರದಿ ಅಂತ್ಯವಾಗಿದೆ. 15 ವರ್ಷ ಪೂರೈಸಿರುವ 12 ವಾಹನಗಳನ್ನು ಈಗಾಗಲೇ ಸೇವೆಯಿಂದ ಹಿಂದಕ್ಕೆ ಪಡೆಯಲಾಗಿದೆ. ಇನ್ನುಳಿದ 6 ಗರುಡ ವಾಹನಗಳೂ ಸೇವೆಯನ್ನು ಮುಗಿಸುವ ಹಂತದಲ್ಲಿವೆ.

ಗಲಾಟೆ, ಗದ್ದಲ, ಸರಗಳ್ಳತನ, ಕೊಲೆ, ಸುಲಿಗೆ ಸೇರಿದಂತೆ ಯಾವುದೇ ಅಪರಾಧ ಪ್ರಕರಣ ನಡೆದರೂ ಕೆಲವೇ ಕ್ಷಣಗಳಲ್ಲಿ ಗರುಡ ವಾಹನದಲ್ಲಿ ಪೊಲೀಸರು ಹಾಜರಾಗುತ್ತಿದ್ದರು. ಇದರಿಂದ ಮೈಸೂರಿನ ಜನರಿಗೆ ಗರುಡ ವಾಹನಗಳು ಚಿರಪರಿಚಿತವಾಗಿದ್ದವು. ಆದರೆ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 18 ಗರುಡ ವಾಹನಗಳಲ್ಲಿ ಸೇವೆ ಮುಗಿಸಿರುವ 12 ವಾಹನಗಳು ರೇಸ್ ಕೋರ್ಸ್ ಹಿಂಭಾಗದ ಸಿಎಆರ್ ಮೈದಾನದಲ್ಲಿ ನಿಂತಿವೆ. ಇವು ಕೆಲವೇ ದಿನಗಳಲ್ಲಿ ನಿಯಮಾನುಸಾರ ಗುಜರಿ ಸೇರಲಿವೆ. ಉಳಿದ 6 ಗರುಡ ವಾಹನಗಳ ಸೇವೆಯೂ ಆರು ತಿಂಗಳಲ್ಲಿ ಮುಕ್ತಾಯವಾಗಲಿದ್ದು, ಈ ಮೂಲಕ ಪೊಲೀಸ್ ಗರುಡ ವಾಹನಗಳು ನೆನಪಿನ ಪುಟ ಸೇರಲಿವೆ.

ನಿಯಮಾನುಸಾರ ಈ ಕ್ರಮ: ಕೇಂದ್ರ ಸರ್ಕಾರ ಸ್ಕ್ರ್ಯಾಪೇಜ್ ನೀತಿಯ ಅನುಸಾರ ನೋಂದಣಿಯಾದಾಗಿನಿಂದ 15 ವರ್ಷ ಪೂರ್ಣಗೊಳಿಸಿದ ವಾಹನಗಳನ್ನು ಫಿಟ್‌ನೆಸ್(ಎಫ್‌ಸಿ) ಪರೀಕ್ಷೆಗೆ ಒಳಪಡಿಸುವುದು ಕಡ್ಡಾಯ. ಪರಿಸರ ಸಂರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದ 15 ವರ್ಷ ಮೀರಿದ ವಾಹನಗಳ ಬಳಕೆಯನ್ನು ಈಗ ನಿರ್ಬಂಧಿಸಲಾಗಿದೆ. ಸುಪ್ರೀಂಕೋರ್ಟ್ ಕೂಡ ಈ ಕ್ರಮವನ್ನು ಎತ್ತಿ ಹಿಡಿದಿದೆ. ಆದ್ದರಿಂದ ಅಂತಹ ವಾಹನಗಳಿಗೆ ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಎಫ್‌ಸಿ ಕೂಡ ಸಿಗುವುದಿಲ್ಲ. ಈ ನಿಯಮ ಸರ್ಕಾರಿ ವಾಹನಗಳಿಗೂ ಅನ್ವಯವಾಗುವುದರಿಂದ ಮೈಸೂರು ಪೊಲೀಸರು, ಗರುಡ ವಾಹನಗಳನ್ನು ನಿವೃತ್ತಿಗೊಳಿಸಿದ್ದಾರೆ. ಒಂದು ಕಾಲದಲ್ಲಿ ತ್ವರಿತ ಪ್ರತಿಕ್ರಿಯೆ ಮತ್ತು ಕಾನೂನು ಜಾರಿ ಸಿಬ್ಬಂದಿಯನ್ನು ಸಂಕೇತಿಸುತ್ತಿದ್ದ ಗರುಡ ಜೀಪ್‌ಗಳ ಮಾದರಿಯ ವಾಹನಗಳನ್ನೇ ಮುಂದೆಯೂ ಬಳಸುವ ಚಿಂತನೆಯಲ್ಲಿದ್ದಾರೆ.

ಗರುಡ ವಿಶೇಷತೆ: ಕೆಲ ವರ್ಷಗಳ ಹಿಂದೆ 100 ಸಂಖ್ಯೆಗೆ ಕರೆ ಮಾಡಿದರೆ ತಕ್ಷಣ ಗರುಡ ವಾಹನ ಧಾವಿಸುತ್ತಿತ್ತು. ಆ ವಾಹನದ ಸೈರನ್ ಶಬ್ದವನ್ನು ಜನ ಮರೆತಿಲ್ಲ. ಗರುಡ ವಾಹನದಲ್ಲಿ ಪೊಲೀಸರಿಗೆ ಅವಶ್ಯವಾದ ಪರಿಕರಗಳು, ಪ್ರಥಮ ಚಿಕಿತ್ಸೆಯ ಕಿಟ್, ಆಸ್ಪತ್ರೆಗೆ ಕರೆದೊಯ್ಯಲು ಸ್ಟ್ರೆಚರ್ ಇರುತ್ತಿತ್ತು. ಪ್ರತಿಯೊಂದು ಗರುಡ ವಾಹನದಲ್ಲೂ ಒಬ್ಬ ಹೆಡ್ ಕಾನ್ಸ್‌ಟೇಬಲ್, ಇಬ್ಬರು ಕಾನ್ಸ್‌ಟೇಬಲ್‌ಗಳು ಗಸ್ತು ತಿರುಗುತ್ತಿದ್ದರು. ಅಪರಾಧ ಚಟುವಟಿಕೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ವಹಿಸುತ್ತಿದ್ದರು.



ಪ್ರಸ್ತುತ 33 ಗಸ್ತು ವಾಹನಗಳಿವೆ



ನಿಯಮಾನುಸಾರ 15 ವರ್ಷ ಮೇಲ್ಪಟ್ಟ ಗರುಡ ವಾಹನಗಳ ಬಳಕೆ ನಿಲ್ಲಿಸಲಾಗಿದೆ. 15 ವರ್ಷದ ನಂತರ ಒಂದು ದಿನವೂ ನಾವು ಬಳಕೆ ಮಾಡಿಲ್ಲ. ಕಾನೂನು ಜಾರಿಗೊಳಿಸುವುದು ಕರ್ತವ್ಯ ನಿರ್ವಹಿಸುವ ನಾವು, ಆ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದೇವೆ. ಪ್ರಸ್ತುತ ನಮ್ಮಲ್ಲಿ 6 ಗರುಡ ಜೀಪ್‌ಗಳು, 7 ಹೆದ್ದಾರಿ ಗಸ್ತು ವಾಹನಗಳು ಮತ್ತು 20 ಇಆರ್‌ಎಸ್‌ಎಸ್–112(ತುರ್ತು ಪ್ರತಿಕ್ರಿಯೆ ವ್ಯವಸ್ಥೆ) ವಾಹನಗಳು ಸೇರಿದಂತೆ ಒಟ್ಟು 33 ಗಸ್ತು ವಾಹನಗಳಿವೆ. ಕಣ್ಗಾವಲು ಮತ್ತು ಅಪರಾಧ ನಿಯಂತ್ರಣಕ್ಕಾಗಿ ಈ ಎಲ್ಲಾ ವಾಹನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದೇವೆ. ಹಾಗಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಯಲ್ಲಿ ವಾಹನಗಳ ಕೊರತೆ ಇಲ್ಲ.

-ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ